

ಮಹಾನ್ ಕಲಾವಿದ

# ಅಳಿಕೆ ರಾಮಯ್ಯ ರೈ

## ಶತಕ ಸ್ಮೃತಿ


ಸಂಪಾದಕರು

ಭಾಸ್ಕರ ರೈ ಕುಕ್ಕುವಳ್ಳಿ, ಪಿ. ಕಿಶನ್ ಹೆಗ್ಡೆ



ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

ಬೆಂಗಳೂರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ



ಕರ್ನಾಟಕ ಸರಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಮಹಾನ್ ಕಲಾವಿದ

# ಅಳಿಕೆ ರಾಮಯ್ಯ ರೈ

## ಶತಕ ಸ್ಮೃತಿ

ಸಂಪಾದಕರು

**ಭಾಸ್ಕರ ರೈ ಕುಕ್ಕುವಳ್ಳಿ**

**ಪಿ. ಕಿಶನ್ ಹೆಗ್ಡೆ**

ಕರ್ನಾಟಕ
ಯಕ್ಷಗಾನ ಬಯಲಾಟ
ಅಕಾಡೆಮಿ
ಕನ್ನಡ ಭವನ, ಜಯಚಾಮರಾಜೇಂದ್ರ ರಸ್ತೆ
ಬೆಂಗಳೂರು – 560 002

ಮಹಾನ್ ಕಲಾವಿದ
ಅಳಿಕೆ ರಾಮಯ್ಯ ರೈ
ಶತಕ ಸ್ಮೃತಿ

**MAHAN KALAVIDA**
**ALIKE RAMAYYA RAI**
**SHATHAKA SMRUTHI**
A collection of articles published to commemorate the birth centenary of the great Yakshagana Artist Alike Ramayya Rai

Editors
**Bhaskara Rai Kukkuvalli**
**P. Kishan Hegde**

Published by
**S.H. Shivarudrappa**
Registrar
Karnataka Yakshagana Bayalata Academy
2nd Block, Chalukya Block, Kannada Bhavana
Jayachamarajendra Road, Bengaluru - 560 002
Tel. : 0820 22113146

| | | |
|---|---|---|
| First Published | : | 2017 |
| © | : | Concerned Authors |
| Copies | : | 500 |
| Paper used | : | 80 gsm maplitho |
| Size | : | Demy 1/8 |
| Pages | : | viii+76 |
| Price | : | Rs. 100 |
| Photos | : | **Alike Family, Yakshathilaka, Manohar Kunder & Sudhakara Jain** |
| Cover Design | : | **Kallur Nagesh** |
| Pages designed & Printed at | : | **Aakrithi Prints**<br>Light House Hill Road<br>Mangaluru - 575 001<br>Phone : 0824 2443002 |

# ಅಧ್ಯಕ್ಷರ ಅರಿಕೆ

ಕರ್ನಾಟಕ ಯಕ್ಷಗಾನ–ಬಯಲಾಟ ಅಕಾಡೆಮಿಯು ಸಂಕಲ್ಪಿಸಿರುವ ಒಂದು ಯೋಜನೆ – ಹಿರಿಯ ಕಲಾ ಸಾಧಕರ ಜನ್ಮ ಶತಮಾನದ ಆಚರಣೆ. ಅದರ ಅಂಗವಾಗಿ ಸಂಸ್ಮರಣೆ, ಕಲಾ ಪ್ರದರ್ಶನಗಳು ಮತ್ತು ಸಾಧಕರ ಕುರಿತಾದ ಕಿರು ಹೊತ್ತಗೆಗಳ ಪ್ರಕಟನೆ.

ಈ ಯೋಜನೆಯಲ್ಲಿ ಈ ವರ್ಷಕ್ಕೆ ಜನ್ಮ ಶತಮಾನ ಪೂರ್ಣಗೊಳ್ಳುವ ಮತ್ತು ನೂರ ಒಂದು, ನೂರ ಎರಡನೆಯ ಜನ್ಮ ವರ್ಷಗಳು ಪೂರ್ಣಗೊಳ್ಳುವ ಸಾಧಕರ ಶತಮಾನ ಆಚರಣೆಯನ್ನು ಕೈಗೊಳ್ಳುವುದಾಗಿ ನಿರ್ಧರಿಸಿ ಕಾರ್ಯಪ್ರವೃತ್ತರಾಗಿದ್ದೇವೆ.

ಯಕ್ಷಗಾನ ಕ್ಷೇತ್ರದ ಮಹಾನ್ ಕಲಾವಿದರಲ್ಲೊಬ್ಬರು ಶ್ರೀ ಅಳಿಕೆ ರಾಮಯ್ಯ ರೈಗಳವರು. ಅವರ ಕುರಿತಾಗಿ ನಾನು ಬಹಳಷ್ಟು ಪ್ರಖ್ಯಾತಿಯನ್ನು ಕೇಳಿದ್ದೇನೆ. ಅವರನ್ನು ಕಾಣುವ ಭಾಗ್ಯವೊದಗದಿದ್ದರೂ, ನನ್ನ ಅಧ್ಯಕ್ಷತೆಯ ಅವಧಿಯಲ್ಲಿ ಅವರ ಶತಮಾನದ ಕಾರ್ಯಕ್ರಮ ಒದಗಿ ಬಂದುದು ಸುಯೋಗವೆಂದು ಭಾವಿಸುತ್ತೇನೆ.

ತುಂಬ ಕಡಮೆ ಅವಧಿಯಲ್ಲಿ ಸಂಘಟಿಸಬೇಕಾಗಿ ಬಂದ ಈ ಕಾರ್ಯಕ್ರಮವನ್ನು ಶೀಘ್ರವಾಗಿ ಮತ್ತು ಸಮರ್ಥವಾಗಿ ಸಂಯೋಜಿಸಿದವರು ಅಕಾಡೆಮಿಯ ನಮ್ಮ ಸದಸ್ಯ ಮಿತ್ರ, ಪ್ರಮುಖ ಕಲಾ ಸಂಘಟಕರಾದ ಶ್ರೀ ಪಿ. ಕಿಶನ್ ಹೆಗ್ಡೆ ಅವರು. ಅವರ ಮತ್ತು ಇವರ ಸಹಯೋಗಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಪುಸ್ತಕದ ಸಂಪಾದಕರು, ಮುದ್ರಕರು, ಶತಮಾನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಎಲ್ಲರಿಗೆ ನಮ್ಮ ಕೃತಜ್ಞತೆಗಳು.

ಬೆಂಗಳೂರು
ಅಗೋಸ್ತು 10, 2017

**ನಾಡೋಜ ಬೆಳಗಲ್ಲು ವೀರಣ್ಣ**
ಅಧ್ಯಕ್ಷ
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

# ಸಂಚಾಲಕರ ನುಡಿ

ಯಕ್ಷಗಾನ ಬಯಲಾಟ ಕ್ಷೇತ್ರಗಳಲ್ಲಿ ಉನ್ನತ ಸಾಧನೆಗೈದ ಹಿರಿಯರ ಶತಮಾನೋತ್ಸವ ಸರಣಿಯನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸುವ ಅಕಾಡೆಮಿಯ ಯೋಜನೆಯಂತೆ ಈ ಪುಸ್ತಕವು ಹೊರಬರುತ್ತಿದೆ.

ಯಕ್ಷಗಾನ ತೆಂಕು ತಿಟ್ಟಿನ ಶ್ರೇಷ್ಠ ಕಲಾವಿದರಲ್ಲಿ ಓರ್ವರೆಂದು ಖ್ಯಾತರಾಗಿ ನಮಗೆಲ್ಲ ಅಭಿಮಾನ ಪಾತ್ರರಾದ ಸಾರ್ಥಕ ಕಲಾ ಸೇವೆಗೈದವರಾದ ದಿ. ಅಳಿಕೆ ರಾಮಯ್ಯ ರೈ (1915–1989) ಅವರ ಜನ್ಮ ಶತಮಾನ ಆಚರಣೆಯಾಗಿ ಮಂಗಳೂರಿನ ಶ್ರೀ ಮಂಗಳಾದೇವಿ ಸನ್ನಿಧಿಯಲ್ಲಿ ಈ ಗ್ರಂಥದ ಲೋಕಾರ್ಪಣೆ, ಜತೆಯಲ್ಲಿ ಸಂಸ್ಮರಣ ಸಭೆ, ತಾಳಮದ್ದಳೆ, ಯಕ್ಷಗಾನ ಪ್ರದರ್ಶನಗಳನ್ನು ಆಯೋಜಿಸುವ ಹೊಣೆಯು ಒಂದು ಸೌಭಾಗ್ಯವೆಂದು ಭಾವಿಸುತ್ತೇನೆ.

ವಾಸ್ತವವಾಗಿ, ಈ ಪುಸ್ತಕವು ಮಿತ್ರರೂ, ಅಳಿಕೆಯವರ ಅಭಿಮಾನಿಗಳೂ ಆದ ಶ್ರೀ ಬೆಳ್ಳಾರೆ ವಸಂತ ಶೆಟ್ಟಿಯವರು (ನವದೆಹಲಿ) ಸಂಯೋಜಿಸಿ ಪ್ರಕಾಶಿಸಿದ 'ಅಳಿಕೆ' ಗ್ರಂಥದ ಕೆಲವು ಲೇಖನಗಳ ಮತ್ತು ಉದ್ಧರಣಗಳ ಸಂಕಲನ. ಜತೆಯಲ್ಲಿ ಈ ಪುಸ್ತಕಕ್ಕಾಗಿಯೆ ನಾವು ವಿನಂತಿಸಿ ಬರೆಯಿಸಿದ ಕೆಲವು ಲೇಖನಗಳೂ ಇಲ್ಲಿವೆ.

ಅಳಕೆ ಅವರ ಸಾಧನೆ ದಾಖಲಿಸಲು ಬಲು ದೊಡ್ಡ ಗ್ರಂಥವೇ ಬೇಕು. ಆದರೆ ಸಮಯದ ತೀರ ಒತ್ತಡ ಮತ್ತು ನಮ್ಮ ಯೋಜನೆಯ ಮಿತಿಯೊಳಗೆ ಪುಸ್ತಕ ಪ್ರಕಟವಾಗುತ್ತಿದೆ. ಇಷ್ಟನ್ನಾದರೂ ಮಾಡಲು ಸಾಧ್ಯವಾದುದು, ಸಮಾಧಾನದ ಸಂಗತಿ.

ಈ ಪ್ರಕಟನೆಯ ಸಂಪಾದಕರಾಗಿ ಸಹಕರಿಸಿದ ಹಿರಿಯ ಅರ್ಥದಾರಿ, ಸಂಘಟಕ, ಲೇಖಕ, ಮಿತ್ರರಾದ ಭಾಸ್ಕರ ರೈ ಕುಕ್ಕುವಳ್ಳಿ ಅವರಿಗೆ ವಂದನೆಗಳು.

ಪುಸ್ತಕದ ಮುದ್ರಣ ಕಾರ್ಯವನ್ನು ವಿಶೇಷ ಆಸ್ತಿಯಿಂದ ಶೀಘ್ರವಾಗಿ

ಕೈಗೊಂಡು ನೆರವೇರಿಸಿದ, ನಾಡಿನ ಮುದ್ರಣ ಕ್ಷೇತ್ರದಲ್ಲಿ ಹೆಸರಾಂತ ಕಲ್ಲೂರು ನಾಗೇಶ, ಆಕೃತಿ ಪ್ರಿಂಟ್ಸ್ ಮಂಗಳೂರು ಮತ್ತು ಅವರ ಬಳಗಕ್ಕೆ ನಮನಗಳು. ಲೇಖಕರೆಲ್ಲರಿಗೆ ವಂದನೆಗಳು.

ಅಳಿಕೆ ಶತಮಾನ ಕಾರ್ಯಕ್ರಮಕ್ಕೆ ಪ್ರೀತಿಯಿಂದ ಸ್ಥಳಾವಕಾಶವಿತ್ತು ಪ್ರೋತ್ಸಾಹಿಸಿದ, ಶ್ರೀ ಮಂಗಳಾದೇವಿ ದೇವಸ್ಥಾನದ ಆಡಳಿತ ಮೊಕ್ತೇಸರರಾದ ಶ್ರೀ ಬಿ. ರಮಾನಾಥ ಹೆಗ್ಡೆ ಮತ್ತು ಬಳಗಕ್ಕೆ ನಾವು ಆಭಾರಿಗಳು. ಭಾಗವಹಿಸಿದ ಅತಿಥಿಗಳಿಗೆ, ಕಲಾವಿದರಿಗೆ, ಪ್ರತ್ಯಕ್ಷ ಪರೋಕ್ಷ ಸಹಕಾರ ನೀಡಿದ ಸಕಲರಿಗೆ ನಮಸ್ಕಾರಗಳು.

ಮಂಗಳೂರು
10 ಆಗಸ್ಟ್ 2017

**ಪಿ. ಕಿಶನ್ ಹೆಗ್ಡೆ**
ಸದಸ್ಯ – ಸಂಚಾಲಕ

**ಋಣಸೂಚಿ**

ಈ ಪುಸ್ತಕದ ಹೆಚ್ಚಿನ ಲೇಖನಗಳು ಶ್ರೀ ಬೆಳ್ಳಾರೆ ವಸಂತ ಶೆಟ್ಟಿ ಅವರ ನೇತೃತ್ವದಲ್ಲಿ 2012ರಲ್ಲಿ ಪ್ರಕಟಿತವಾದ 'ಅಳಿಕೆ' ಯಕ್ಷಗಾನದ ಮೇರು ಕಲಾವಿದ ಅಳಿಕೆ ರಾಮಯ್ಯ ರೈ ಸ್ಮೃತಿ ಕೃತಿ ಗ್ರಂಥದಿಂದ ಆರಿಸಿದವುಗಳು.

ಗ್ರಂಥದ ಸಂಪಾದಕರು :
ಡಾ. ಬಿ. ನಿತ್ಯಾನಂದ ಶೆಟ್ಟಿ, ವಸಂತ ಶೆಟ್ಟಿ ಬೆಳ್ಳಾರೆ,
ಕೆ. ಬಾಲಕೃಷ್ಣ ನಾಯಕ್, ಡಾ. ವೈ. ಅವನೀಂದ್ರನಾಥ ರಾವ್.
ಪ್ರಕಾಶನ : ದೆಹಲಿ ಮಿತ್ರ
ಫ್ಲಾಟ್ ನಂಬರ್ 11 ಬಿ, 188/189, ಜವಾಹರ ಪಾರ್ಕ್, ಖಾನ್ಪುರ,
ದೇವ್ಲಿ ರಸ್ತೆ, ನವದೆಹಲಿ – 110062
ಇವರೆಲ್ಲರಿಗೆ ನಮ್ಮ ವಿಶೇಷ ಕೃತಜ್ಞತೆಗಳು.

**ತುಂಬ ಅವಸರದ ಈ ಪ್ರಕಟನೆಯ ಯೋಜನೆಗೆ, ನಮ್ಮ ಕೇಳಿಕೆಯನ್ನು ಮನ್ನಿಸಿ ಪರಿಕಲ್ಪನೆಯಿಂದ ತೊಡಗಿ, ಸಂಪಾದನ, ಮುದ್ರಣಗಳವರೆಗೆ ಹಾರ್ದಿಕ ಸಹಯೋಗ ಮತ್ತು ದುಡಿಮೆಯನ್ನು ನೀಡಿದ–ಹಿರಿಯ ಸಾಂಸ್ಕೃತಿಕ ಚಿಂತಕ, ಅರ್ಥದಾರಿ, ವಿಮರ್ಶಕ, ಸಂಶೋಧಕ ಡಾ. ಎಂ. ಪ್ರಭಾಕರ ಜೋಶಿ ಅವರ ಸಹಕಾರ ವಿಶೇಷವಾದುದು. ಅವರ ಹತ್ತಾರು ಕೆಲಸಗಳ ಮಧ್ಯೆ ಅವರು ಈ ಕೆಲಸವನ್ನು ನೆರವೇರಿಸಿದ್ದಾರೆ. ಅವರಿಗೆ ಹಾಗೂ ಕರಡಚ್ಚು ತಿದ್ದಲು ನೆರವಾದ ಅರ್ಥದಾರಿ, ಪ್ರಸಂಗಕರ್ತ ಶ್ರೀ ಪೊಳಲಿ ನಿತ್ಯಾನಂದ ಕಾರಂತರಿಗೆ ಅಕಾಡೆಮಿಯ ಮತ್ತು ನನ್ನ ವೈಯಕ್ತಿಕ ಗೌರವಾರ್ಪಣೆ.**

– ಪಿ. ಕಿಶನ್ ಹೆಗ್ಡೆ

## ಪುಟ ದಾರಿ


| | | | |
|---|---|---|---|
| 1 | ಬಲ್ಲಿನ ವೇಷಧಾರಿ ಅಳಿಕೆ ರಾಮಯ್ಯ ರೈ | ಪ್ರೊ. ಅಮೃತ ಸೋಮೇಶ್ವರ | 1 |
| 2 | ಅಳಿಕೆ ರಾಮಯ್ಯ ರೈ ಸ್ವಕೀಯ ಶುಭಗುಣ ಸಂಪನ್ನ | ಹರಿದಾಸ ಮಲ್ಪೆ ಶಂಕರನಾರಾಯಣ ಸಾಮಗ | 5 |
| 3 | ಗೆಳೆತನಕ್ಕೆ ಕಾರಣನಾದವ ಅತಿಕಾಯ | ನೆಡ್ಲೆ ನರಸಿಂಹ ಭಟ್ಟ | 10 |
| 4 | ನನ್ನ ಅನುಭವದಂತೆ ಅಳಿಕೆಯವರು | ಬಲಿಪ ನಾರಾಯಣ ಭಾಗವತ | 12 |
| 5 | ಅಳಿಕೆಯವರ ಕೆಲವು ಸ್ತ್ರೀಪಾತ್ರಗಳನ್ನನುಕರಿಸಲು... | ಕೋಳ್ಯೂರು ರಾಮಚಂದ್ರ ರಾವ್ | 15 |
| 6 | ಹನುಮದ್ವಿಕಾಸಕ್ಕೆ ಇಲ್ಲ ಎಲ್ಲೆ | ತಾರನಾಥ ವರ್ಕಾಡಿ | 19 |
| 7 | ಅಳಿಕೆಗೆ ಅಳಿವಿಲ್ಲ | ಭಾಸ್ಕರ ರೈ ಕುಕ್ಕುವಳ್ಳಿ | 22 |
| 8 | ದಶಾವತಾರಿ ಶ್ರೀ ಅಳಿಕೆ ರಾಮಯ್ಯ ರೈ | ಪು. ಶ್ರೀನಿವಾಸ ಭಟ್ಟ | 25 |
| 9 | ತೆಂಕುತಿಟ್ಟಿನ ಯುಗ: ಅಳಿಕೆ | ಡಾ. ಕೆ.ಎಂ.ರಾಘವ ನಂಬಿಯಾರ್ | 32 |
| 10 | ಕಲಾತ್ಮಕತೆಯ ಅಚ್ಚು : ಅಳಿಕೆ | ಡಾ. ಎಂ. ಪ್ರಭಾಕರ ಜೋಶಿ | 36 |

**ಭಾಗ ಎರಡು : ಆತ್ಮ ವೃತ್ತಾಂತದ ತುಣುಕುಗಳು**

| | | |
|---|---|---|
| 11 | ಆಟದವನ ಬದುಕು ಬದುಕಿದವನ ಆಟ | 38-58 |
| 12 | ನನ್ನ ಕಾಲದ ಯಕ್ಷಗಾನ | 59-67 |
| 13 | ಯಕ್ಷಗಾನ ವಿಮರ್ಶೆಯೆಂಬ ವ್ಯಸನ | 68-72 |



# ಬಲ್ಲಿನ ವೇಷಧಾರಿ ಅಳಿಕೆ ರಾಮಯ್ಯ ರೈ

ಪ್ರೊ. ಅಮೃತ ಸೋಮೇಶ್ವರ

ನಾನು ಬಹುವಾಗಿ ಮೆಚ್ಚಿ ಗೌರವಿಸುತ್ತಿದ್ದ ಹಿರಿಯ ಯಕ್ಷಗಾನ ಕಲಾವಿದರಲ್ಲಿ ಅಳಿಕೆ ರಾಮಯ್ಯ ರೈ ಅವರೂ ಒಬ್ಬರು. ಚಿಕ್ಕಂದಿನಿಂದಲೂ ಅವರ ವಿಧ ವಿಧದ ಪಾತ್ರಗಳನ್ನು ನೋಡುತ್ತಾ ಬಂದಿದ್ದೆ. ಅವರ ರಂಗ ಪ್ರವೇಶವಾಗುತ್ತಲೇ ರಂಗಸ್ಥಳಕ್ಕೊಂದು ಹೊಸ ಜೀವ ಸಂಚಾರವಾಗಿ ಬಿಡುತ್ತಿತ್ತು.

ಬಣ್ಣದ ವೇಷಗಳ ಹೊರತಾಗಿ ಯಕ್ಷಗಾನದ ಎಲ್ಲ ಪ್ರಕಾರದ ವೇಷಗಳನ್ನು ಅವರು ಸಮರ್ಥವಾಗಿ ನಿರ್ವಹಿಸಿದ್ದಾರೆ. ನನ್ನ ಎಳವೆಯಲ್ಲಿಯೇ ಅವರು ಪ್ರೌಢ ಕಲಾವಿದರಾಗಿ ರೂಪುಗೊಂಡು ಪ್ರಸಿದ್ಧರಾಗಿದ್ದರು. ಪುಂಡು ವೇಷ, ಸ್ತ್ರೀ ವೇಷಗಳ ಹಂತವನ್ನು ದಾಟಿ 'ಕಿರೀಟ ವೇಷ'ಗಳ ನಿರ್ವಹಣೆಯಲ್ಲಿ ರಾರಾಜಿಸುತ್ತಿದ್ದರು. ಸಾಂದರ್ಭಿಕವಾಗಿ ಪುಂಡುವೇಷ, ಸ್ತ್ರೀವೇಷಗಳನ್ನು ಧರಿಸುತ್ತಿದ್ದುದುಂಟು. ನನ್ನ ಬಾಲ್ಯದಲ್ಲಿ ಅವರ ಪುಂಡು ವೇಷವನ್ನು, ಸ್ತ್ರೀವೇಷವನ್ನು ನೋಡಿದ ಮಸುಕು ನೆನಪಿದೆ. ಸ್ತ್ರೀವೇಷಗಳಲ್ಲಿ ಒಂದು ಶಶಿಪ್ರಭೆಯದಾಗಿತ್ತು.

ಅಳಿಕೆಯವರಿಗೆ ಯಕ್ಷಗಾನ ಪರಂಪರೆಯ ಹಿನ್ನೆಲೆಯಿತ್ತು. ಅವರ ತಂದೆ ಅಳಿಕೆ ಮೋನಪ್ಪ ರೈಗಳು (ಮೋನು ಶೆಟ್ಟರೆಂದೇ ಖ್ಯಾತರು) ಪ್ರಸಿದ್ಧ ವೇಷಧಾರಿಯಾಗಿದ್ದರು. ಮುತ್ತಜ್ಜ ಮೋನಪ್ಪ ರೈ ಎಂಬವರು ಯಕ್ಷಗಾನ ಭಾಗವತರಾಗಿದ್ದರಂತೆ. ಅಳಿಕೆಯವರು ಹುಟ್ಟಿದಂದು ಇಚ್ಲಂಪಾಡಿ ಮೇಳದ ಯಜಮಾನ ಕೋಟ್ಯಣ್ಣಾಳ್ವರು ತಮ್ಮ ಮೇಳದ ನೆಚ್ಚಿನ ಕಲಾವಿದ ಮೋನಪ್ಪ ರೈಗಳಿಗೆ ಪುತ್ರೋತ್ಸವದ ಸುದ್ದಿ ಕೇಳಿ ಅವರ ಕೈಗೆ ಚಿನ್ನದ ಕುರುಜಾತು ನಾಣ್ಯವನ್ನೊಂದಿತ್ತು 'ಇದು ನಿನ್ನ  ಮಗುವಿಗಾಗಿ ನಾನು ಹರಸಿ ಕೊಡುವ ಉಡುಗೊರೆ; ಅವನು ಕೀರ್ತಿಶಾಲಿಯಾಗಲಿ' ಎಂದು ಹಾರೈಸಿದರಂತೆ. ಅವರ ಹಾರೈಕೆ

ಸುಳ್ಳಾಗಲಿಲ್ಲ. ಅದೇ ಇಚ್ಲಂಪಾಡಿ ಮೇಳದಲ್ಲಿ ತನ್ನ ಹನ್ನೆರಡನೆ ಪ್ರಾಯದಲ್ಲಿ ಬಾಲಕ ರಾಮಯ್ಯ ಯಕ್ಷಗಾನ ಆಟಕ್ಕೆ ಗೆಜ್ಜೆ ಕಟ್ಟಿದರು. ಬಲು ಬೇಗನೆ ಕಸುವಿನ ಕಲಾವಿದರಾಗಿ ರೂಪುಗೊಳ್ಳತೊಡಗಿದರು. ಇವರಿಗೆ ಮಾತುಗಾರಿಕೆಗೆ ಇವರ ತಂದೆಯವರೇ ಮಾರ್ಗದರ್ಶಕರಾದರೆ, ಪುಂಡುವೇಷದ ಕುಣಿತವನ್ನು ಅಂದಿನ ಖ್ಯಾತ ಪುಂಡು ವೇಷಧಾರಿ ಕುಂಞಣ್ಣ ಅಡ್ಯಂತಾಯರಿಂದಲೂ, ಸ್ತ್ರೀ ವೇಷದ ನಾಟ್ಯಾಭಿನಯವನ್ನು ಪ್ರಸಿದ್ಧ ಸ್ತ್ರೀವೇಷಧಾರಿ ಐತಪ್ಪ ಶೆಟ್ಟರಿಂದಲೂ, ರಂಗಸ್ಥಳ ಪ್ರವೇಶ, ನಿರ್ವಹಣೆಯ ವಿಚಾರಗಳನ್ನು ಹೆಸರಾಂತ ವೇಷಧಾರಿ ಕುಂಬಳೆ ಗುಂಡ ಅವರಿಂದಲೂ ಅನುಭವಕ್ಕೆ ತಂದುಕೊಂಡಿದ್ದರು.

ಇಚ್ಲಂಪಾಡಿ ಮೇಳದಲ್ಲಿ ತನ್ನ ಕಲಾಜೀವನ ಪ್ರಾರಂಭಿಸಿದ ರಾಮಯ್ಯ ರೈಗಳು ಮುಂದೆ ಕಟೀಲು, ಕದ್ರಿ, ಕುಂಡಾವು (ಇರಾ ಸೋಮನಾಥೇಶ್ವರ) ಹಾಗೂ ಕರ್ನಾಟಕ ಮೇಳಗಳಲ್ಲಿ ತಿರುಗಾಟ ನಡೆಸಿದ್ದರು. ಒಟ್ಟು ಸುಮಾರು ಅರವತ್ತು ವರ್ಷಗಳ ತಿರುಗಾಟದಲ್ಲಿ ನಲವತ್ತು ವರ್ಷಗಳ ಕಾಲ ಕಲ್ಲಾಡಿ ಕೊರಗ ಶೆಟ್ಟರ ಹಾಗೂ ಅವರ ಪುತ್ರ ವಿಠಲ ಶೆಟ್ಟರ ಯಜಮಾನಿಕೆಯ ಕುಂಡಾವು ಮತ್ತು ಕರ್ನಾಟಕ ಮೇಳಗಳಲ್ಲಿ ಕಲಾ ಸೇವೆಯನ್ನು ನಿರ್ವಹಿಸಿದ್ದರು.

ಆರಂಭದಲ್ಲಿ ಪ್ರಹ್ಲಾದ, ಚಂದ್ರಹಾಸ, ಧ್ರುವ, ಬಾಲಕೃಷ್ಣ ಇತ್ಯಾದಿ ಬಾಲ ಪಾತ್ರಗಳನ್ನು ನಿರ್ವಹಿಸುತ್ತಾ, ಸ್ವಲ್ಪವೇ ಸಮಯದಲ್ಲಿ ವಿಭೀಷಣ, ಬ್ರಹ್ಮಚಾರಿ ಹನುಮಂತ, ಕಚ ಇತ್ಯಾದಿ ಪಾತ್ರಗಳನ್ನು ನಿರಾಯಾಸವಾಗಿ ನಿರ್ವಹಿಸಲು ಪ್ರತಿಭಾಶಾಲಿಯಾದ ಅವರಿಗೆ ಕಷ್ಟವೆನಿಸಲಿಲ್ಲ. ಹದಿಮೂರು–ಹದಿನಾಲ್ಕರ ಹರೆಯದಲ್ಲಿ ಅಂಥ ಪಾತ್ರಗಳಲ್ಲಿ ಅವರು ತೋರಿದ ಪ್ರತಿಭೆಯನ್ನು ಕಂಡು ಮೆಚ್ಚಿದ ಸಿಮಂತೂರಿನ ಪಟೇಲರೂ ಊರವರೂ ಅವರಿಗೆ ಚಿನ್ನದ ಬಳೆಗಳ ಉಡುಗೊರೆ ನೀಡಿದರಂತೆ (ಆ ಬಳೆ ಕಳವಾಗಿ ಹೋದಾಗ ಖಿನ್ನರಾಗಿದ್ದ ಈ ಎಳೆಯ ಕಲಾವಿದರನ್ನು ಸಂತೈಸಿದ ಶಿಬರೂರಿನ ಫಕೀರ ಬ್ಯಾರಿ ಎಂಬ ಕಲಾಪ್ರಿಯ ಮಹನೀಯರು ಮತ್ತೆ ಚಿನ್ನದ ಬಳೆಗಳನ್ನು ಮಾಡಿಸಿಕೊಟ್ಟರಂತೆ).

ರಾಮಯ್ಯ ರೈ ಅವರ ಹದಿನಾರನೇ ಪ್ರಾಯದಲ್ಲಿ ಅವರಿದ್ದ ಕಟೀಲು ಮೇಳ ಒಮ್ಮೆ ಧರ್ಮಸ್ಥಳಕ್ಕೆ ಹೋಗಿದ್ದಾಗ ಇವರು ನಿರ್ವಹಿಸಿದ ಕುಮಾರ ವಿಜಯದ ಮಾಯಾ ಅಜಮುಖಿಯ ಪಾತ್ರವನ್ನು ನೋಡಿದ ಕಲಾಪಕ್ಷಪಾತಿ ಮಂಜಯ್ಯ ಹೆಗ್ಗಡೆಯವರು ತುಂಬಾ ಮೆಚ್ಚಿಕೊಂಡು ಹರಸಿದರಂತೆ. ಚಂದ್ರಮತಿ, ದಮಯಂತಿ, ದಕ್ಷಾಧ್ವರದ ಗೌರಿ, ಮೀನಾಕ್ಷಿ, ಶಶಿಪ್ರಭೆ, ಶ್ರೀದೇವಿ ಮೊದಲಾದ ಸ್ತ್ರೀ ಪಾತ್ರಗಳಲ್ಲಿ ಪಳಗಲು ಅವರಿಗೆ ಹೆಚ್ಚಿನ ಸಮಯ ಬೇಕಾಗಲಿಲ್ಲ. ಹಾಗೆಯೇ ಅಭಿಮನ್ಯು, ಬಬ್ರುವಾಹನ, ಜಯಂತ, ಚಿತ್ರಕೇತ ಮೊದಲಾದ ಹೊಂತಕಾರಿ ಪುಂಡು ವೇಷಗಳಿಗೂ, ಅಶ್ವತ್ಥಾಮ, ಕಚ, ಸುಬ್ರಹ್ಮಣ್ಯ ಮೊದಲಾದ ವಿಶಿಷ್ಟ ಪಾತ್ರಗಳಿಗೂ ಅವರು ಜೀವ ತುಂಬಿದರು. ಆ ಕಾಲದಲ್ಲಿ ಆಗಾಗ ಜೋಡಾಟಗಳಾಗುತ್ತಿದ್ದವು. ಅಭಿಮನ್ಯು ಕಾಳಗದ ಇವರ ಅಭಿಮನ್ಯುವಿನ ಪ್ರಚಂಡತೆಯನ್ನು ಮೀರಬಲ್ಲವರು ಇರಲಿಲ್ಲವೆಂದೇ ಹೇಳಬೇಕು. ಆ ಕಾಲದಲ್ಲಿ ಅಂಥ ಪುಂಡು ವೇಷಗಳಲ್ಲಿ ಹೆಸರು ಪಡೆದಿದ್ದ ಮೂಡಬಿದ್ರೆ ವಾಸು, ಕುಂಬಳೆ ಸುಬ್ಬ ಇವರಿಗೂ

ರಾಮಯ್ಯ ರೈಯವರು ರಂಗಸ್ಥಳವನ್ನು ಹುಡಿ ಹಾರಿಸುವ ವೀರಾವೇಶದ ಅಬ್ಬರದ ಮುಂದೆ ಮಿಂಚುವುದು ದುಸ್ತರವಾಗಿತ್ತು. ಅವರೊಂದಿಗೆ ಜೋಡಾಟದಲ್ಲಿ ಅಭಿಮನ್ಯು ವೇಷ ಮಾಡಿದ್ದ ನನ್ನ ಬಂಧುವಾಗಿದ್ದ ಕುಂಬಳೆ ಸುಬ್ಬ ಅವರು ಒಮ್ಮೆ ಇಂಥ ಒಂದು ಜೋಡಾಟದ ವಿಚಾರ ವರ್ಣಿಸುತ್ತ ರಾಮಯ್ಯ ರೈ ಅವರ ಅಭಿಮನ್ಯುವಿನ ಭಯಂಕರ ಅಟ್ಟಹಾಸ ಹೇಗೆ ನಡುಕ ಹುಟ್ಟಿಸುವಂತಿತ್ತು ಎಂದಿದ್ದರು. ಅವರ ಪುಂಡು ವೇಷಗಳ ದ್ರುತಗತಿಯ ನಾಟ್ಯ, ದಣಿವರಿಯದ ಧೀಂಗಣ ವೈಖರಿ ಅಸಮಾನವೆನಿಸಿದ್ದವು. ಪುಂಡು ವೇಷಗಳನ್ನು 'ನ ಭೂತೋ ನ ಭವಿಷ್ಯತಿ' ಎಂಬಂಥ ವಿಕ್ರಮವನ್ನು ಮೆರೆಯುತ್ತಿದ್ದಂತೆಯೇ ಅವರು ಪ್ರೌಢ ಕಿರೀಟ ವೇಷಕ್ಕೆ ದಾಟಿದರು. ಅತಿಕಾಯ, ಶ್ರೀರಾಮ, ತಾಮ್ರಧ್ವಜ, ಕರ್ಣ, ಸುಧನ್ವ, ದುಷ್ಯಂತ ಮೊದಲಾದ ಪಾತ್ರಗಳನ್ನು ಚೈತನ್ಯ ಪೂರ್ಣವಾಗಿ ಮೆರೆಸಿದರು. ಅವರ ಋತುಪರ್ಣ ಪಾತ್ರವಂತೂ ಮನೆ ಮಾತಾಗಿತ್ತು. ಹಾಗೆಯೇ ಶಿಶುಪಾಲ, ಹಿರಣ್ಯಾಕ್ಷ, ರಕ್ತಬೀಜ, ಇಂದ್ರಜಿತು ಮೊದಲಾದ ವೀರ ಖಳ ಪಾತ್ರಗಳಲ್ಲೂ ವಿಜೃಂಭಿಸಿದ್ದರು. ಚೂಡಾಮಣಿಯ ಅವರ ಹನುಮಂತ ಪಾತ್ರವಂತೂ ಅವಿಸ್ಮರಣೀಯವಾಗಿತ್ತು.

ಕಳೆದ ಶತಮಾನದ ಮಧ್ಯ ಭಾಗದಲ್ಲಿ ತೆಂಕುತಿಟ್ಟಿನ ಕೆಲವು ಮೇಳಗಳು ಯಕ್ಷಗಾನ ಪ್ರದರ್ಶನದಲ್ಲಿ ಕೆಲವೊಂದು ಪ್ರಯೋಗ ಶೀಲತೆಗೆ ಮುಂದಾದವು. ಪ್ರಸಂಗಗಳಲ್ಲಿ ಪ್ರದರ್ಶನಕ್ಕೆ ಅಣಿಗೊಳಿಸಲಾಯಿತು. ಕಲ್ಲಾಡಿ ಕೊರಗಶೆಟ್ಟರ ಯಜಮಾನಿಕೆಯ ಇರಾ ಸೋಮನಾಥೇಶ್ವರ ಯಕ್ಷಗಾನ ನಾಟಕ ಸಭಾ ಎಂಬ ಮೇಳದಲ್ಲಿ 'ಕೋಟಿ ಚೆನ್ನಯ' ಎಂಬ ಪ್ರಸಂಗವೂ, ಮುಂದೆ ಅವರ ಮಗ ವಿಠಲ ಶೆಟ್ಟರ ನೇತೃತ್ವದ ಕರ್ನಾಟಕ ಯಕ್ಷಗಾನ ನಾಟಕ ಸಭಾ ಎಂಬ ಮೇಳದಲ್ಲಿ ಈ ಪ್ರಸಂಗವಲ್ಲದೆ ತುಳುನಾಡ ಸಿರಿ, ಕೋಡ್ದಬ್ಬು ಬಾರಗ, ದಳವಾಯಿ ದೇವುಪೂಂಜ ಮುಂತಾದ ಪ್ರಸಂಗಗಳು ತುಳು ಭಾಷೆಯಲ್ಲಿ ಪ್ರಸ್ತುತಗೊಂಡಾಗ ಅವುಗಳು ಶೀಘ್ರದಲ್ಲೇ ಜನಪ್ರಿಯವಾಗಲು ಪ್ರಸಂಗಗಳ ನೂತನತೆಯ ಜತೆಗೇ ಅಳಿಕೆ, ಬೋಳಾರ ನಾರಾಯಣ ಶೆಟ್ಟಿ, ನಾರಂಬಾಡಿ ಸುಬ್ಬಯ್ಯ ಶೆಟ್ಟಿ, ರಾಮದಾಸ ಸಾಮಗ, ಮಂಕುಡೆ ಸಂಜೀವ ಶೆಟ್ಟಿ ಮೊದಲಾದ ಶ್ರೇಷ್ಠ ಕಲಾವಿದರೂ ಕಾರಣ. ಕೋಟಿ ಚೆನ್ನಯ ಪ್ರಸಂಗದ ಪೆರುಮಾಳ ಬಲ್ಲಾಳ ಪಾತ್ರಕ್ಕೆ ನಿರ್ದಿಷ್ಟ ಸ್ವರೂಪವನ್ನು ಕೊಟ್ಟವರೇ ಅಳಿಕೆಯವರು.

ಅಳಿಕೆಯವರ ಪಾತ್ರ ನಿರ್ವಹಣೆ ಅಷ್ಟೊಂದು ಯಶಸ್ವಿಯಾಗಲು ಕಾರಣವೆಂದರೆ ಅವರ ಚುರುಕಾದ ನಾಟ್ಯ ಹಾಗೂ ಪಾತ್ರೋಚಿತವಾದ ರಸಭಾವ ಪೂರ್ಣವಾದ ಅರ್ಥಗಾರಿಕೆ. ಬಲು ಚಿಕ್ಕ ಪ್ರಾಯದಿಂದಲೇ ಅವರು ಪ್ರಯತ್ನ ಪೂರ್ವಕವಾಗಿ ಅರ್ಥಗಾರಿಕೆ ಯಲ್ಲಿ ಹೆಚ್ಚುಗಾರಿಕೆಯನ್ನು ಸಾಧಿಸಿದವರು. ಅವರಲ್ಲಿ ಅಧ್ಯಯನಶೀಲತೆ ಇತ್ತು. ಸ್ಮರಣಶಕ್ತಿ ಪ್ರಖರವಾಗಿತ್ತು. ತಾನು ಏಕಪಾಠಿಯಾಗಿದ್ದೆನೆಂದು ಒಮ್ಮೆ ಅವರೇ ಹೇಳಿದ್ದುಂಟು.

ಯಕ್ಷಗಾನ ತಾಳಮದ್ದಳೆಗಳಲ್ಲೂ ಅವರು ಸಾಂದರ್ಭಿಕವಾಗಿ ಪಾತ್ರ ವಹಿಸುತ್ತಿದ್ದರು. ಆಟದಲ್ಲಿ ಮಾತ್ರವಲ್ಲ, ಕೂಟದಲ್ಲೂ ಅವರ ಪಾತ್ರ ತಲ್ಲೀನತೆ ಒಂದೇ ತೆರನಾಗಿತ್ತು. ಒಮ್ಮೆ ನಮ್ಮೂರಿನ ತಾಳಮದ್ದಳೆಯಲ್ಲಿ ಅವರು ಕರ್ಣಾವಸಾನದ ಪಾತ್ರ ವಹಿಸಿದಾಗ,

'ಶಿವ ಶಿವ ಸಮರದೊಳು' ಎಂಬ ಪದ್ಯಕ್ಕೆ ಅರ್ಥ ಹೇಳುತ್ತಾ ಅವರು ದ್ವಾಪರದ ಕರ್ಣ ನನ್ನು ಆವಾಹಿಸಿಕೊಂಡು ಧಾರಾಕಾರವಾಗಿ ಕಂಬನಿಯ ಕೋಡಿ ಹರಿಸಿದ್ದನ್ನು ಕಂಡು ನಾನು ಚಕಿತನಾಗಿದ್ದೆ.


ಅವರ ಋತುಪರ್ಣನ ಧರ್ಮಶಾಸ್ತ್ರ ವಿವೇಚನೆ, ಕೀಚಕನ ಶೃಂಗಾರ ಲೋಲುಪತೆ, ಹನುಮಂತನ ಭಕ್ತಿ ಪಾರಮ್ಯ, ಸುಧನ್ವನ ಭಕ್ತಿ ವಿವೇಕ, ಶೌರ್ಯ, ಕರ್ಣನ ಸ್ವಾಮಿನಿಷ್ಠೆ, ಅತಿಕಾಯನ ವೀರ ವೈಷ್ಣವತೆ, ಕೌರವನ ವೀರಛಲ, ಶಿಶುಪಾಲನ ದೈವವಿರೋಧಿ ರಭಸವೃತ್ತಿ ಇಂದಿಗೂ ಸ್ಮರಣೀಯವಾಗಿವೆ.

ರಾಮಯ್ಯ ರೈಗಳು ತಮ್ಮ ಬಾಲ್ಯ ತಾರುಣ್ಯ ಕಾಲದ ಅನೇಕ ಪ್ರಸಿದ್ಧ ಕಲಾವಿದರನ್ನು ನೆನಪಿಸಿಕೊಳ್ಳುತ್ತಿದ್ದರು. ಭಾಗವತರುಗಳಲ್ಲಿ ಹಿರಿಯ ಬಲಿಪರು ಹಾಗೂ ಅಗರಿಯವರಲ್ಲಿ ಅವರಲ್ಲಿ ವಿಶೇಷ ಗೌರವವಿತ್ತು. ಬಲಿಪರು ಅವರಿಗೆ ಹಲವು ವೇಷಗಳನ್ನು ಮಾಡಲು ಅವಕಾಶವಿತ್ತುದಲ್ಲದೆ ಎಳವೆಯಲ್ಲೇ ಅವರನ್ನೇ ತಮ್ಮ ಮದ್ರಾಸ್ ಪ್ರವಾಸದ ಯಕ್ಷಗಾನ ತಂಡಕ್ಕೆ ಸೇರಿಸಿಕೊಂಡಿದ್ದರು. ಬಲಿಪರ ಭಾಗವತಿಕೆಯಲ್ಲಿ ಸುಧನ್ವನ ಪಾತ್ರವನ್ನು ಅವರು ನಿರ್ವಹಿಸಿದ ಅನನ್ಯವಾದ ರೀತಿ ಇಂದೂ ನನ್ನ ಸ್ಮರಣೆಯಲ್ಲಿದೆ.

ಅಗರಿ ಭಾಗವತರ ಭಾಗವತಿಕೆಯ ಸಾಮರ್ಥ್ಯವು ಧರ್ಮಸ್ಥಳದಲ್ಲಿ ಒಮ್ಮೆ ವಿಶೇಷ ವಾಗಿ ಪ್ರಕಟವಾದ ಘಟನೆಯನ್ನು ಅವರು ಹೇಳುತ್ತಿದ್ದುದುಂಟು. ಆ ಕಾಲದಲ್ಲಿ ಬಡಗುತಿಟ್ಟಿನ ಆಟಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದ ಮಂಜಯ್ಯ ಹೆಗ್ಗಡೆಯವರು ತೆಂಕುತಿಟ್ಟಿನವರ ನಿರ್ವಹಣೆ ತೃಪ್ತಿಕರವಾಗಿಲ್ಲವೆಂಬ ಅಭಿಪ್ರಾಯಕ್ಕೆ ಬಂದು ಒಂದು ವರ್ಷ ತೆಂಕಿನವರಿಗೆ ನವರಾತ್ರಿಯ ವೇಳೆ ಸೇವೆ ಆಟಕ್ಕೆ ಅವಕಾಶ ನೀಡಿರಲಿಲ್ಲವಂತೆ. ಇದರಿಂದ ನೊಂದ ಅಗರಿ ಭಾಗವತರು ಒಂದೇ ಒಂದು ಅವಕಾಶ ಕೊಡಿ; ಆಟ ಚೆನ್ನಾಗದಿದ್ದರೆ ಮುಂದೆ ಜಾಗಟೆ ಹಿಡಿಯುವುದಿಲ್ಲ ಎಂದರಂತೆ. ಹೆಗ್ಗಡೆಯವರ ಒಪ್ಪಿಗೆ ಸಿಕ್ಕಿತು. ಅಗರಿಯವರ ನೇತೃತ್ವದಲ್ಲಿ 'ದುಷ್ಯಂತ ವಿಜಯ' ಮತ್ತು 'ಪಾರಿಜಾತ' ಎಂಬ ಎರಡು ಪ್ರಸಂಗಗಳ ಪ್ರದರ್ಶನವಾಯಿತು. ಹೆಗ್ಗಡೆಯವರು ಒಂದು ಗಳಿಗೆ ನೋಡಿ ಹೋಗಲೆಂದು ಉದಾಸೀನತೆ ಯಿಂದಲೇ ಬಂದು ಕುಳಿತವರು ಬೆಳಗ್ಗಿನವರೆಗೆ ಎವೆಯಿಕ್ಕದೆ ಆಟ ಓಡಿ ಭಾಗವತರನ್ನು ಕರೆದು ವಿಶೇಷ ಮೆಚ್ಚುಗೆಯನ್ನು ಸೂಚಿಸಿದರಂತೆ. ಹಾರಾಡಿ ರಾಮ ಮೊದಲಾದ ಬಡಗಿನ ಖ್ಯಾತ ಕಲಾವಿದರೂ ಆ ಆಟವನ್ನು ತುಂಬ ಶ್ಲಾಘಿಸಿದರಂತೆ. ಭಾಗವತರ ಸೂಚನೆಯಂತೆ ರಾಮಯ್ಯ ರೈಯವರು ದುಷ್ಯಂತನ ಪಾತ್ರ ವಹಿಸಿದ್ದರು. ಅವರ ಅಂದಿನ ನಿರ್ವಹಣೆ ಅದ್ಭುತವಾಗಿತ್ತೆಂದು ಒಮ್ಮೆ ಸ್ವತ: ಅಗರಿ ಭಾಗವತರೇ ಹೇಳಿದ್ದರು.

ಅಳಿಕೆಯವರು ಯಕ್ಷಗಾನ ರಸಿಕರಿಂದಲೂ, ಸಂಘ ಸಂಸ್ಥೆಗಳಿಂದಲೂ ಸಾಕಷ್ಟು ಮಾನ ಸನ್ಮಾನಗಳನ್ನು ಪಡೆದಿದ್ದರು. ಅವರಿಗೆ ಸರಕಾರದ ವತಿಯಿಂದ ರಾಜ್ಯ ಪ್ರಶಸ್ತಿಯೂ ಬಂದಿತ್ತು. ಆದರೆ ಅವರದೊಂದು ಆತ್ಮ ವೃತ್ತವಾಗಲೀ, ಅವರ ಕುರಿತಾದ ಗೌರವ ಗ್ರಂಥವಾಗಲೀ ಪ್ರಕಟವಾಗದೆ ಇದ್ದುದೊಂದು ಕೊರತೆಯೆನ್ನದೆ ವಿಧಿಯಿಲ್ಲ.

* * *



# ಅಳಿಕೆ ರಾಮಯ್ಯ ರೈ
# ಸ್ವಕೀಯ ಶುಭಗುಣ ಸಂಪನ್ನ

**ಹರಿದಾಸ ಮಲ್ಪೆ ಶಂಕರನಾರಾಯಣ ಸಾಮಗ**

ನಾನು ಯಕ್ಷಗಾನದ ತೆಂಕು ಮೇಳಗಳಲ್ಲಿ ವೃತ್ತಿಯಲ್ಲಿರುವಾಗ (ವೇಷಧಾರಿಯಾಗಿ) ದಿ। ಗ। ಅಳಿಕೆ ರಾಮಯ್ಯ ರೈಗಳ ವಿಷಯ ನನ್ನ ಸಾಕ್ಷಾತ್ ಅನುಭವದಿಂದಲೂ, ಇತರರಿಂದ ಕೇಳಿಯೂ ನನಗೆ ತುಂಬಾ ತಿಳಿಯಿತು. ಅಂದರೆ, ನಾನು ಬಡಗು ಮೇಳ ಗಳಲ್ಲಿರುವಾಗಲೂ, ಅವರ ವಿಷಯ ಕೇಳಿ ತಿಳಿದಿದ್ದೆ. ಅವರು ತಮ್ಮ ಜೀವಿತದ ಕೊನೆಯವರೆಗೂ ಸುಪ್ರಸಿದ್ಧ ವೇಷಧಾರಿಯಾಗಿ ಮೆರೆಯುತ್ತಿದ್ದವರು. ಅವರ ಯಕ್ಷಗಾನ ರಂಗಸ್ಥಳದ ವೇಷವನ್ನು ಸಾಕ್ಷಾತ್ತಾಗಿ ಕಂಡು ಮೆಚ್ಚಿ ಬೆರಗಾದ ಸಾಮಾಜಿಕರು (ಪ್ರೇಕ್ಷಕರು, ಶ್ರೋತೃಗಳು) ಅವರ ಆ ವಿಷಯಕವಾದ ಸುಯೋಗ್ಯತೆಯನ್ನು ಮನಗಂಡು, ತತ್ಪರಿಣಾಮ ದಿಂದ ಅವರನ್ನು ಗೌರವಿಸುತ್ತಾ ಬಂದಿದ್ದಾರೆ. ಯಕ್ಷಗಾನ 'ಕೂಟ' ಅಂದರೆ, 'ತಾಳಮದ್ದಳೆ'ಗಳಲ್ಲೂ, ಅವರ ಅಪರ ವಯಸ್ಸಿನಲ್ಲಿ, ಅವರು ಪಾತ್ರವಹಿಸಿ, ಅರ್ಥಧಾರಿಯಾಗಿ ಜನಮೆಚ್ಚುಗೆ ಪಡೆದುದುಂಟು. ಆದರೆ 'ಯಕ್ಷಗಾನದ ಆಟ' ಎಂಬ ಪ್ರಕಾರದಲ್ಲಿ ಪ್ರಸಿದ್ಧಿ ಪಡೆದಷ್ಟು ಅವರು ಕೂಟದಲ್ಲಿ ಪ್ರಸಿದ್ಧಿ ಪಡೆದವರಲ್ಲದಿದ್ದರೂ, ಕೂಟದಲ್ಲಿ ಒಬ್ಬ ಪಾತ್ರಧಾರಿಗೆ ಇರಬೇಕಾದ ಎಲ್ಲ ಯೋಗ್ಯತೆಯನ್ನು ಮೈಗೂಡಿಸಿಕೊಂಡ ಒಬ್ಬ ಸಮರ್ಥ ಪಾತ್ರಧಾರಿಯೇ ಹೌದು ಎಂಬುದನ್ನು ನನ್ನ ಸಾಕ್ಷಾದನುಭವದಿಂದ ಹೇಳಬಲ್ಲೆ. ಅಂದರೆ,ಮೂಡಬಿದ್ರಿ ಜೈನ್ ಹೈಸ್ಕೂಲು ಮುಂತಾದ ಕೆಲವು ಕಡೆಗಳಲ್ಲಿ ನಡೆದಿದ್ದ 'ತಾಳಮದ್ದಳೆ'ಗಳಲ್ಲಿ ಅವರು ವಹಿಸಿದ್ದ ಪಾತ್ರಗಳನ್ನು ನಾನು ಕಂಡಿದ್ದು (ಪಾದುಕಾ ಪಟ್ಟಾಭಿಷೇಕ ಪ್ರಸಂಗ- ಭರತನ ಪಾತ್ರ) ನನ್ನ ನೆನಪಿಲ್ಲಿದೆ. ಅಂತು ಯಕ್ಷಗಾನ ಪ್ರಪಂಚದ 'ಆಟ ಮತ್ತು ಕೂಟ' ಎಂಬ ಎರಡು ಪ್ರಕಾರಗಳಲ್ಲಿಯೂ ಸಮರ್ಥ ಕಲಾವಿದನಾಗಿ, ಪ್ರಸಿದ್ಧಿಗೆ ಬಂದವರು ಗೌರವಾನ್ವಿತ ದಿ. ಗ । ರಾಮಯ್ಯ ರೈಗಳು.

ಯಕ್ಷಗಾನ ಮೇಳಗಳಲ್ಲಿ ವೃತ್ತಿಪರರಾಗಿರುವ ವೇಷಧಾರಿಗಳಾಗಿರುವ ಕಲಾವಿದರಲ್ಲಿ, 'ಆಟ'ಗಳಲ್ಲಿ ಬಳಸಲ್ಪಡಬೇಕಾದ ಆಂಗಿಕ- ವಾಚಿಕ - ಸಾತ್ವಿಕ- ಆಹಾರ್ಯಗಳೆಂಬ ಈ ಎಲ್ಲ ಅಭಿನಯಗಳನ್ನು ಸಂದರ್ಭೋಚಿತವಾಗಿ, ಸಂಯುಕ್ತವಾಗಿ ಬಳಸಿಕೊಳ್ಳುವ ಕಲಾಭಿಜ್ಞರು ಇಲ್ಲವೇ ಇಲ್ಲ ಎಂದು ಹೇಳಲಾಗದಿದ್ದರೂ ಅಂಥವರು ಕಡಿಮೆ ಅನ್ನಬಹುದೇನೋ. ಹೆಚ್ಚಾಗಿ ಆ ಕಲಾಕಾರರಲ್ಲಿ ಒಬ್ಬೊಬ್ಬನಲ್ಲಿ ಒಂದೊಂದು ಅಭಿನಯವು

ವಿಶಿಷ್ಟತೆ ಪಡೆದು, ಅದೇ ಪ್ರಾಮುಖ್ಯವಾಗಿ ನಿಯೋಜಿಸಲ್ಪಡುವುದು ತೋರಿ ಬರುತ್ತದೆ; ಒಬ್ಬನು ತನ್ನ ಆಂಗಿಕಾಭಿನಯ ಪ್ರಾಮುಖ್ಯದಿಂದ (ನರ್ತನ) ತನ್ನ ಪಾತ್ರವನ್ನು (ವೇಷ) ಪ್ರದರ್ಶಿಸುತ್ತಾನಾದರೆ, ಮತ್ತೊಬ್ಬನು ತನ್ನ ವಾಚಿಕಾಭಿನಯ (ಮಾತುಗಾರಿಕೆ) ಪ್ರಾಮುಖ್ಯದಿಂದ ಆ ಪಾತ್ರವನ್ನು ಪ್ರದರ್ಶಿಸುತ್ತಾನೆ. ಹೀಗೆ, ಯಕ್ಷಗಾನದಲ್ಲಿ ಆವಶ್ಯವಿರುವ ಎಲ್ಲ ಬಗೆಯ ಅಭಿನಯಗಳನ್ನು ತನ್ನ ವೇಷದಲ್ಲಿ ನಿಯೋಜಿಸಿಕೊಳ್ಳುವ ಸಮರ್ಥ ಕಲಾಕಾರನು ಯಕ್ಷಗಾನ 'ಆಟ'ದಲ್ಲಿ ಬಹುಕಡಿಮೆ ಅನ್ನಬಹುದು. ಒಬ್ಬ ವೇಷಧಾರಿಯು (ಕಲಾಕಾರ) ತನ್ನ ಸಿದ್ಧಿಯಲ್ಲಿರುವ ಒಂದು ಪ್ರಮುಖ ಅಭಿನಯವನ್ನು ವರ್ಚಸ್ವಿಯಾಗಿ ಪ್ರದರ್ಶಿಸುವುದರ ಮೂಲಕ ಪ್ರೇಕ್ಷಕರನ್ನು ಆಕರ್ಷಿಸುವುದರಿಂದ, ತನ್ನ ಇತರ ಅಭಿನಯ ಲೋಪವನ್ನು ಪ್ರೇಕ್ಷಕರ ಲಕ್ಷ್ಯಕ್ಕೆ ಬಾರದಂತೆ ಚಮತ್ಕಾರ ಮಾಡಬಹುದು. ಆದರೆ, ಇದು ಬರೇ ಚಮತ್ಕಾರವೇ ಆದೀತು, ಹೊರತು, ಯಕ್ಷಗಾನದ ನಿಜವಾದ ಕಲಾಕಾರ್ಯವಲ್ಲ. ದಿ। ಗ।ರಾಮಯ್ಯ ರೈಗಳಲ್ಲಿ, ಯಕ್ಷಗಾನ ವೇಷಧಾರಿಗಳಲ್ಲಿ ಆವಶ್ಯವಾಗಿ ಇರಬೇಕಾದ ಎಲ್ಲ ಬಗೆಯ ಅಭಿನಯಗಳೂ ಇದ್ದುವಾದುದರಿಂದ ಇವರು ಯಕ್ಷಗಾನದ ಒಬ್ಬ ಉತ್ತಮ ಕಲಾವಿದನೆಂದು ಗಣ್ಯರಾದರು. ಇವರ ತಂದೆಯವರು ಶ್ರೀ ಮೋನಪ್ಪ ಶೆಟ್ಟರು ಎಂಬವರು. ಅವರ ಕಾಲದಲ್ಲಿ ಯಕ್ಷಗಾನದ ಪ್ರಸಿದ್ಧ ನಟರೇ ಆಗಿದ್ದರು. ಆದುದರಿಂದ ಕಲಾವಂತಿಕೆಯ ಪ್ರೌಢಿಮೆಗೆ ಒಂದು ಮುಖ್ಯ ಕಾರಣವೂ ಆ ಆರ್ಷೇಯತ್ವವೂ ಹೌದು ಎಂದು ಸಾಧಾರಣವಾಗಿ ನಾವು ಊಹಿಸಬಹುದು. ಆದರೆ, ಇವರು ಬೇರೆ ಬೇರೆಯಾದ ಕೆಲವು ಮೇಳಗಳಲ್ಲಿ ವೇಷಧಾರಿಗಳಾಗಿ ವೃತ್ತಿಯಲ್ಲಿದ್ದು, ಅಲ್ಲಲ್ಲಿಯ ಬೇರೆ ಬೇರೆ ಕಲಾವಿದರೊಡನೆ ಸಹವಾಸ ಸಾಹಚರ್ಯದಲ್ಲಿದ್ದು, ತನ್ನ ಸ್ವಂತ ಪರಿಶ್ರಮದಿಂದ ಹೆಚ್ಚು ಹೆಚ್ಚಿನ ಅನುಭವ ಪಡೆದು ತತ್ವಪರಿಣಾಮದಿಂದ ಉನ್ನತಿಗೇರುತ್ತಾ, ಒಬ್ಬ ಉತ್ತಮ ಕಲಾವಿದನೆಂದು ಪ್ರಸಿದ್ಧಿಗೆ ಬಂದವರು. ಈ ವಿಚಾರಕ್ಕೆ ನನ್ನ ಸ್ವತಃ ಅನುಭವಕ್ಕೆ ಬಂದ ದೃಷ್ಟಾಂತವಿದೆ. ಇವರು ಚಿಕ್ಕವರಾಗಿದ್ದು, ಅಭಿಮನ್ಯು, ಬಬ್ರುವಾಹನ ಮೊದಲಾದ ಪುಂಡು ವೇಷಗಳನ್ನು ಮಾಡತೊಡಗಿದ್ದ 50 ವರ್ಷಗಳಷ್ಟು ಹಿಂದೊಮ್ಮೆ, ಇವರಿದ್ದ ಮೇಳದ ಒಂದು 'ಆಟ'ವನ್ನು ಮಂಗಳೂರಿನಲ್ಲಿ ನೋಡಿದ್ದ ನೆನಪು ಇದೆ. ಆಗ ನನಗೆ ಯಕ್ಷಗಾನ ಮೇಳಗಳ ಸಂಪರ್ಕ ಇದ್ದಿಲ್ಲ. ಆದರೆ, ಇವರು ಕಲಾವಿದರಾಗಿ ಕೆಲಸ ಮಾಡುತ್ತಿದ್ದ ಒಂದು ಮೇಳದ ಆಟವನ್ನು ನೋಡುವ ಸಂದರ್ಭ ಸಿಕ್ಕಿದಾಗ, ಅದನ್ನು ಬಿಡಲಿಲ್ಲ. ಅಂದಿನ 'ಆಟ'ವು 'ತೆಂಕುತಿಟ್ಟಿನ'ದ್ದಾದರೂ, ನನಗೆ ಆ ತಿಟ್ಟಿನಲ್ಲಿ ಅಭಿರುಚಿ ಇತ್ತು. ಅಂದಿನ ಆ 'ಆಟ'ವು 'ಅಭಿಮನ್ಯು ಕಾಳಗ' ಎಂಬ ಪ್ರಸಂಗದ್ದಾಗಿತ್ತು. ಅದರಲ್ಲಿ ಇವರ ಅಭಿಮನ್ಯು ವೇಷವನ್ನು ಲಕ್ಷವಿಟ್ಟು ನೋಡಿದೆ. ಅಭಿಮನ್ಯುವಾಗಿ ಇವರು ಮಾಡಿದ ನರ್ತನ, ಯುದ್ಧ ಚಮತ್ಕಾರ, ಇವಕ್ಕೆ ನಾನು ಬೆರಗಾಗಿ ಹೋದೆ. ಆದರೆ, ಇವರ ಮಾತುಗಾರಿಕೆಯಲ್ಲಿ ಭಾಷಾ ಸೌಂದರ್ಯ, ಕೌಶಲ, ಚಮತ್ಕಾರಗಳು ಸಾಕಷ್ಟು ಇಲ್ಲವೋ ಎಂದು ನನಗನ್ನಿಸಿತ್ತು. ಆದರೆ ಅನಂತರ ಎರಡು ವರ್ಷಗಳ ಮೇಲೆ, ಇವರ ವೇಷಗಳನ್ನು ಬೇರೆ ಬೇರೆ ಆಟಗಳಲ್ಲಿ ನೋಡಿದ್ದೆ.

ಆಗ ಮಾತ್ರ ಇವರು ಮಾತುಗಾರಿಕೆಯಲ್ಲಿ, ಆ ಎರಡು ವರ್ಷಗಳ ಹಿಂದೆ ಇದ್ದಂತೆ ಇಲ್ಲದೆ, ವೃದ್ಧಿ ಹೊಂದಿದ್ದನ್ನು ಕಂಡು, ಬಹು ಖುಷಿ ಪಡೆದೆ. ವೇಷಕ್ಕೆ ಹೊಂದಿಕೆಯಾಗು ವಂತೆ ಅಂದಿನ ಪ್ರಸಂಗಕ್ಕೆ ಸಮುಚಿತವಾಗುವ, ಸಾಹಿತ್ಯಿಕವಾಗಿ ಪ್ರಕಟವಾಗುವ ಕೌಶಲ್ಯಪೂರಿತವಾದ ಮಾತುಗಾರಿಕೆಯನ್ನು ಮೈಗೂಡಿಸಿಕೊಂಡ ಆ ಬದಲಾವಣೆಯನ್ನು ಕಂಡೆ. ಆದುದರಿಂದ ವಂಶ ಪರಂಪರೆಯಿಂದಲೋ, ತಂದೆಯಿಂದಲೋ ಬಂದ ಆರ್ಷೇಯಗುಣ ಮಾತ್ರವನ್ನು ಅವಲಂಬಿಸಿ ಕೊಂಡಿರದೆ, ತನ್ನ ಸ್ವತಃ ಶ್ರಮದಿಂದ ಸಾಧನೆ ಮಾಡಿ ಉತ್ತಮ ಕಲಾವಿದರೆಂಬ ಸಿದ್ಧಿ ಪಡೆದವರು ಇವರು ಎಂದು ದೃಷ್ಟಾಂತ ವಾಗಿದೆ. ಇವರ ಕಲಾಪ್ರೌಢಿಮೆಗೆ ಈ 'ಆರ್ಷೇಯತ್ವ' ಎಂಬುದೊಂದು ಸಹಕಾರಿ ಕಾರಣವೆಂದು ಪರಿಗಣಿಸಬಹುದಾದರೂ, ಇವರ ಸ್ವತಃ ಸಾಧನೆಯೇ ಸಾಕ್ಷಾತ್ಕಾರಣವೆಂದು ನನಗನಿಸುತ್ತದೆ.

ಈಗ ಸುಮಾರು 35–40 ವರ್ಷಗಳ ಹಿಂದೆ ದಿ| ಗ| ಕೊರಗ ಶೆಟ್ಟರು ಇರಾ ಸೋಮನಾಥೇಶ್ವರ ಯಕ್ಷಗಾನ ಮೇಳವನ್ನು ಕಟ್ಟಿ ಅದರ ಸಂಚಾಲಕರಾಗಿದ್ದಾಗ, ನಾನು ತೆಂಕುತಿಟ್ಟಿನ ಮೇಳದಲ್ಲಿ ಒಂದೋ, ಎರಡೋ ವರ್ಷ ವೇಷಧಾರಿಯಾಗಿದ್ದೆ. ಆಗ ಅದೇ ಮೇಳದಲ್ಲಿ ಇದ್ದವರು ಇವರು. ಅದರಲ್ಲಿ ಹೆಚ್ಚಾಗಿ ನಡೆಯುತ್ತಿದ್ದುದು 'ಹರಿಶ್ಚಂದ್ರ' ಎಂಬ ಪ್ರಸಂಗ. ಆ ಪ್ರಸಂಗದಲ್ಲಿ ರಾಮಯ್ಯ ರೈಗಳದ್ದೇ 'ಚಂದ್ರಮತಿ'ಯ ಪಾತ್ರ. ಆ ಪಾತ್ರದಲ್ಲಿ ಇವರನ್ನು ಮೀರಿದ ಪಾತ್ರ ನಿರ್ವಹಣೆಯ ಕಲಾವಿದ ಆ ಕಾಲದಲ್ಲಿ ಯಕ್ಷಗಾನ ಪ್ರಪಂಚದಲ್ಲಿ (ಆಟ) ಮತ್ತೊಬ್ಬನಿಲ್ಲ ಎಂದು ಪ್ರಖ್ಯಾತವಾಯಿತು. ಅದು ಇವರ ಆ ಸ್ತ್ರೀ ವೇಷದ ರೂಪರೇಖಾ ಸೌಂದರ್ಯ ಪ್ರದರ್ಶನದಿಂದ ಬಂದ ಖ್ಯಾತಿ ಅಲ್ಲ. ಆದರೆ, ಆ ಪ್ರಸಂಗದ ಹರಿಶ್ಚಂದ್ರನಿಗೆ ತಕ್ಕಂತೆ ನಡೆದುಕೊಂಡ ಇವರ ಅಭಿನಯ ಕೌಶಲ್ಯದಿಂದ, ಜನಮೆಚ್ಚುಗೆಯಿಂದ ಬಂದ ಖ್ಯಾತಿ. ಪತಿಹಿತಸಾಧನಾತ್ಮಕವಾದ 'ಪಾತಿವ್ರತ್ಯ' ಎಂಬ ಸ್ತ್ರೀ ಚರಿತ್ರೆಯಲ್ಲಿ ಅವಶ್ಯವಿರಬೇಕಾದ ಧರ್ಮಾಚರಣೆಯನ್ನು ಯುಕ್ತಿಯಿಂದ ಜನಮನಕ್ಕೆ ಬೋಧಿಸುವ ಸತ್ಪರಿಣಾಮಕಾರಕ ವಾಚಿಕಾಭಿನಯ, ಮತ್ತದಕ್ಕೆ ಪೋಷಕವೂ ಪೂರಕವೂ ಆದ ಅಭಿನಯ ಸಾಹಚರ್ಯ– ಇದು ಇವರ 'ಚಂದ್ರಮತಿ' ಪಾತ್ರಕ್ಕೆ ಜನ ಶ್ಲಾಘನೆಯನ್ನು ತರುತ್ತಿತ್ತು. "ಬಡತನವು ಬಂದಾಗ ಬೈದುಕೊಳ್ಳಲು ಬಾರದು" ಎಂಬ ಲೋಕ ನೀತಿಗೆ ಇವರ 'ಚಂದ್ರಮತಿ' ಪಾತ್ರವು ಒಂದು ಆದರ್ಶವನ್ನು ಕೊಡುವಂತಿತ್ತು. ಸಾಂಸಾರಿಕ ಜೀವನದಲ್ಲಿ ಪುತ್ರಮೋಹ, ಪುತ್ರವಾತ್ಸಲ್ಯ, ಪುತ್ರಶೋಕ– ಇವುಗಳ ಧಾರ್ಮಿಕ ಸ್ವರೂಪ ಏನು...? ನೈತಿಕ ಬಗೆ ಯಾವುದು ಎಂಬುದನ್ನು ಸುಲಲಿತವಾಗಿ ಜನಮನಗ್ರಾಹ್ಯವಾಗುವಂತೆ ಬೋಧಿಸುವ ವರ್ಚಸ್ವೀ ಅಭಿನಯ ಇವರದ್ದಾಗಿತ್ತು. ತಮ್ಮ 'ಚಂದ್ರಮತಿ' ಪಾತ್ರದಲ್ಲಿ. ಅಂದಿನ ಸಮಗ್ರ ಯಕ್ಷಗಾನ ಪ್ರಪಂಚದಲ್ಲಿ (ಆಟ) ಇವರದಿದ್ದಂಥ 'ಚಂದ್ರಮತಿ' ಪಾತ್ರವನ್ನು ಬೇರೆಲ್ಲಿಯೂ ಜನ ನೋಡಿರಲಿಕ್ಕಿಲ್ಲ ವೆಂದು ನನಗನ್ನಿಸಿದೆ. ಇವರು ಸ್ತ್ರೀ ವೇಷ ಮಾಡುತ್ತಿದ್ದ ಅಂದಿನ ಆ ಇರಾ ಸೋಮನಾಥೇಶ್ವರ ಮೇಳದಲ್ಲಿ ನಾನೂ ಒಬ್ಬ ವೇಷಧಾರಿಯಾಗಿ (ಸ್ತ್ರೀವೇಷ ಅಲ್ಲ)

ಇವರ ಸಂಗಡ ಸಹೋದ್ಯೋಗಿಯಾಗಿ ಇದ್ದವನಾದುದರಿಂದ, ನನ್ನ ಸ್ವಾನುಭವದ ಅಧಿಕಾರದಿಂದ ನನ್ನೀ ಅಭಿಪ್ರಾಯವನ್ನು ಪ್ರಕಟಿಸುತ್ತಿದ್ದೇನೆ ಅಷ್ಟೆ.

ಯಕ್ಷಗಾನದ ವೇಷಧಾರಿಗಳಲ್ಲಿ ಕೆಲವರಿಗೆ ದೈವಾಯತ್ತವಾದ ಪ್ರಾಕೃತಿಕ ಸಂಪತ್ತು ಆಶ್ರಯ ಕೊಡುವುದುಂಟು. ಕೆಲವರಿಗೆ ದೇಹಸೌಷ್ಟವ, ಕೆಲವರಿಗೆ ರೂಪ ಸೌಂದರ್ಯ, ಕೆಲವರಿಗೆ ಸ್ವರ ಗಾಂಭೀರ್ಯ – ಹೀಗೆ ಯಾವುದೋ ಒಂದು ಬಗೆಯ ಪ್ರಾಕೃತಿಕ ಲಕ್ಷಣವು ಒಬ್ಬೊಬ್ಬರಿಗೆ ಇರುವುದುಂಟು. ವೇಷಧಾರಿಯು ತನ್ನ ಆ ಪ್ರಾಕೃತಿಕ ಸಂಪತ್ತನ್ನು ಆಶ್ರಯಿಸಿ ಅದಕ್ಕೆ ತಕ್ಕುದಾಗಿ ಹಿಡಿಸುವ ವೇಷವನ್ನು ವಹಿಸಿ, ಪಾತ್ರ ನಿರ್ವಹಣೆಯಲ್ಲಿ ಕೃತಾರ್ಥನಾಗುತ್ತಾನೆ. ರಂಜಿಸುತ್ತಾನೆ. ದೃಷ್ಟಾಂತಕ್ಕೆ, ಬಡಗು ಮಟ್ಟಿನಲ್ಲಿ ದಿ। ಗ। ಹಾರಾಡಿ ರಾಮ, ಇವರಿಗೆ ರೂಪ ಸೌಂದರ್ಯ, ದೇಹ ಸೌಷ್ಟವ (ಆಳಂಗ) ಇವು ಸಹಜ ಗುಣಗಳಿದ್ದವು. ಇಂಥ ಗುಣಗಳನ್ನು ಸಹಕಾರಿ ಆಧಾರವನ್ನಾಗಿ ನಿಯೋಜಿಸಿಕೊಂಡು, ವೇಷಧರಿಸಿ, ಪ್ರಕಾಶಕ್ಕೆ ಬಂದವರು. ದಿ। ಗ। ಗಣಪತಿ ಪ್ರಭು ಎಂಬವರು ರೂಪ ಸೌಂದರ್ಯ, ಸ್ವರ ಗಾಂಭೀರ್ಯ, ದೈಹಿಕ ಆಯ ಆಕಾರಗಳನ್ನು ಪ್ರಾಕೃತಿಕ ಗುಣವಾಗಿ ಹೊಂದಿದವರಾಗಿ ಇದ್ದು, ಅವುಗಳನ್ನು ಅನುಕೂಲಕ್ಕಾಗಿ ಬಳಸಿಕೊಂಡು ಪ್ರಸಿದ್ಧ ವೇಷಧಾರಿಗಳಾಗಿದ್ದರು. ತೆಂಕುತಿಟ್ಟಿನಲ್ಲಿ ಕರ್ಗಲ್ಲು ಸುಬ್ಬಣ್ಣ ಭಟ್ಟರು, ಕುಂಬಳೆ ಗುಂಡಣ್ಣ ಮುಂತಾದ ಕೆಲವು ಪ್ರಸಿದ್ಧ ವೇಷಧಾರಿಗಳಾಗಿದ್ದವರಿಗೆ ಅವರವರ ರೂಪ ಸೌಂದರ್ಯವೇ ಮೊದಲಾದ ಸಹಜ (ಪ್ರಾಕೃತಿಕ) ಗುಣಗಳೇ ಅವರವರ ಕಲಾವೃತ್ತಿಯ ಪ್ರಖ್ಯಾತಿಗೆ ಸಹಾಕರ ನೀಡಿದವು. ಇನ್ನು ಕೆಲವು ವೇಷಧಾರಿಗಳಿಗೆ ಇಂಥ ಪ್ರಕೃತಿದತ್ತ ಸೌಕರ್ಯ, ಸಹಾಯವೇನೂ ಇರುವುದಿಲ್ಲ. ಅಂಥವರು ತಮ್ಮ ಸ್ವತಃ ಪೌರುಷದಿಂದ, ಶ್ರಮವಹಿಸಿ ಸಾಧನೆ ಮಾಡಿ ಕಲಾಸಿದ್ಧಿಯನ್ನು ಪಡೆದು ಉತ್ತಮ ವೇಷಧಾರಿಗಳಾಗುತ್ತಾರೆ. ದೃಷ್ಟಾಂತಕ್ಕಾಗಿ, ಬಡಗುತಿಟ್ಟಿನಲ್ಲಿಯಾದರೆ, ದಿ। ಗ। ಕೊಕ್ಕರ್ಣೆ ಶೀನ (ಸ್ತ್ರೀ ವೇಷ), ದಿ। ಗ। ವೀರಭದ್ರ ನಾಯಕ ಮುಂತಾದವರು. ಇವರೆಲ್ಲ ತಾವೇ ಸಾಧನೆ ಮಾಡಿ, ತಾವು ಹವಿಸಿಕೊಳ್ಳುವ ಪಾತ್ರಕ್ಕೆ ತಕ್ಕ ವೇಷ ಮಾಡುವುದಕ್ಕೆ ಬೇಕಾದ ಕಲಾ ತಂತ್ರಗಳನ್ನು ತಾವೇ ಸ್ವತಂತ್ರವಾಗಿ ಸಿದ್ಧಿಮಾಡಿಕೊಂಡು ಕೃತಾರ್ಥರಾಗಿ ಮೆರೆದವರು. ಇಂಥವರಲ್ಲಿ ದಿ। ಗ। ರಾಮಯ್ಯ ರೈಗಳು ಒಬ್ಬರು ಎಂದು ನಾನು ತಿಳಿದಿರುತ್ತೇನೆ. ಯಾಕೆದಂರೆ, ರಾಮಯ್ಯ ರೈಗಳಿಗೆ ದೈಹಿಕ ಸೌಷ್ಠವವು ವಿಶೇಷದ್ದೇನೂ ಅಲ್ಲ; ರೂಪ ಸೌಂದರ್ಯವಾದರೂ ಹೇಳಿಕೊಂಬುವಂತಾದ್ದೇನೂ ಅಲ್ಲ. ಆದರೆ, ಬರೇ ತನ್ನ ಬುದ್ಧಿ ಕೌಶಲ್ಯದಿಂದ ಸಾಧಿಸಿ ಸಿದ್ಧಿ ಮಾಡಿಕೊಂಡ ಅಭಿನಯ ಚಾತುರ್ಯದಿಂದ, ಚಂದ್ರಮತಿ, ಕಯಾದು ಮುಂತಾದ ಸ್ತ್ರೀ ಪಾತ್ರಗಳನ್ನೂ, ಸುಧನ್ವ, ತಾಮ್ರಧ್ವಜ, ಋತುಪರ್ಣ ಮೊದಲಾದ ಪುರುಷ ಪಾತ್ರಗಳನ್ನೂ ಸಮರ್ಪಕವಾಗಿ, ಜನಾಕರ್ಷಕವಾಗಿ, ಒಳ್ಳೆ ಗ್ರಾಹ್ಯವಾಗಿ ಮಾಡುತ್ತಿದ್ದರು; ಯಕ್ಷಗಾನ ವೇಷಧಾರಿಗಳಲ್ಲಿ ಇವರು ಅಗ್ರಪಂಕ್ತಿಯವರೆಂದೇ ಖ್ಯಾತರಾದರು. ದೈವಾಯತ್ತವಾಗಿ ಇವರಿಗೆ ಪ್ರಾಕೃತಿಕವಾದ ದೈಹಿಕ ಸೌಷ್ಟವ ಇರುತ್ತಿದ್ದರೆ, ಇವರ ರಾವಣ, ಕಂಸ, ಶೂರಪದ್ಮ ಮುಂತಾದ ರಾಕ್ಷಸ ವೇಷಗಳನ್ನು ಕಂಡು ಖುಷಿಪಡುವ

ಭಾಗ್ಯ ಜನಕ್ಕೆ ದೊರೆಯುತ್ತಿತ್ತು. (ಇವರ ತಂದೆಯವರೋ, ಇಂಥ ವೇಷಗಳನ್ನೂ ಮಾಡುತ್ತಿದ್ದ ಕಲಾವಿದರಿದ್ದರು.)

ಯಕ್ಷಗಾನ ಕಲಾವಿದರಲ್ಲಿ, ಎಲ್ಲರಿಗೂ ಅಲ್ಲ, ಕೆಲವರಿಗೆ, ಬಹಿರಂಗಕ್ಕೆ ಪ್ರಕಟಿಸಲಿಕ್ಕೆ ಸಲ್ಲದ, ಸಂಭಾವಿತತನಕ್ಕೆ ಹೆದರಿ ಗೋಪ್ಯವಾಗಿ ಇರುವ, ದುರ್ವ್ಯಸನ ಇರುವುದಿದೆ. ಅಂಥ ದುರ್ವ್ಯಸನಗ್ರಸ್ತರಾದ ಕೆಲವು ನಟರು ತಮ್ಮ ಕಲಾವೃತ್ತಿಯಲ್ಲಿ ಗೆದ್ದು, ಪ್ರಖ್ಯಾತಿ ಪಡೆದವರಾದರೂ, ತಮ್ಮ ಖಾಸಗಿ ಜೀವನದಲ್ಲಿ ದಾರಿದ್ರ ರೋಗಾದಿಗಳಿಂದ ಕಷ್ಟಪಟ್ಟದ್ದಲ್ಲದೆ, ಯಕ್ಷಗಾನ ಸಂಸ್ಥೆಗೆ (ಮೇಳ) ಜನತೆಯಿಂದ ಸಿಗುತ್ತಿದ್ದ ಸಹಜ ಗೌರವಕ್ಕೂ ಮಾರಕವಾದದ್ದುಂಟು. ಆದರೆ, ಇಂಥ ದುಸ್ಥಿತಿ ಯಕ್ಷಗಾನ ಸಂಸ್ಥೆಗೆ ಬಾರದಂತೆ, ಕೆಲವು ಸಂಭಾವಿತ ಕಲಾವಿದರು, ದುರ್ವ್ಯಸನಿಗಳ ಸಂಗಡವೇ ಮೇಳದಲ್ಲಿ ಇರಬೇಕಾದ ಅನಿವಾರ್ಯ ಸಂದರ್ಭ ಇದ್ದರೂ, ತಾವು ವಿವೇಕಿಗಳಾಗಿ ಜಾಗೃತರಾಗಿದ್ದು, ದುರ್ವ್ಯಸನರಹಿತರಾಗಿದ್ದು, ಶುದ್ಧರಾಗಿಯೇ ತಮ್ಮ ಕಲಾಜೀವನವನ್ನು ನ್ಯಾಯವತ್ತಾಗಿಯೇ ಸಾಗಿಸುತ್ತಾರೆ. ಇದರಿಂದ ಅವರೂ ಯಕ್ಷಗಾನ ಕಲಾದೇವಿಯನ್ನು ಸರಿಯಾಗಿ ಆರಾಧನೆ ಮಾಡಿ, ಧನ್ಯರಾಗಿದ್ದಾರಲ್ಲದೆ, ಯಕ್ಷಗಾನ ಸಂಸ್ಥೆಗೂ (ಮೇಳಕ್ಕೂ)ಜನತೆಯಿಂದ ಗೌರವ ಉಳಿಯುವಂತೆ ಮಾಡುತ್ತಾರೆ. ದಿ| ಗ| ರಾಮಯ್ಯ ರೈಗಳು ಅಂಥ ಸುವಿವೇಚನಾ ಸಂಪನ್ನ ಸಂಭಾವಿತರಲ್ಲಿ ಒಬ್ಬರು ಎಂದು ಮರೆಯಲಾಗದು.

ಅಂತು, ದಿ| ಗ| ರಾಮಯ್ಯ ರೈಗಳು ತಮ್ಮ ಕಲಾಜೀವನದ ಹಿರಿಮೆಯಿಂದಲೂ, ತಮ್ಮ ಸ್ವಕೀಯ ಶುಭಗುಣ ಸಂಪನ್ನತೆಯಿಂದಲೂ ನಮಗೆಲ್ಲ ಸ್ಮರಣೀಯರೇ ಹೌದು.

* * *

ಒಮ್ಮೆ ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಮಹಾನವಮಿಯ ಕಾಲ, ಬಡಗುತಿಟ್ಟಿನ ಪ್ರಸಿದ್ಧ ಯಕ್ಷಗಾನ ಕಲಾವಿದರ ಕೂಡುವಿಕೆಯ ಆಟವನ್ನು ನೋಡಿದ, ಅಂದಿನ ಶ್ರೀ ಕ್ಷೇತ್ರದ ಧರ್ಮಾಧಿಕಾರಿಗಳಾದ ದಿ| ಮಂಜಯ್ಯ ಹೆಗ್ಗಡೆಯವರು, ಬಡಗು ತಿಟ್ಟಿನವರ ಮುಂದೆ, ತೆಂಕುತಿಟ್ಟಿನ ಯಕ್ಷಗಾನ ಕಲಾವಿದರ ಆಟವೇ ಬೇಡವೆಂದು ತೀರ್ಮಾನಿಸಿದ್ದಾಗ, ಶ್ರೀ ಹೆಗ್ಗಡೆಯವರಲ್ಲಿ ಸ್ಪರ್ಧೆಗೆ ನಿಂತು, "ತೆಂಕು ತಿಟ್ಟಿನವರು ಬಡಗು ತಿಟ್ಟಿನವರಿಗಿಂತ ಕಡಿಮೆಯವರಲ್ಲವೆಂಬುದನ್ನು ಸಿದ್ಧಾಂತಗೊಳಿಸುತ್ತೇನೆ" ಎಂದು ನಾನು ಎದೆತಟ್ಟಿ ಹೇಳಿದ್ದು ಶ್ರೀ ಅಳಿಕೆ ರಾಮಯ್ಯ ರೈಗಳ ಪಾತ್ರ ನಿರ್ವಹಣೆಯ ಮೇಲಿನ ಧೈರ್ಯದಿಂದ. ಅಂದು ಶಕುಂತಳಾ ಪರಿಣಯದ್ದ ದುಷ್ಯಂತನ ಪಾತ್ರವನ್ನು ಶ್ರೀ ಹೆಗ್ಗಡೆಯವರೂ, ಸರ್ವ ಪ್ರೇಕ್ಷಕರೂ "ಭಲೇ" ಎಂದು ಹೊಗಳುವಂತೆ ಅಭಿನಯಿಸಿದವರು ಶ್ರೀ ಅಳಿಕೆ ರಾಮಯ್ಯ ರೈಗಳು. ಸದ್ರಿಯವರ ನಿಧನದಿಂದ ತೆಂಕು ತಿಟ್ಟಿನ ಯಕ್ಷಗಾನ ಕಲೆಗೆ ಅಪಾರ ನಷ್ಟವಾಗಿದೆ ಯೆಂಬುದು ನಿರ್ವಿವಾದ. ಈ ಕಲೆಯ ರಂಗಸ್ಥಳಕ್ಕೆ ಹೊಸತಾಗಿ ಪ್ರವೇಶಿಸುವವರು ದಿ| ರಾಮಯ್ಯ ರೈಗಳ ಆದರ್ಶವನ್ನು ಇರಿಸಿಕೊಳ್ಳುವುದು ಶ್ರೇಯಸ್ಕರ.

**ಅಗರಿ ಶ್ರೀನಿವಾಸ ಭಾಗವತ** (ದಿವಂಗತರು)



# ಗೆಳೆತನಕ್ಕೆ ಕಾರಣನಾದವ ಅತಿಕಾಯ

**ನೆಡ್ಲೆ ನರಸಿಂಹ ಭಟ್ಟ**

ಅಳಿಕೆ ರಾಮಯ್ಯ ರೈಗಳು ಶಾಲೆಗೆ ಹೋಗುತ್ತಿರುವಾಗಲೇ ನಾಲ್ಕನೇ ತರಗತಿಯಲ್ಲಿ ವಿಟ್ಲದ ಎರುಂಬು ದೇವಸ್ಥಾನದಲ್ಲಿ 14ನೆ ವಯಸ್ಸಿನಲ್ಲಿ ಅವರ ಅತಿಕಾಯನ ಅರ್ಥವನ್ನು ಕೇಳಿದ ಅಂದಿನಿಂದ ಅವರ ಸ್ನೇಹ ಬೆಳೆಯಿತು.

ಕೆಲವು ವರ್ಷಗಳ ನಂತರ ರೈಗಳು ಮವ್ವಾರ್ ಕಿಟ್ಟಣ್ಣ ಭಾಗವತರಲ್ಲಿ ಸಂಗೀತ ಮತ್ತು ಭಾಗವತಿಕೆ ಅಭ್ಯಾಸ ಮಾಡಿ ಅಚ್ಚಣ್ಣ ಮದ್ಲೆಗಾರರ ಯಜಮಾನಿಕೆಯಲ್ಲಿ ಅಭಿಮನ್ಯು, ಬಬ್ರುವಾಹನ, ಕುಶಲವರು, ಪೀಠಿಕೆ ಸ್ತ್ರೀವೇಷ ಇಂತಹ ವೇಷಗಳನ್ನು ಮಾಡಿ ಉತ್ತಮ ಹೆಸರುಗಳಿಸಿದರು. ಈ ಸಮಯದಲ್ಲಿ ನಾನು ಕೆಮ್ಮಣ್ಣು ನಾರಣಪ್ಪಯ್ಯನವರ ಹತ್ತಿರ ಚೆಂಡೆ, ಮದ್ದಳೆ ಅಭ್ಯಾಸ ಮಾಡುತ್ತಿದ್ದೆ. ನಮ್ಮೂರಲ್ಲಿ ಮಳೆಗಾಲದಲ್ಲಿ (ವಿಟ್ಲ) ಹಳ್ಳಿಯಲ್ಲಿ ರಾಮಾಯಣ ಭಾರತ ತಾಳಮದ್ದಳೆ ಆಗುತ್ತಿತ್ತು. ಆ ಸಮಯದಲ್ಲಿ ನನ್ನ ಮದ್ದಳೆ ಕೇಳಿ ರೈಗಳು ಮತ್ತು ಅವರ ತಂದೆ ಮೋನು ಶೆಟ್ರು ಈ ಹುಡುಗ ನಮ್ಮ ಮೇಳಕ್ಕೆ ಆಗಬಹುದೆಂದು ಕರೆದುಕೊಂಡು ಕಟೀಲು ಮೇಳಕ್ಕೆ ಹೋದರು. ಕಟೀಲು ಮೇಳದಲ್ಲಿ ಆ ನಂತರ ರಾಮಯ್ಯ ರೈಗಳು ಸಿರಿಮುಡಿ ವೇಷ ಅಲ್ಲದೆ ಅಂಬೆ, ದಯಮಂತಿ, ಗೌರಿ ಕೆಲವು ಕಿರೀಟ ವೇಷಗಳನ್ನು ಮಾಡುತ್ತಿದ್ದರು. ಅವರು ಯಾವ ವೇಷ ಮಾಡಿದರೂ ಜನರು ಅವರನ್ನು ಗುರುತಿಸಿಕೊಳ್ಳುವಂತೆ ಆಗುತ್ತಿತ್ತು. ರಂಗಸ್ಥಳದ ಎದುರು ನಿಂತು, ಸಭೆಯಲ್ಲಿ ಕುಳಿತು ಅವರ ವೇಷ ನೋಡುತ್ತಿದ್ದೆ.

ಆ ವೇಷದ ಬಗ್ಗೆ ನನ್ನಲ್ಲಿ ಸಲಹೆ ಕೇಳಿಕೊಳ್ಳುತ್ತಿದ್ದುದು ಅವರ ವಿಶಿಷ್ಟವಾದ ಗುಣ. ನನಗೆ ಅರ್ಥ ಜ್ಞಾನ ಕಮ್ಮಿ ಆಗಿದ್ದರೂ ಆಗಲೇ ರಂಗದ ಮಟ್ಟಿಗೆ ಕೊರತೆಯಾದು ದನ್ನು ಕೇಳಿದರೆ ಹೇಳುವ ಅಭ್ಯಾಸವಿತ್ತು.

ಆಮೇಲೆ ಇಲ್ಲಿ ಕುಂಡಾವು ಮೇಳದಲ್ಲಿ ಕೆಲವು ವರ್ಷ ದೊಡ್ಡ ಬಲಿಪರ ನೇತೃತ್ವದಲ್ಲಿ ರಾಮಯ್ಯ ರೈಗಳು ಶಶಿಪ್ರಭೆ, ದ್ರೌಪದಿ, ಕುಶಲವರ ಕಾಳಗದ ಸೀತೆ, ಕೆಲವು ತಲೆಬಿಟ್ಟ ಬಣ್ಣಗಳು, ರಾವಣ ವಧೆಯ ರಾಮ ಇಂತಹ ವೇಷಗಳನ್ನು ಮಾಡಿ ಬಹಳ ಪ್ರಖ್ಯಾತಿ ಪಡೆದರು. ಆ ಮೇಲೆ ಅಗರಿ ಶ್ರೀನಿವಾಸ ಭಾಗವತರ ತಿರುಗಾಟದಲ್ಲಿ ದುಷ್ಯಂತ, ಸುಧನ್ವ ಇಂತಹ ವೇಷಗಳನ್ನು ಮಾಡಿ, ಕುಪ್ಪೆಪದವಿನಲ್ಲಿ ಪೊಳಲಿ ಶಾಸ್ತ್ರಿಗಳು ಬೆಳಗಿನ ತನಕ ಆಟ ನೋಡುವಂತೆ ಅಭಿನಯಿಸಿದರು. ಕೇಶಾವರಿ ಕಿರೀಟ ಬಿಟ್ಟರೆ ಮತ್ತೆ ಯಾವ ವೇಷ ಮಾಡುವುದಕ್ಕೂ ಸಿದ್ಧರಿದ್ದರು.

ಅಗತ್ಯ ಬಿದ್ದಲ್ಲಿ ಭಾಗವತಿಕೆ ಮಾಡುವುದಕ್ಕೂ ಹಿಂಜರಿಯದ ವ್ಯಕ್ತಿ ಅವರು. ಪೇಜಾವರದಲ್ಲಿ 'ದ್ರೌಪದಿ ಪ್ರತಾಪ' ಪ್ರಸಂಗ ಪದ್ಯಗಳನ್ನು ಅಂದವಾಗಿ ಹಾಡಿದ್ದಾರೆ. ಆ ಸಂದರ್ಭದಲ್ಲಿ ವಿಠಲ ಶಾಸ್ತ್ರಿಗಳು ಕೂಡ ವೇಷ ಮಾಡಿ ಇವರ ಪದ್ಯಕ್ಕೆ ಅಭಿನಯಿಸಿದ್ದಾರೆ.

ಇನ್ನು ಮುಂದೆ ವೇಷ ಮಾಡುವವರು ಪದ್ಯ ಹೇಳುವುದಕ್ಕೆ ಸಾಧ್ಯವಾಗದಿರಬಹುದು. ಆದರೂ ಪದ್ಯ ಹೇಳುವ ಅನುಭವ – ಲಯ ಇಲ್ಲದೆ ವೇಷ ಮಾಡಿದರೆ ಅದು ಪರಿಪೂರ್ಣವಾಗದು.

* * *

.... ಬಹುಕಾಲ ಜತೆಗಾರರಾಗಿ ತಿರುಗಾಟ ನಡೆಸಿದವರು ಆತ್ಮೀಯರಾದ ನಾವು. ನಮ್ಮ ಸ್ತ್ರೀ ಪುರುಷ ಪಾತ್ರ ಜೋಡಿಗಳಿಗೆ ತುಂಬಾ ಹೆಸರಿತ್ತು. ಭಾವಪೂರ್ಣ ಮಾತುಗಾರಿಕೆ, ಉತ್ತಮ ನಾಟ್ಯಾಭಿನಯದಿಂದ ಜನಮನ ಸೂರೆಗೊಂಡ ಮಹಾನ್ ಕಲಾವಿದ... ಅವರು ಕಟೀಲು ಮೇಳದಿಂದ ಕರ್ನಾಟಕ ಮೇಳಕ್ಕೆ ವರ್ಗಾವಣೆಗೊಂಡುದೆ, ನಾನು ಅಕಾಲದಲ್ಲಿ ನಿವೃತ್ತನಾಗಲು ಮುಖ್ಯವಾದ ಕಾರಣ.

**ಕಡಂದೇಲು ಪುರುಷೋತ್ತಮ ಭಟ್, ಕಟೀಲು** (ದಿವಂಗತರು)

..... ಯಕ್ಷಗಾನದ ನೈಜ ಸರ್ವಾಂಗ ಸುಂದರ ವೇಷಧಾರಿ. ಬಡಗುತಿಟ್ಟಿನ ಶ್ರೇಷ್ಠರಾದ ಹಾರಾಡಿ ರಾಮ ಗಾಣಿಗರ ಗತ್ತು, ಮಾರ್ವಿ ರಾಮಕೃಷ್ಣ ಹೆಬ್ಬಾರರ ಭಾವಪೂರ್ಣತೆ, ಕೃಷ್ಣ ಗಾಣಿಗರ ಮಿಂಚಿನ ಚಲನೆ. ವೀರಭದ್ರ ನಾಯಕರ ಮಾತು ಅಭಿನಯ – ಎಲ್ಲ ಒಂದಾದಂತೆ ಇದ್ದವರು ಅಳಿಕೆಯವರು.

**ಎಚ್. ಶ್ರೀಧರ ಹಂದೆ, ಕೋಟ**



# ನನ್ನ ಅನುಭವದಂತೆ ಅಳಿಕೆಯವರು

**ಬಲಿಪ ನಾರಾಯಣ ಭಾಗವತ**

ಯಕ್ಷಗಾನ ಸರ್ವ ಶ್ರೇಷ್ಠ ಕಲೆ. ಹಾಡುಗಾರನು (ಭಾಗವತ) ಪ್ರಸಂಗ ಕಂಠ ಪಾಠ, ಚೆಂಡೆಮದ್ದಳೆಯ ಸಾಕಷ್ಟು ಜ್ಞಾನ, ನೃತ್ಯದ ಗತಿಯ ಬಲ್ಲಿದನಾಗಿರುತ್ತಿದ್ದ. ಅಲ್ಲದೆ ರಸಜ್ಞಾನ, ನಾಲ್ಕು ಕಾಲಗಳ ವಿವೇಚನ, ಕವಿತಾಶಕ್ತಿ ರಂಗಕ್ಕೆ ಬೇಕಾದಷ್ಟು ಇತ್ತು. ಮದ್ದಳೆಗಾರನಿಗೆ ಚೆಂಡೆ ಸಮೇತ, ನೃತ್ಯಾನುಭವದ, ಪದ್ಯಾನುಭವ ಕಥಾನುಭವ ಸಾಕಷ್ಟಿತ್ತು. ರಸಾನುಭವ, ನಾದಾನುಭವ ಹಿಂದಿನವರಿಗೆ ಸ್ವಲ್ಪ ಕಡಿಮೆಯೇ ಆದರೂ, ಆ ಕಾಲಕ್ಕೆ ಆ ಜನರಿಗೆ ಪ್ರತ್ಯಕ್ಷ ಕಂಡ ಅನುಭವದ ಪರಿಣಾಮ ಕಥಾನಕಗಳಿಂದ ತೋರುತ್ತಿತ್ತು. ಕಲಾವಿದರೆಲ್ಲರನ್ನು ಆಟ ಮುಗಿಯುವವರೆಗೆ ಪ್ರೇಕ್ಷಕರು ರಾಜ ಮರ್ಯಾದೆಯಲ್ಲಿ ಕಾಣುತ್ತಿದ್ದರು. ಒಂದೇ ಪ್ರಸಂಗವನ್ನು ಪ್ರೇಕ್ಷಕರಿಗಾಗಿ ಅವರ ಮತದಂತೆ ಕರೆದು ಹೇಳಿ ಆಡಿದ ಪ್ರತೀತಿಗಳು ಕೇಳಿ ಬಂದದ್ದಿದೆ. ನನ್ನ ಸ್ವಾನುಭವಕ್ಕೂ ಉಂಟು.

ಈ ಪರಂಪರೆಯ ಕಾಲದವರಾದ ರೈಗಳು ಯಕ್ಷಗಾನದ ನಿಜವಾದ ತಿರುಳನ್ನು ಅನುಸರಿಸಿಕೊಂಡು ಬಂದ ಒಬ್ಬ ಸರ್ವ ಶ್ರೇಷ್ಠ ಕಲಾವಿದ. ಅವರ ಹೆಚ್ಚಿನ ಅನುಭವ ನನಗಿಲ್ಲ. ಅವರ ವೃದ್ಧಾಪ್ಯದ ಮೂರು ವರ್ಷದ ಕಟೀಲು ಮೇಳದ ತಿರುಗಾಟ ಮಾತ್ರ ಗೊತ್ತು. ಈ ಮಧ್ಯೆ ನನ್ನ ಎಳೆ ಪ್ರಾಯದಲ್ಲಿ, ಶಶಿಪ್ರಭೆ, ರಾವಣ ವಧೆಯ ಮಂಡೋದರಿ,

ಮಾಯಾ ಪೂತನಿ ಇತ್ಯಾದಿಗಳನ್ನು ನೋಡಿದ್ದೇನೆ. ಭೀಷ್ಮ ವಿಜಯದ ಭೀಷ್ಮ, ಅಗ್ರ ಪೂಜೆಯ ಶಿಶುಪಾಲ, ಪುಂಡು ವೇಷದಲ್ಲಿ, ಚಂದ್ರಹಾಸದ ಮದನ, ಅಭಿಮನ್ಯು, ಕುಶ, ಲಕ್ಷ್ಮಣ, ರಾಮ, ಭರತ ಮೊದಲಾದವುಗಳನ್ನು ಕಂಡು ನಾನು ಸಂತೃಪ್ತನಾಗಿದ್ದೇನೆ. ಪಾತ್ರ ಗೌರವ, ರಂಗ ಮರ್ಯಾದೆ, ಸಮಯಾನುಸಾರದ ಅರ್ಥದ ಮಿತಿ, ವೇಗಗಳು ನೃತ್ಯ ಹಾಡು, ವಾದ್ಯಗಳ ವಾದನಗಳಿಗೆ ತಕ್ಕಂತಿತ್ತು. ಮವ್ವಾರು ಕಿಟ್ಟಣ್ಣ ಭಾಗವತರಿಂದ ಪಡೆದ ತಿರುಗಾಟದ ಅನುಭವ ಸಾಕಷ್ಟಿತ್ತು.

ಇನ್ನೊಂದು ಗುಣ:– ದಿ। ರಾಮಯ್ಯ ರೈಗಳಿಗೆ ಕೇಳಿದರೆ ಹೇಳಿ ಕೊಡುವ ಗುಣ ಅವರಿಗಿರಲಿಲ್ಲ. ರಂಗದಲ್ಲಿ ತಪ್ಪನ್ನು ಸಹಿಸದ ಕಲಾವಿದ. ತನ್ನದಾದರೂ ಅವರಿಗೆ ಒಂದೇ ಒಂದು ತಪ್ಪು ತನ್ನಲ್ಲಿ ಬಂದರೆ ಅಡಿಗಡಿಗೆ ಹೇಳಿ ಹೀಗಾಯಿತು ಎನ್ನುತ್ತಿದ್ದರು. ಇನ್ನೊಬ್ಬರ ತಪ್ಪನ್ನಂತೂ ರಂಗದಲ್ಲಾದರೆ ಅವರು ಮಹಾ ನಿಷ್ಠುರರಾಗುತ್ತಿದ್ದರು. ಮದ್ದಳೆಗಾರರಾಗಲಿ, ಭಾಗವತನೇ ಆಗಿರಲಿ, ಏನಾದರೂ ತಪ್ಪು ಸಮಸ್ಯೆಗಳು ಬಂದಲ್ಲಿ ವಿಚಾರಿಸಿ ಸಮಾಧಾನ ಹೊಂದುತ್ತಿದ್ದರು.

ಮತ್ತೊಂದು ಗುಣ:– ಉಳಿದವರು ಎಷ್ಟೇ ಅನುಭವಿ ವಿದ್ವಾಂಸನಾದರೂ ಅವರ ವೇಷ ಅರ್ಥದ ಬಗ್ಗೆ ವಿಮರ್ಶೆ ಅನುಭವಗಳನ್ನು ಹೇಳಿದರೆ ಎದುರಲ್ಲಿ ಒಪ್ಪಲಾರರು. ನಿಧಾನದಲ್ಲಿ ಅವರಿಗೆ ಕಂಡಲ್ಲಿ ಆ ವಿದ್ವಾಂಸರ ಅನುಭವ ಹೇಳಿಕೆಗಳನ್ನು ಉಪಯೋಗಿಸು ತ್ತಿದ್ದರು. ಸ್ವಂತಿಕೆಯಾಗಿ ಸ್ವಲ್ಪ ಮಟ್ಟಿಗೆ ಅನುಭವಿಗಳು. ಅರ್ಥದಲ್ಲಿ, ನಾಟ್ಯದಲ್ಲಿ ಸನ್ನಿವೇಶದ ಬದಲಾವಣೆ ಸ್ವಂತಿಕೆಗಳಾದರೂ ಸಮರ್ಪಕವಾಗಿತ್ತು. ತನ್ನ ಪಾತ್ರ ಪೋಷಣೆಗೆ ಇದಿರು ಬರುವ ವೇಷಧಾರಿಗೆ ಅವರು ತಾತ್ಕಾಲಿಕ ಗುರುವಾಗಿದ್ದರು. ಅಲ್ಲದೆ ಅವರು ಕಲಿಸಿಕೊಟ್ಟ ಶಿಷ್ಯರು ನನಗೆ ಕೇಳಿ ಗೊತ್ತಿಲ್ಲ. ನನ್ನ ಅನುಭವದಲ್ಲಿ ಹತ್ತು ಸಲ ಕೇಳಿದ್ರೆ ಒಂದು ಸಲ ಹೇಳಿ ತಯಾರಾದ ಎಳೆ ಶಿಷ್ಯರೆಂದರೆ ಪೆರುವಾಯಿ ನಾರಾಯಣ ರೈ ಮತ್ತು ಅಜೆಕಾರು ರಾಜೀವ ಶೆಟ್ಟಿ ಎಂಬವರು ಅವರ ಸೇವೆಯಿಂದ ಸ್ವಲ್ಪ ಕಷ್ಟದಲ್ಲಿ ಸುಧಾರಿಸಿರುತ್ತಾರೆ. ಬೇರೆ ಶಿಷ್ಯರು ಇರಬಹುದು. ಅವರು ಮೇಳದ ಕೂಟದಲ್ಲಿ ಒಕ್ಕೂಟಕ್ಕೆ ಒಲ್ಲದವರಲ್ಲ. ಹಾಗೆಂತ ಸೇರುವವರೂ ಅಲ್ಲ. (ನಾನು ಕಂಡಂತೆ) ವ್ಯಕ್ತಿತ್ವವಾಗಲಿ, ವೇಷದಲ್ಲಾಗಲಿ, ಸ್ವಾಭಿಮಾನಿ. ಅವರಿಗೆ ಅವರೇ ಸಾಟಿ. ದಿ। ಗುಂಡ ಎಂಬ ವೇಷಧಾರಿಯನ್ನು ಮಾತ್ರ ಅವರು ಪದೇ ಪದೇ ಹೊಗಳುತ್ತಿದ್ದರು. ಬೇರಾರನ್ನು ಹೆಚ್ಚು ಹೊಗಳುವುದು, ತೆಗಳುವುದು ಇಲ್ಲ. ಸಾಧು ವ್ಯಕ್ತಿತ್ವ, ತನ್ನಿಂದ ಮೇಲ್ಮಟ್ಟ ಎಂಬವರಲ್ಲಿ ಗೌರವ, ಸ್ವಾಭಿಮಾನ. ರಂಗದಲ್ಲಿ ಪಾತ್ರ ರಸಪೋಷಕನಾದ ವ್ಯಕ್ತಿಯಾಗಿದ್ದ ದಿ। ರಾಮಯ್ಯ ರೈಗಳು ಜೋಡಾಟದಲ್ಲೂ ಎತ್ತಿದ ಕೈ. ತಿರುಗಾಟದಲ್ಲೂ ದಿ। ಬಲಿಪ ಭಾಗವತರು, ಅಗರಿ ಶ್ರೀನಿವಾಸ ಭಾಗವತರು. ನಿಡ್ಲೆ ನರಸಿಂಹ ಭಟ್ಟರು, ದಿ। ಕುದ್ರೆಕೂಡ್ಲು ರಾಮ ಭಟ್ಟರು ಮೊದಲಾದ ಭಾಗವತರು, ಮದ್ದೆಗಾರರು ರೈಗಳ ವೇಷಕ್ಕೇ ಬಂದು ಹಾಡುವುದು. ಚೆಂಡೆ ಮದ್ದೆ ಬಾರಿಸುವುದು ಎಂಬ ಹೆಸರಿಗೆ ಪಾತ್ರರಾದವರು ರೈಗಳು. ಶ್ರೀ ಕೆ. ವಿಠಲ ಶೆಟ್ಟರಿಗೂ ದಿ। ದಾಮೋದರ ಮಂಡೆಚ್ಚರಿಗೂ ಮನಮೆಚ್ಚಿದ ವ್ಯಕ್ತಿಗಳು ದಿ। ರಾಮಯ್ಯ ರೈಗಳು.

ನನ್ನೊಂದಿಗೆ ಅಳಿಕೆಯವರು ಆಗಾಗ ಹೇಳುತ್ತಿದ್ದರು. ಕಟೀಲಿನಲ್ಲೇ ಕಿಟ್ಟಣ್ಣ ಭಾಗವತರೊಂದಿಗೆ ತಿರುಗಾಟ ಮಾಡಿ, ದಿ| ಕೆ. ಕೊರಗ ಶೆಟ್ಟರ ಯಜಮಾನಿಕೆಯಲ್ಲಿ ದಿ| ಬಲಿಪ ಭಾಗವತರ ಮೆಚ್ಚಿನ ವೇಷಧಾರಿಯಾದೆ. ಹಲವಾರು ಪ್ರಸಿದ್ಧ ವೇಷಧಾರಿ, ಭಾಗವತರೊಂದಿಗಿದ್ದು, ಕಡೇಕಾಲಕ್ಕೆ ಕೆ. ವಿಠಲ ಶೆಟ್ಟರ ಕಟೀಲು ಮೇಳದ ಯಜಮಾನಿಕೆಯಲ್ಲಿ ಮತ್ತು ದಿ| ಬಲಿಪರ, ಮವ್ವಾರು ಕಿಟ್ಟಣ್ಣ ಭಾಗವತ (ಪುಳ್ಳಿ), ಬಲಿಪ ನಾರಾಯಣ ಜೊತೆಯಲ್ಲಿದ್ದು ತಿರುಗಾಟವನ್ನು ಪ್ರಸಿದ್ಧವಾದ ಕಟೀಲು ಮೇಳದಲ್ಲೇ ಕೊನೆಗೊಳಿಸುತ್ತೇನೆ ಎಂದವರು ಅದೇ ರೀತಿ ತಿರುಗಾಟ ಮೂರು ವರ್ಷದಲ್ಲಿ ಅಲ್ಪ ಸ್ವಲ್ಪ ಅಸೌಖ್ಯದಿಂದಾಗಿ ಕೊನೆಗೊಳಿಸಿದರು. ಅವರ ಕಲೆ ಅವರೊಂದಿಗೇ ಮರೆಯಾಯಿತು. ಅವರು ಶ್ರೀ ದೇವಿ ಸಾನ್ನಿಧ್ಯವನ್ನು ಸೇರಿದರು.

* * *

ಅಳಿಕೆ ರಾಮಯ್ಯ ರೈಗಳದ್ದು ಮತ್ತು ನನ್ನದು ಸುಮಾರು ಐವತ್ತು ವರ್ಷಗಳ ಒಡನಾಟ. ತಿರುಗಾಟದಲ್ಲಿ ಅವರು ನನ್ನ ಪಾಲಿಗೆ ಗುರು, ಮಾರ್ಗದರ್ಶಕ ಮತ್ತು ಒಳ್ಳೆಯ ಗೆಳೆಯರಾಗಿದ್ದರು. ನನ್ನ ವೇಷ ನೋಡಿ, ಮಾತು ಕೇಳಿ ಮೆಚ್ಚಿದ್ದಾರೆ. ತಪ್ಪು ಗುರುತಿಸಿ ಹೇಳಿದ್ದಾರೆ. ಹಾಗೆಯೇ ಅವರ ವೇಷಗಳ ಕುರಿತು ವಯಸ್ಸಿನಲ್ಲೂ, ಅನುಭವದಲ್ಲೂ ಕಿರಿಯನಾದ ನನ್ನ ಅಭಿಪ್ರಾಯ ಕೇಳಿದ್ದಿದೆ. ತಿರುಗಾಟದ ಸಂದರ್ಭ ಒಡನಾಟದಲ್ಲಿ ನಾವು ಅಂತರಂಗದ ಗೆಳೆಯರಾಗಿದ್ದೆವು.

ವೇಷ, ಕುಣಿತ, ಅರ್ಥಗಾರಿಕೆಯಲ್ಲಿ ತೂಕವನ್ನು ಕಾಪಾಡಿಕೊಂಡು ತೆಂಕುತಿಟ್ಟು ಯಕ್ಷಗಾನದ ಪರಂಪರೆಯನ್ನು ಶ್ರೀಮಂತಗೊಳಿಸಿದ ಅಳಿಕೆ ರಾಮಯ್ಯ ರೈಗಳು, ತನ್ನ ಜತೆಗಿದ್ದವರನ್ನು ಸ್ನೇಹದಿಂದ ನೋಡಿಕೊಳ್ಳುತ್ತಿದ್ದ ಆತ್ಮೀಯ ವ್ಯಕ್ತಿ. ಮೌನವಾಗಿದ್ದೇ ಕಲಾವಿದ ಹೇಗಿರಬೇಕೆಂದು ತೋರಿದ ನಿರ್ದೇಶಕ. ಇಂದು ಯಕ್ಷಗಾನ ಕ್ಷೇತ್ರದಲ್ಲಿ ಮಿಜಾರು ಅಣ್ಣಪ್ಪ ಎಂಬ ಹೆಸರು ಜನಪ್ರಿಯವಾಗಿದ್ದರೆ ಅದರಲ್ಲಿ ಅಳಿಕೆಯವರ ಪ್ರೀತಿ, ಮಾರ್ಗದರ್ಶನದ ಪಾಲು ಬಹಳಷ್ಟಿದೆ.

**ಮಿಜಾರು ಅಣ್ಣಪ್ಪ** (ದಿವಂಗತರು)

ಅಳಿಕೆ ಊರಿಗೆ ಹೆಸರು ತಂದ ಪುಣ್ಯಾತ್ಮ. ಯಕ್ಷಗಾನದ ಗಂಡುಗಲಿ ಕಲಾವಿದ. ಕಲಾಮಾತೆ ಅವರಿಗೆ ಒಲಿದಿದ್ದಳು.

**ಕೆ.ಎಚ್. ದಾಸಪ್ಪ ರೈ**

ಪರಿಪೂರ್ಣ ಕಲಾವಿದ. ಸತತ ಪರಿಶ್ರಮ, ಸಾಧನೆ, ಅನನ್ಯ ಕಲಾಪ್ರೀತಿಗಳಿಂದ ಔನ್ನತ್ಯಕ್ಕೆ ಏರಿದವರು.

**ಕೆ. ಸದಾಶಿವ ಮಾಸ್ಟರ್**



# ಅಳಿಕೆಯವರ ಕೆಲವು ಸ್ತ್ರೀ ಪಾತ್ರಗಳನ್ನು ಅನುಕರಿಸಲು ಪ್ರಯತ್ನಿಸಿದ್ದೇನೆ

**ಕೋಳ್ಯೂರು ರಾಮಚಂದ್ರ ರಾವ್**

ಶ್ರೀ ಅಳಿಕೆಯವರು ಇಂದು ನಮ್ಮನ್ನು ಅಗಲಿ ದೂರವಾದರೂ, ಅವರ ಪಾತ್ರಗಳು ನಮ್ಮನ್ನಗಲದೆ, ಅಮರವಾಗಿ ನಮ್ಮ ಕಣ್ಣ ಮುಂದೆ ಕುಣಿಯುತ್ತಿವೆ.

'ಕಲೆ' ಎಂಬ ಪದಕ್ಕೆ, ಹಲವಾರು ಅರ್ಥಗಳಿದ್ದರೂ, ಎಂದೆಂದೂ ಅಳಿಯದೆ, ಅಳಿಸಲಾಗದೆ, ಉಳಿಯುವ ಒಂದು ಚುಕ್ಕೆಯನ್ನೂ ಕಲೆಯೆಂದೇ ನಾನು ಹೆಸರಿಸುತ್ತೇನೆ. ಅಂತೆಯೇ ಇಂದು ಯಕ್ಷಗಾನ ಕಲಾ ಕ್ಷೇತ್ರದಲ್ಲಿ ಹಾಗೂ ಪ್ರೇಕ್ಷಕರ ಚಿತ್ತಭಿತ್ತಿಯಲ್ಲಿ ತನ್ನ ಕಲೆಯನ್ನು ಅಚ್ಚೊತ್ತಿ, ಸ್ಥಿರಗೊಳಿಸಿ, ಶ್ರೀ ರೈಗಳು ಕಲಾಪ್ರಪಂಚದ ಕಾಲದ ಪರದೆಯ ಹಿಂದೆ ಮರೆಯಾಗಿ ಹೋದರು.

ಶ್ರೀಯುತರು, ಯಕ್ಷಗಾನ ರಂಗದಲ್ಲಿ ಬಾಲಗೋಪಾಲ ರಾದಿಯಾಗಿ, ಬಣ್ಣದ ವೇಷದ ತನಕ ಸಾಗಿದವರು (ಉದಾ– ಹಿರಣ್ಯ ಕಶ್ಯಪು, ಅರುಣಾಸುರ, ವೀರವರ್ಮ).

ಅಭಿನಯದ ಅಂಗಗಳಾದ ಆಹಾರ್ಯ, ಆಂಗಿಕ, ವಾಚಿಕ ಮತ್ತು ಸಾತ್ವಿಕ ಈ ನಾಲ್ಕು ಅಂಗಳಲ್ಲೂ ಸಾಧನೆಯಿಂದ ಸಾಧಿಸಿಕೊಂಡು ಸಮತೋಲವಾಗಿ ಪ್ರದರ್ಶಿಸಿ, ಪರಿಪೂರ್ಣ ಕಲಾವಿದರೆನಿಸಿ ಕೊಂಡವರು ಶ್ರೀಯುತ ಅಳಿಕೆ ರಾಮಯ್ಯ ರೈಯವರು. ಕೆಲವರು ಎಲ್ಲಾ ವೇಷಗಳನ್ನೂ ಧರಿಸುತ್ತಾರೆ. ಆದರೆ, ಶ್ರೀ ರೈಗಳು ಧರಿಸಿದ್ದು ವೇಷವಾಗುತ್ತದೆ. ಇದರಲ್ಲಿ ಅವರ ಸ್ತ್ರೀ ಪಾತ್ರಗಳೂ ಗಮನಿಸುವಂಥಾದ್ದು.

ಯಕ್ಷಗಾನ ಕಲಾ ಶಾಲೆಯಲ್ಲಿ ತರಗತಿಯ ಸರದಿ ಪ್ರಕಾರ ಮೊದಲು ಪುಂಡುವೇಷ, ಆ ಬಳಿಕ ಸ್ತ್ರೀ ವೇಷ, ಮುಂದೆ ರಾಜವೇಷ, (ಅಭಿಮನ್ಯು, ಸುಭದ್ರೆ, ಅರ್ಜುನ), ಈ ಸರದಿಯಂತೆ ಮೊದಲು ಸ್ತ್ರೀವೇಷ. ಮುಂದೆ ರಾಜವೇಷ. ಆದರೆ ಶ್ರೀ ರೈಗಳು

ಹಾಗಲ್ಲ. ಮೊದಲು ರಾಜವೇಷ ಮಾಡುತ್ತಿದ್ದ ಇವರು, ಅನಿವಾರ್ಯವಾಗಿ ಆಮೇಲೆ ಸ್ತ್ರೀ ವೇಷಕ್ಕೆ ಇಳಿಯಬೇಕಾಯಿತು.

ಸಾಮಾನ್ಯವಾಗಿ 1948–49ರಲ್ಲಿ ಶ್ರೀ ಕಲ್ಲಾಡಿ ಕೊರಗ ಶೆಟ್ಟರು, ಬಯಲಾಟವಾಗಿದ್ದ ಯಕ್ಷಗಾನವನ್ನು ಡೇರೆಯ ಆಟವನ್ನಾಗಿ ಮಾರ್ಪಡಿಸಿದರು. ಆಗ ಉತ್ತಮ ವಾಗ್ಮಿಗಳಾದ ಮ.ಶ. ಸಾಮಗರನ್ನು ಕಥಾನಾಯಕನ ಪಾತ್ರಕ್ಕೆ ಆರಿಸಿಕೊಂಡರು. ಆಗ ಅವರ ಜೊತೆಗೆ ನಾಯಕಿಯಾಗಿ, ಅಭಿನಯಿಸುವುದಕ್ಕೆ ಸಮರ್ಥರಾದ ಸ್ತ್ರೀ ಪಾತ್ರಧಾರಿಗಳೇ ಇರಲಿಲ್ಲ.

ಈ ಸಂದಿಗ್ಧ ಸ್ಥಿತಿಯಲ್ಲಿ ಶ್ರೀ ಕೊರಗಶೆಟ್ರು, ಶ್ರೀ ನಾರಾಯಣ ಕಿಲ್ಲೆಯವರೇ ಮೊದಲಾದ ವಿದ್ವಾಂಸರೊಂದಿಗೆ ಸಮಾಲೋಚನೆ ನಡೆಸಿದಾಗ "ರಾಮಯ್ಯ ರೈಗಳಲ್ಲದೆ ಬೇರೆ ಸಮರ್ಥರಿಲ್ಲ" ಹೀಗೆ ನಿರ್ಣಯವಾಯಿತು. ಈ ಒತ್ತಡದಿಂದಾಗಿ ಮುಂದೆ ಹೋದ ಅವರು ಹಿಂದೆ ಬರಬೇಕಾಯಿತು.

ಸಾಮಾನ್ಯವಾಗಿ ಆಗ ಅವರ ವಯಸ್ಸು 34–35. ಹರೆಯ ದಾಟಿರಬೇಕು. ಅದರಲ್ಲೂ ಅವರು ಸ್ಪುರದ್ರೂಪಿಯಲ್ಲ. ಅವರ ಸ್ವರೂಪಕ್ಕೆ ಅವರೇ ನಾಚುತ್ತಿದ್ದರು. ಒರಟಾಗಿರುವ ಮೈ, ಮುಖ ತುಂಬ ಗೆರೆಗಳು, ಇದ್ದ ಕೂದಲಲ್ಲಿ ಒಂದೊಂದು ಬೆಳ್ಳಿಯ ಸರಿಗೆಗಳು (ಆಗ ಟೋಪನು ಉಪಯೋಗವಿರಲಿಲ್ಲ) ಕೋಮಲತೆ ಇಲ್ಲದ ಕಂಠ–ಇಂಥವರ ಸ್ತ್ರೀ ಪಾತ್ರವನ್ನು ಕಂಡು ಪಂಡಿತ, ಪಾಮರ, ಪ್ರೇಕ್ಷಕರು ಮೆಚ್ಚಿದ್ದಾರೆಂದರೆ, ಇದು ಶ್ರೀಯವರ ಕಲಾಪ್ರೌಢಿಮೆಗೊಂದು ಜೀವಂತ ನಿದರ್ಶನವಲ್ಲವೇ...?

ಆ ಕಾಲದಲ್ಲಿ ಪ್ರಸಂಗೋಚಿತವಾಗಿ ಹಾಗೂ ಅವರ ಮನಸ್ಸಿಗನುಸಾರವಾಗಿ ಅವರು ಪ್ರೌಢ ಪಾತ್ರಗಳನ್ನಲ್ಲದೆ, ಕನ್ಯೆಯ ಪಾತ್ರಗಳನ್ನು ನಿರ್ವಹಿಸುತ್ತಿರಲಿಲ್ಲ. ಶ್ರೀ ರೈಗಳು ಹಿಂದೆ ಕೆಲಮಂದಿ ಪ್ರಸಿದ್ಧರಾದ ಸ್ತ್ರೀ ಪಾತ್ರಧಾರಿಗಳ ಒಡನಾಡಿಗಳಾಗಿದ್ದರೂ (ಶ್ರೀ ಐತಪ್ಪ ಶೆಟ್ಟರು– ದೇರಣ್ಣ ರೈಗಳು– ಗಣಪತಿ ಭಟ್ಟರು) ಅವರನ್ನೇ ಅನುಕರಣೆ ಮಾಡದೆ, ಅವರ ದಾರಿಯನ್ನು ಮಾತ್ರ ಅನುಸರಿಸಿ, ಆ ಪ್ರೌಢ ಪಾತ್ರಗಳ ಕುರಿತು ಚಿಂತನ, ಮಂಥನಗಳನ್ನು ನಡೆಸಿ ತನ್ನ ಸ್ವಂತಿಕೆಯ ಕೊಡುಗೆಗಳನ್ನಿತ್ತು ಆದರ್ಶರಾದರು.

ಸಾಮಾನ್ಯವಾಗಿ ಸ್ತ್ರೀ ಪಾತ್ರಧಾರಿಯಾದವನು ನವರಸಗಳಲ್ಲಿಯೂ ಅನುಭವಗಳನ್ನು ಪಡೆದು, ಅಭಿನಯಿಸಿದರೆ ಮಾತ್ರ ಅವನು ಪ್ರಸಿದ್ಧಿಯನ್ನು ಪಡೆಯಬಹುದು. ಇದನ್ನು ಎಲ್ಲರಲ್ಲೂ ಕಾಣುವುದು ದುರ್ಲಭ. ಆದರೆ, ಶ್ರೀ ರೈಗಳಲ್ಲಿ ನವರಸಗಳ ಅಭಿನಯವೂ ಇತ್ತೆಂದರೆ ಅತಿಶಯೋಕ್ತಿಯಾಗಲಾರದು.

ಶ್ರೀ ರೈಗಳ ಕೆಲವು ಸದಾ ನೆನಪಿನಲ್ಲುಳಿಯುವ ಸ್ತ್ರೀ ಪಾತ್ರಗಳು : ಅಂಬೆಯ ಪಾತ್ರ: ಮ.ಶ. ಸಾಮಗರ ಭೀಷ್ಮನೊಡನೆ ಅಂಬೆಯಾಗಿ, ವಾದ, ವಿವಾದ, ಸಂವಾದವನ್ನು ನಡೆಸಿ, ಸರಿಮಿಗಿಲಾಗಿ ಸೋಲದೆ, ಮುನ್ನಡೆಯುತ್ತಿದ್ದುದು ಇವರ ಸಾಹಿತ್ಯಾನುಭವಕ್ಕೆ ಸಾಕ್ಷಿಯಾಗಿತ್ತು. (ಒಂದು ಕಡೆಯಲ್ಲಿ, ಅಂಬೆ– ಭೀಷ್ಮರ ವಾದವು ವಿರಸಕ್ಕೆಡೆಯಾಗಿ, ಪರಶುರಾಮನ ಪಾತ್ರ ಪ್ರವೇಶವಾಗದೆ, ಆಟ ಮುಗಿದ ದಾಖಲೆಯೂ ಇದೆ.)

ಮುಂದೆ ಇದೇ ಪ್ರಸಂಗದಲ್ಲಿ ಸಾಲ್ವನಿಂದ ತಿರಸ್ಕೃತಳಾದ ಅಂಬೆ ಮರಳಿ ಬಂದು,

ಭೀಷ್ಮನನ್ನು ಬೇಡುತ್ತಾಳೆ. ಭೀಷ್ಮ ತಿರಸ್ಕರಿಸುತ್ತಾನೆ.

.... ಮುಂಗೈಯ ಕಚ್ಚುತ, ಉರಿಯನುಗುಳುತ.... ಎಂಬ ಈ ಪದ್ಯದ ಅಭಿನಯ ಕಾಣುವವರ ಮೈ, ಮನಸ್ಸುಗಳಲ್ಲಿ ಮಿಂಚಿನ ಸಂಚಾರವನ್ನುಂಟುಮಾಡುತ್ತಿತ್ತು.

(ಇತ್ತೀಚೆಗೆ ಈ ಪದ್ಯವನ್ನು ಹೆಚ್ಚಾಗಿ ಎಲ್ಲರೂ ಕೈ ಬಿಟ್ಟಿದ್ದಾರೆ.)

ಹಾಗೆಯೇ, "ಎಲೇ ದುರಾತ್ಮನೆ ಯೆನ್ನ ಪತಿಶೂನ್ಯಳಂಗೈದೆ" ಎಂಬ ಭಾಮಿನಿಗೆ ಅವರ ಅಂಬೆಯ ರೌದ್ರರಸದ ಅಭಿನಯವನ್ನು ಕಂಡಾಗ ರಸಿಕರಿಗೆ ರೋಮಾಂಚನ ವಾಗುತ್ತಿತ್ತು. ಮುಂದೆ ಆ ಪಾತ್ರವು ದುರಂತದೆಡೆಗೆ ಸಾಗುತ್ತಿರುವ ಅಭಿನಯವನ್ನು ಕಂಡವರು ಮರೆಯುವಂತಿಲ್ಲ.

ಸೈರಂಧ್ರಿ: ಇವರ ಸೈರಂಧ್ರಿಯೊಡನೆ ಸಂಭಾಷಣೆ ನಡೆಸುವ ಕೀಚಕನಿಗೆ ಸೈರಂಧ್ರಿಯ ಬಳಿ ಸಾರುವುದಕ್ಕೆ, ಮೈ ಮುಟ್ಟುವುದಕ್ಕೆ, ಧೈರ್ಯ ಬರುತ್ತಿರಲಿಲ್ಲ. ಅಂಥಾ ಗಾಂಭೀರ್ಯ, ಗೌರವ ಆ ಪಾತ್ರದಲ್ಲಿ ಎದ್ದು ಕಾಣುತ್ತಿತ್ತು. "ತಾನು ಅಗ್ನಿ ಸಂಭವೆಯಾದ ದ್ರೌಪದಿ" ಎಂಬುದು ಅವರ ನಡೆ, ನುಡಿಯಿಂದ ಸ್ಪಷ್ಟವಾಗುತ್ತಿತ್ತು.

ಮುಂದೆ ವಲಲಭೀಮನಲ್ಲಿ ಮೊರೆಯಿಡುವಾಗ, ಕುಮಾರವ್ಯಾಸನ ಆ ಎತ್ತರದ ಚಿತ್ರಣವನ್ನು, ಗೌರವ ಕೆಡದಂತೆ ಚಿತ್ರಿಸಿ, ಎಂಥಾ ಕಲ್ಲು ಹೃದಯಿಗಳಾದರೂ ಕಣ್ಣೀರು ಮಿಡಿಯುವಂತೆ ಮಾಡುತ್ತಿದ್ದರು.

ಚಂದ್ರಮತಿ: ರಸಗಳಲ್ಲಿ ಕರುಣರಸವು ಕಷ್ಟತರವಾಗಿದೆಯೆಂಬುದನ್ನು ವಿದ್ವಾಂಸರು ಬಲ್ಲರು. ಈ ರಸವನ್ನು ಪ್ರಕಟಿಸಬೇಕಾಗಿದ್ದರೆ, ಕಲಾವಿದನು ಸಂಪೂರ್ಣ ತನ್ನ ಪಾತ್ರದಲ್ಲಿ, ತಾದಾತ್ಮವನ್ನು ತಳೆದಿರಬೇಕು. ಈ ರಸದಿಂದ ಪ್ರೇಕ್ಷಕರನ್ನು ಸೆರೆಹಿಡಿಯಬೇಕಾದರೆ ಕಲಾವಿದನು ತಪಸ್ವಿಯೇ ಆಗಿರಬೇಕು. ಅಂಥಾ ಒಂದು ಉದಾತ್ತ ಸ್ತ್ರೀ ಪಾತ್ರವೆಂದರೆ ರಾಘವಾಂಕನ ಚಂದ್ರಮತಿಯ ಪಾತ್ರ.

ಅದರಲ್ಲೂ, ಮ.ಶ. ಸಾಮಗರ ಮೇರುಗಿರಿಯ ಚಿತ್ರಣದ ಹರಿಶ್ಚಂದ್ರನೊಂದಿಗೆ ಹಾಸುಹೊಕ್ಕಾಗಿ ಬೆರೆದು ಅಭಿನಯಿಸಬೇಕಾಗಿದ್ದರೆ ಅಳಿಕೆಯವರಿಗಲ್ಲದೆ ಇನ್ನಾರಿಗೆ ಸಾಧ್ಯ?

ಸಾಮಾನ್ಯವಾಗಿ, ರಾತ್ರಿ ಮೂರುತಾಸಿನಿಂದ ಆರು ತಾಸಿನ ಬೆಳಗಿನ ತನಕ 'ಚಂದ್ರಮತಿ' ವಿಲಾಪದಿಂದ, ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿ ಮಾಡಬೇಕಾದರೆ, ಅದೆಂಥಾ ಅದ್ಭುತವಾದ ಅಭಿನಯವಾಗಿರಬೇಕು! ಇವರೊಂದಿಗೆ ನಾನೂ (ಲೇಖಕ) ರೋಹಿತಾಶ್ವನಾಗಿ ಅಭಿನಯಿಸಿ ಕಂಡು, ಕಣ್ಣೀರಿಟ್ಟ ಪ್ರತ್ಯಕ್ಷ ಪ್ರೇಕ್ಷಕನಾಗಿದ್ದೇನೆ.

ದಮಯಂತಿ: ಇವರ ಇನ್ನೊಂದು ಆದರ್ಶ ಪಾತ್ರವೆಂದರೆ, ದಮಯಂತಿಯ ಪಾತ್ರ. ಇಂದಿನಂತೆ ಹಿಂದೆ ಎರಡು, ಮೂರು ಪ್ರಸಂಗಗಳನ್ನು ಕಾಲು, ತಲೆ, ಕತ್ತರಿಸಿ ಕಸಿಕಟ್ಟುವ ಕ್ರಮವಿರಲಿಲ್ಲ. ಒಂದು ರಾತ್ರಿ ಒಂದೇ ಪ್ರಸಂಗ. ಇಂದು, ವಿಸ್ತಾರವಾದ ನಾನಾ ಮುಖದ ಒಂದು ಪಾತ್ರದ, ಯಾವುದಾದರೊಂದು ಭಾಗವನ್ನು ಮಾತ್ರ ಆಯ್ದುಕೊಳ್ಳುತ್ತಾರೆ. ಇದರಿಂದ ಕಲಾವಿದನು ಆ ಪಾತ್ರವನ್ನು ಸರಿಯಾಗಿ ಚಿತ್ರಿಸಿದ

ಹಾಗಾಗುವುದಿಲ್ಲ.

ನಳ-ದಮಯಂತಿಯರಲ್ಲಿ, ನಳನ ಪಾತ್ರ ಗೌಣ. ದಮಯಂತಿಯ ಪಾತ್ರ ಪ್ರಧಾನವೆಂಬುದನ್ನು ನೋಡಿದವರು ತಿಳಿಯಬಹುದು. ನಳನ ಪಾತ್ರಧಾರಿ, ಸಾಮಾನ್ಯ ಕಲಾವಿದನಾದರೂ ಅಡ್ಡಿಯಿಲ್ಲ. ಆದರೆ, ದಮಯಂತಿಯ ಪಾತ್ರಧಾರಿ ಪರಿಪೂರ್ಣ ಕಲಾವಿದನಾಗಿರಬೇಕು. ಈ ಪಾತ್ರದ ವಿರಹ, ವಿಯೋಗ, ಧೈರ್ಯ, ಸ್ಥೈರ್ಯ, ಬಡತನ, ಸಿರಿತನ, ದುಃಖ, ಶೋಕ, ಪಾತಿವ್ರತ್ಯದ ಪರಿಪೂರ್ಣ ಜೀವನಚಿತ್ರಣವನ್ನು ನಮ್ಮ ಮುಂದಿಟ್ಟವರು ಶ್ರೀ ರೈಗಳವರು.

ಶಶಿಪ್ರಭೆ: ಈ ಪಾತ್ರವು ಇವರ ನಾಟ್ಯಪ್ರದರ್ಶನಕ್ಕೆ ಮತ್ತು ವೀರರಸ ಪ್ರದರ್ಶನಕ್ಕೆ ಹಾಗೂ ಸಾಹಿತ್ಯ ಪ್ರದರ್ಶನಕ್ಕೆ ಮೀಸಲಾಗಿತ್ತು. ಇವರು ಶ್ರೀ ಕಟೀಲು ಮೇಳದಲ್ಲಿರುವಾಗ ದಿ. ಬಲಿಪ ನಾರಾಯಣ ಭಾಗವತರು, ಇವರ ಶಶಿಪ್ರಭೆಗಾಗಿಯೇ ಪ್ರತ್ಯೇಕವಾದ ಶಶಿಪ್ರಭಾ ಪ್ರಸಂಗವನ್ನು ರಚಿಸಿದ್ದರು. (ಈಗಿರುವ ಪ್ರಸಂಗವನ್ನು ಆಡುತ್ತಿದ್ದಿಲ್ಲ). ಇದು ಶ್ರೀರೈಗಳ ವೈವಿಧ್ಯಮಯ ನಾಟ್ಯ ಪ್ರದರ್ಶನಕ್ಕೆ ಮೀಸಲಾದ ಪ್ರಸಂಗ. ರೈಗಳು ಅದರಲ್ಲಿ, ಕಸೆ ವೇಷದಲ್ಲಿ ಕಾಣಿಸಿಕೊಳ್ಳುತ್ತಿದ್ದರು. ಈ ಪಾತ್ರ ಹಿಂದೆ ಕಂಡವರ ಮನಸ್ಸಿನಲ್ಲಿದೆಯೇ ಹೊರತು ಇಂದಿನವರಿಗೆ, ಮುಂದಿನವರಿಗೆ ಹೇಳಿ ಹೇಗೆ ತಿಳಿಸೋಣ...? ಇನ್ನೆಲ್ಲಿ ಕಾಣುವುದಕ್ಕೆ ಸಾಧ್ಯ...!

ಶ್ರೀ ರೈಗಳು ಯಾವುದೇ ಪಾತ್ರಗಳನ್ನು ಮಾಡುವುದಿದ್ದರೂ ಆ ಪಾತ್ರದ ಮೂಲ ಗ್ರಂಥಗಳನ್ನು ಓದಿಕೊಳ್ಳುತ್ತಿದ್ದರು. ಅಲ್ಲದೆ ಆ ಪಾತ್ರಗಳ ಸಮಸ್ಯೆಯ ಕುರಿತು, ವಿದ್ವಾಂಸರಲ್ಲಿ, ವಿಚಾರ ವಿನಿಮಯ ನಡೆಸಿ ಪಾತ್ರಗಳನ್ನು ಸರಿಪಡಿಸಿಕೊಳ್ಳುತ್ತಿದ್ದರು. ಮುಖ್ಯವಾಗಿ ಇವರ ಪಾತ್ರದ ಕುರಿತು, ಹೆಚ್ಚಾದ ವೈಚಾರಿಕತೆಯನ್ನು ಬೆಳೆಸದೆ ಭಾವುಕರಾಗಿ ಅಭಿನಯಿಸಿದ್ದರಿಂದ, ಇವರ ಪಾತ್ರಗಳು ಪಂಡಿತ, ಪಾಮರರ ಮೆಚ್ಚುಗೆಗೆ ಕಾರಣವಾಯಿತು.

ಒಂದೇ ಪಾತ್ರವನ್ನು ಹಲವಾರು ಬಾರಿ ಅಭಿನಯಿಸಿದ್ದರೂ ಶ್ರೀ ರೈಗಳು ತೃಪ್ತರಾಗಿರಲಿಲ್ಲ ಎಂಬುದಕ್ಕೆ ಒಂದು ಉದಾಹರಣೆ ಕೊಡಬಹುದು. ಆಟ ಮುಗಿದೊಡನೆ, ಭಾಗವತರಲ್ಲಿ ಹಾಗೂ ಅಲ್ಲಿರುವ ವಿದ್ವಾಂಸರಲ್ಲಿ, ಅವರು ತನ್ನ ಮಾತೃಭಾಷೆಯಲ್ಲಿ ಹೀಗೆ ಕೇಳುತ್ತಿದ್ದರು.

"ಸ್ವಾಮಿ, ಕೋಡೆದ ವೇಷ ಎಂಚಾತ್‌ಂಡ್...? ಯೆನ್ನ ಮನಸ್‌ಗ್ ಅವು ದಾಲಾ.... ಸಮಾಧಾನ ಆತ್‌ಜಿ" ಈ ಅಂತರಾಳದಿಂದ ಬರುತ್ತಿದ್ದ ಮಾತು, ಅವರು ಪೂರ್ಣ ಕಲಾವಿದರೆಂಬುದುಕ್ಕೆ ಸಾಕ್ಷಿಯಲ್ಲವೇ...?

ನಾನೂ, ಶ್ರೀಯುತರ ಕೆಲವು ಸ್ತ್ರೀ ಪಾತ್ರಗಳನ್ನು ಅನುಕರಿಸುವುದಕ್ಕೆ ಪ್ರಯತ್ನಿಸಿದ್ದೇನೆ. ಅಮರವಾದ ಆ ಹಿರಿಯ ಚೇತನಕ್ಕೆ ನಮಸ್ಕರಿಸುತ್ತೇನೆ.

* * *



# ಹನುಮದ್ವಿಕಾಸಕ್ಕೆ ಇಲ್ಲ ಎಲ್ಲೆ ...

**ತಾರನಾಥ ವರ್ಕಾಡಿ**

ಅಳಿಕೆಯವರು ಜನಿಸಿದ್ದು 1915 ಮಾ. 17ರಂದು. 4ನೆ ತರಗತಿ ತನಕ ಓದಿ, 11ನೆ ಹರೆಯಲ್ಲಿ ಯಕ್ಷ ಲೋಕ ಪ್ರವೇಶಿಸಿದರು. 1923ನೇ ಇಸವಿ, ಇಚ್ಲಂಪಾಡಿ ಕೋಟ್ಯಣ್ಣ ಆಳ್ವರ ಆಶೀರ್ವಾದ ಪಡೆದು ಮಾಂಬಾಡಿ ನಾರಾಯಣ ಭಾಗವತರಿಂದ ದೀಕ್ಷೆ ಪಡೆದು ಗೆಜ್ಜೆ ಕಟ್ಟಿ 'ಅತಿಕಾಯ ಇಂದ್ರಜಿತು ಮೈರಾವಣ' ಕಾಳಗದ ಮರಿಮಂಗನಾಗಿ ರಂಗವೇರಿದ ರೈಗಳು ಕಲೋಪಾಸನೆಯಿಂದ ಆಂಜನೇಯನಾಗಿ ಬೆಳೆದು ಚಿರಂಜೀವಿಯಾದ ಬಗೆ ಒಂದು ಯಶೋಗಾಥೆ. ಯಕ್ಷಗಾನ ಇವರಿಗೆ ರಕ್ತದಲ್ಲಿ ಹರಿದು ಬಂದ ಅಮೂಲ್ಯ ಆಸ್ತಿ. ಇವರ ಅಜ್ಜ ಮತ್ತು ಮುತ್ತಜ್ಜ ಈ ಕಲೆಯಲ್ಲಿ ಹೆಸರು ಮಾಡಿದವರು. 1926ರಿಂದ 1984ರತನಕ ಯಕ್ಷ ಸಾಮ್ರಾಜ್ಯದ ಅನಭಿಷಿಕ್ತ ಸಾಮ್ರಾಟನಾಗಿ ಸುಮಾರು ಆರು ದಶಕಗಳ ಕಾಲ ಯಕ್ಷರಂಗವನ್ನು ಆಳಿದ ಅಳಿಕೆಯವರು ತಮ್ಮ ಕೊನೆಯ ತಿರುಗಾಟದ ವರುಷ ಕಟೀಲು ಶ್ರೀದೇವಿಯ ಸನ್ನಿಧಿಯಲ್ಲಿ ಗೆಜ್ಜೆ ಬಿಚ್ಚಿದರು.

1930ರ ದಶಕ ಜೋಡಾಟಗಳ ಕಾಲ. ಕಲೆಯ ಒಳಗೆ ಕ್ರೀಡೆಯ ಆವೇಶ...! ಮೇಳ–ಮೇಳಗಳು, ಕಲಾವಿದರು ಸ್ಪರ್ಧಾ ಮನೋಭಾವದಿಂದ ಪ್ರಜ್ವಲಿಸುತ್ತಿದ್ದ ಕಾಲ. ಅಳಿಕೆಯರಿಗೂ ನಿಗಿನಿಗಿ ಯೌವ್ವನ. ಎಂಥ ಪ್ರಖರ ವೇಷಧಾರಿಯ ಮುಂದೆಯೂ ಸೋಲು ಕಂಡವರಲ್ಲ. 'ಕಟ್ಟದ ಹುಂಜ', 'ಓಟದ ಕೋಣ' ಇದು ಅಂದು ಇವರಿಗಿದ್ದ ಜನಪದೀಯ ಬಿರುದುಗಳು. ಇವರು ಸ್ಪರ್ಧೆಯ ಕುಣಿತಕ್ಕಷ್ಟೇ ಸೀಮಿತರಲ್ಲ. ಪಾತ್ರೋಚಿತ ಭಾವನಿಷ್ಠ ಮಾತುಗಾರಿಕೆಗೂ ಸೈ.

ದೊಡ್ಡ ಸಾಮಗರ ಪುರುಷ ಪಾತ್ರಗಳಿಗೆ ಸರಿ ಜೋಡಿ ಸ್ತ್ರೀ ವೇಷದ ಕೊರತೆಯಾದಾಗ ಅಳಿಕೆಯವರು ಕಿರೀಟ ಕಳಚಿ ಸೀರೆಯುಟ್ಟರು. ಅಭಿಜಾತ ಕಲಾವಿದರೆಂದು ಸಾಬೀತು

ಪಡಿಸಿದರು. ಅಂತಹ ಕಾಲಘಟ್ಟದಲ್ಲಿ ರಂಗ ಪ್ರವೇಶಿಸಿದವರು ಅಳಿಕೆಯ ರಾಮಯ್ಯ ರೈ. ರಂಗಸ್ಥಳದಲ್ಲಿ ಎಂದೂ ಸೋಲು ಕಂಡವರಲ್ಲ. ಹೇಗಾದರೂ ಇವರನ್ನು ಸೋಲಿಸಲೆಂದು ಕೆಲವು ಮೇಳದ ಯಜಮಾನರು ಕಲಾವಿದರನ್ನು ಸಿದ್ಧಗೊಳಿಸುತ್ತಿದ್ದರಂತೆ. ಆದರೆ ಅಳಿಕೆಯವರ ಪ್ರಖರತೆಯ ಮುಂದೆ ಅವರೆಲ್ಲರೂ ಹೇಳ ಹೆಸರಿಲ್ಲದೆ ಅಡಗಿ ಹೋದರು...! ರಂಗಸ್ಥಳ ಹುಡಿ ಹಾರಿಸಿದ ಇವರ ಅಭಿಮನ್ಯು, ಬಭ್ರುವಾಹನ, ಭಾರ್ಗವ ಪಾತ್ರಗಳನ್ನು ಹಿರಿಯರು ನೆನಪಿಸಿ ಈಗಲೂ ಪುಳಕಗೊಳ್ಳುತ್ತಾರೆ.

ವಿಶೇಷವೆಂದರೆ ಇವರು ಕೇವಲ ಜೋಡಾಟದ ಸ್ಪರ್ಧಾ ಕುಣಿತಗಳಿಗೆ ಮಾತ್ರ ಸೀಮಿತರಾಗಲಿಲ್ಲ. ನವರಸ ನಾಯಕನಾಗಿ ಭಾವಪೂರ್ಣ ಪಾತ್ರಗಳಿಗೆ ಜೀವತುಂಬಿ ಪ್ರೇಕ್ಷಕರನ್ನು ನಿಬ್ಬೆರಗಾಗಿಸಿದರು. ನಾರಂಬಾಡಿ ಸುಬ್ಬಯ್ಯ ಶೆಟ್ರ ಹರಿಶ್ಚಂದ್ರನಿಗೆ ಇವರು ಚಂದ್ರಮತಿಯಾದರು. ಮಂಕುಡೆ ಸಂಜೀವ ಶೆಟ್ಟಿಯ ಚಂದ್ರಮತಿಗೆ ಹರಿಶ್ಚಂದ್ರನಾದರು. ಅಳಿಕೆ ಮೋನಪ್ಪ ರೈ ಅವರ ದಶರಥ ರಾಮಯ್ಯ ರೈ ಅವರ ರಾಮ. ತಂದೆ– ಮಗನ ಈ ಅಪೂರ್ವ ಜೋಡಿ ಅಯೋಧ್ಯೆಯನ್ನು ರಂಗಸ್ಥಳಕ್ಕೆ ಇಳಿಸುತ್ತಿತ್ತು. ಅಳಿಕೆಯವರು ನಿರ್ವಹಿಸದ ಪಾತ್ರವಿಲ್ಲ. ಬಾಲಗೋಪಾಲರಿಂದ ಹಿಡಿದು ಪೂರ್ವರಂಗ ಎಲ್ಲ ವೇಷಗಳನ್ನು ಕಟ್ಟಿದರು. ಧ್ರುವ, ಪ್ರಹ್ಲಾದ, ರೋಹಿತಾಶ್ವ ಇವರಿಗೆ ಬಾಲ್ಯದಲ್ಲೇ ಕೀರ್ತಿ ತಂದಿತು.

ಅಳಿಕೆಯವರು ಬಾಲಗೋಪಾಲನಾಗಿ ಕುಣಿದರು. ಧ್ರುವ, ರೋಹಿತಾಶ್ವನಾಗಿ ಸಹೃದಯ ಪ್ರೇಕ್ಷಕರ ಮನಗೆದ್ದರು. ಭಾರ್ಗವ, ಅಭಿಮನ್ಯು, ಬಭ್ರುವಾಹನನಾಗಿ ರಂಗಸ್ಥಳ ಹುಡಿ ಹಾರಿಸಿದರು. ಚಂದ್ರಮತಿ, ಸೀತೆ, ದಮಯಂತಿಯಾಗಿ ಸಭಾಸದರನ್ನು ಕಣ್ಣೀರಿನ ಕಡಲಲ್ಲಿ ಮುಳುಗಿಸಿದರು. ಪ್ರಮೀಳೆ, ಮೀನಾಕ್ಷಿ, ಶಶಿಪ್ರಭೆಯಾಗಿ ನೋಡುಗರ ನರ – ನಾಡಿಗಳಲ್ಲಿ ಶೌರ್ಯ– ಪರಾಕ್ರಮ ಪುಟಿದೇಳುವಂತೆ ಮಾಡಿದರು. ಸುಧನ್ವ, ಅತಿಕಾಯ, ಹನುಮಂತರಾಗಿ ಭಾವುಕರನ್ನು ಭಕ್ತಿಯ ಅಮೃತ ಮಂದಾಕಿನಿಯಲ್ಲಿ ತೇಲಿಸಿದರು. ಕೀಚಕನಾಗಿ ರಸಿಕರೆದೆಗೆ ಕಚಗುಳಿಯಿಟ್ಟರು. ಹಿರಣ್ಯಾಕ್ಷನ ಕ್ರೌರ್ಯ, ರಕ್ತಬೀಜನ ದರ್ಪ, ದುರ್ಯೋಧನನ ಛಲ, ದಕ್ಷನ ಅಹಂಕಾರ, ಋತುಪರ್ಣನ ಅಸಹಾಯಕತೆ, ಶ್ರೀಕೃಷ್ಣ ಶೃಂಗಾರ... ಹೀಗೆ ಪುರಾಣಲೋಕದ ಪಾತ್ರಗಳನ್ನು ನಾಲ್ಕು ಕಂಬದೊಳಗೆ ಸಾಕ್ಷಾತ್ಕರಿಸುವ ಕಲಾಸಿರಿ ಇವರದು. ಪಾತ್ರಗಳ 'ಪರಕಾಯ ಪ್ರವೇಶ' ಮಾಡುವ ವಿದ್ಯೆ ಇವರಿಗೆ ಸಿದ್ಧಿಸಿತ್ತು ಲೀಲಾಜಾಲ.

ಸಾಧಾರಣ 60–70 ದಾಟಿದ ಪ್ರೇಕ್ಷಕರೊಡನೆ ಅಂದಿನ ಆಟದ ಬಗೆಗೆ ಮಾತನಾಡು ವಾಗಲೆಲ್ಲ ಅವರ ನಾಲಗೆಯಲ್ಲಿ 'ದಿಗಿಣ' ಹೊಡೆದ ಅದ್ಭುತ ಹೆಸರು 'ಅಳಿಕೆ ರಾಮಯ್ಯ ರೈ' ಇವರನ್ನು ನೆನಪಿಸುವಾಗ ಆ ಹಿರಿಯರು ಭಾವುಕರಾಗುತ್ತಾರೆ. ಮೈ ಪುಳಕಗೊಂಡು ಅಂದಿನ ರಂಗವೈಭವವನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸುತ್ತಾರೆ. ಅಳಿಕೆಯವರನ್ನು ನೆನೆಯದ ಮನವಿಲ್ಲ. ಕೊಂಡಾಡದ ನಾಲಗೆಯಿಲ್ಲ. ಪ್ರತಿಭಾ ಸಂಪತ್ತನ್ನು ತುಂಬಿ ಆನಂದಿಸದ ಹೃದಯವಿಲ್ಲ. ನಮ್ಮ ಕಲ್ಪನೆಗೂ ಮೀರಿದ ವಿರಾಟ್ಪ್ರತಿಭೆಯದು...! ಚೆಂಡೆ ಯವರ ಕೈಗಳು ದಣಿವಷ್ಟೂ ಕುಣಿದು ನಿರಾಯಾಸವಾಗಿ, ನಿರರ್ಗಳವಾಗಿ, ಭಾವಪೂರ್ಣ

ವಾಗಿ ಮಾತನ್ನಾಡಬಲ್ಲ ಅಸಾಧಾರಣ ಸಾಮರ್ಥ್ಯ, ನವರಸಗಳನ್ನು ಪ್ರೇಕ್ಷಕರೆದೆಯಲ್ಲಿ ತುಂಬುವ ಅನನ್ಯ ಕಲಾಗಾರಿಕೆ. ಸುಮಾರು ಆರು ದಶಕಗಳ ಕಾಲ ರಂಗಸ್ಥಳದಲ್ಲಿ ಮೆರೆದು ಕಲಾರಸಿಕರ ಹೃದಯದಲ್ಲಿ ಅಳಿಯದ ಅಮೃತ ಮುದ್ರೆಯೊತ್ತಿದ, ಯಕ್ಷಲೋಕದ ಅನಭಿಷಿಕ್ತ ಸಾರ್ವಭೌಮ ಅಳಿಕೆ ರಾಮಯ್ಯ ರೈ.

ಅಳಿಕೆಯವರು ಭಾವಜೀವಿ. ನಿಗರ್ವಿ. ಯಕ್ಷಲೋಕದ ಕುಬೇರನಾದರೂ ಎಂದೂ ಅಹಂಕಾರ ಪ್ರದರ್ಶಿಸಿದವರಲ್ಲ. "ನನ್ನ ಮುತ್ತಜ್ಜ, ಅಜ್ಜ, ತಂದೆ ಮೋನಪ್ಪ ರೈಗಳು ತುಳಿದ ಹಾದಿಯನ್ನೇ ನಾನೂ ಅನುಸರಿಸಿ ಬಂದುದರಿಂದ, ಯಕ್ಷಗಾನದ ರಕ್ತವೇ ನನ್ನ ಧಮನಿಗಳಲ್ಲಿ ಹರಿದು ಬಂದಿತ್ತಾದುದರಿಂದ ನಾನು ಈ ರಂಗದಲ್ಲಿ ಗೆಜ್ಜೆ ಕಟ್ಟಿದೆನೇ ಹೊರತು ಆ ಸಮಯ ಈ ಕಲೆಯ ಉತ್ಕೃಷ್ಟತೆಯನ್ನಲ್ಲ. ಪುಣ್ಯ ವಶವೆಂಬಂತೆ ಆ ಕಾಲದ ಹಿರಿಯರನೇಕರು ನನಗೆ ಮಾರ್ಗದರ್ಶಕರಾಗಿ ದೊರೆತುದು ನನ್ನ ಭಾಗ್ಯ ವಿಶೇಷ' ಎಂದರೇ ಹೊರತು ಎಂದೂ ಆತ್ಮಶ್ಲಾಘನೆ ಮಾಡಿಕೊಂಡವರಲ್ಲ. ಆದುದರಿಂದಲೇ ಕಲಾಮಾತೆ ಅವರನ್ನು ತನ್ನ ಹೊನ್ನ ಕಿರೀಟದ ರನ್ನಮಣಿಯಾಗಿಸಿದಳು. ದಿ। ಅಗರಿ ಶ್ರೀನಿವಾಸ ಭಾಗವತರು "ಈ ಕಲೆಯ ರಂಗಸ್ಥಳಕ್ಕೆ ಹೊಸದಾಗಿ ಪ್ರವೇಶಿಸುವವರು ದಿ। ರಾಮಯ್ಯ ರೈಗಳ ಆದರ್ಶವನ್ನು ಇರಿಸಿಕೊಳ್ಳುವುದು ಶ್ರೇಯಸ್ಕರ" ಎಂದು ಮೆಚ್ಚುಗೆಯಿಂದ ಉದ್ಗರಿಸಿದರು.

ಅಳಿಕೆಯವರಿಗೆ ಯಕ್ಷಗಾನ ಕಲಾ ಸ್ವರೂಪದ ಅರಿವಿತ್ತು. "ಇದರಲ್ಲಿ ವ್ಯವಸಾಯ ನಿರತನಾದ ಕಲಾಕಾರರಲ್ಲಿ ಆಂಗಿಕ, ಆಹಾರ್ಯ, ವಾಚಿಕ, ಸಾತ್ವಿಕಗಳೆಂಬ ನಾಲ್ಕು ಗುಣಗಳಿದ್ದೇ ತೀರಬೇಕು. ಆದರೆ ಇತ್ತೀಚೆಗೆ ನಟರ ಲಕ್ಷ ಅಭಿನಯದ ಕಡೆಗೆ ಪೂರ್ಣ ವಿಮುಖವಾದಂತೆ ತೋರುತ್ತದೆ" ಎಂದು ವಿಷಾದಿಸಿದ್ದಾರೆ. ನಾಟ್ಯ, ಹಾವ, ಭಾವ, ಅಭಿನಯಗಳಿಲ್ಲದೆ ಕೇವಲ ಮಾತಿನಲ್ಲಿ ಕಾಲಕ್ಷೇಪ ಮಾಡುವವರ ಬಗಗೆ ಅವರಿಗೆ ಸದಭಿಪ್ರಾಯವಿರಲಿಲ್ಲ. "ಅಂಥವರು ಈ ರಂಗಕ್ಕೆ ಬಂದು ಕಲೆಯನ್ನು ಕುಲ ಗೆಡಿಸುವುದಕ್ಕಿಂತ ಅವರಷ್ಟಕ್ಕೇ ಅವರು ಮಾತಿನ ಕ್ಷೇತ್ರವಾದ ತಾಳಮದ್ದಳೆಯಲ್ಲಿ ದುಡಿಯುವುದು ಕಲೆಯ ಮಟ್ಟಿಗೆ ಶ್ರೇಯಸ್ಕರ" ಎಂದು ನಿರ್ದಾಕ್ಷಿಣ್ಯವಾಗಿ ಆಡಿಬಿಟ್ಟಿದ್ದಾರೆ.

ಅಳಿಕೆಯವರು ಅನೇಕ ಚಿನ್ನದ ಪದಕಗಳನ್ನು ಪಡೆದಿದ್ದರು. ನೂರಾರು ಸನ್ಮಾನಗಳು ಬಂದಿವೆ. ಮೈಸೂರು ಸರಕಾರದ ರಾಜ್ಯ ಪ್ರಶಸ್ತಿಯೂ ಸಂದಿದೆ. ಕಲೆಯ ತವರಿನ ಸೀಮೋಲ್ಲಂಘನೆಯನ್ನೂ ಮಾಡಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಇಂದಿಗೂ ಕಲಾಭಿಮಾನಿಗಳ ಹೃದಯ ಸಿಂಹಾಸನದಲ್ಲಿ ಓಲಗಸ್ಥರಾಗಿದ್ದಾರೆ. ಅವರ ಆದರ್ಶ ಕಲಾ ವ್ಯವಸಾಯಿಗಳಿಗೆ ದಾರಿದೀಪವಾಗಬೇಕು. ಅವರನ್ನು ನೆನಪಿಸಿ ಗೆಜ್ಜೆ ಕಟ್ಟುವ ತರುಣರು ಅವರ ಮಹೋನ್ನತ ಗುಣಗಳನ್ನೂ ಮೈಗೂಡಿಸಿಕೊಳ್ಳಬೇಕು. ಅಳಿಕೆಯವರ ಕನಸು ನನಸಾಗಬೇಕಾದರೆ ಮುಂದಿನ ಪೀಳಿಗೆ ಚತುರ್ವಿಧಾಭಿನಯದಿಂದ ಸಮೃದ್ಧವಾಗಿ ಬೆಳೆದು ಕಲಾಮಾತೆ ಮುತ್ತೈದೆಯಾಗಿ ಶೋಭಿಸಬೇಕು. ಇದೇ ಕಲಾಭಿಮಾನಿಗಳ ಹೃತ್ಪೂರ್ವಕ ಹಾರೈಕೆ.



# ಅಳಿಕೆಗೆ ಅಳಿವಿಲ್ಲ

**ಭಾಸ್ಕರ ರೈ ಕುಕ್ಕುವಳ್ಳಿ**

'ಅಳಿಕೆ' ಎಂಬ ಮೂರಕ್ಷರ ಕರಾವಳಿಯ ಯಕ್ಷ ರಸಿಕರ ಮನದಂಗಳದಲ್ಲಿ ಹಚ್ಚ ಹಸಿರಾಗಿರುವ ಹೆಸರು. ಕರಾವಳಿ ಮಾತ್ರವಲ್ಲ, ಯಕ್ಷಗಾನದ ಹರವು ಎಲ್ಲಿಯ ವರೆಗಿದೆಯೋ ಅಲ್ಲಿಯವರೆಗೆ ಈ ಹೆಸರಿನ ವ್ಯಾಪ್ತಿಯೂ ಇದೆ ಎನ್ನಬಹುದು. ಅಳಿಕೆ ರಾಮಯ್ಯ ರೈ ಎಂಬ ಮಹಾನ್ ಕಲಾವಿದ ಈ ಮೂರಕ್ಷರಗಳಿಂದಲೇ ಜನಮಾನಸಕ್ಕೆ ಚಿರಪರಿಚಿತರಾಗಿರುವುದು ಇದಕ್ಕೆ ಕಾರಣ. ಅವರು ಈಗ ನಮ್ಮ ಮುಂದಿಲ್ಲ. ಆದರೆ ಈ 'ಅಳಿಕೆ'ಗೆ ಅಳಿವಿಲ್ಲ. ಯಕ್ಷಗಾನ ಬಾಂದಳದಲ್ಲಿ ನಿರಂತರ ಮಿನುಗುವ ತಾರೆ ಅಳಿಕೆ.

ಅಳಿಕೆ ರಾಮಯ್ಯ ರೈಯವರದು ದೊಡ್ಡ ವ್ಯಕ್ತಿತ್ವ. ಅವರು ಯಕ್ಷಗಾನ ಕಂಡ ಅಪ್ರತಿಮ ಕಲಾವಿದ. ಪಾರಂಪರಿಕವಾದ ಒಂದು ದೇಶೀ ಕಲೆಗೆ ವ್ಯಕ್ತಿಗತ ವರ್ಚಸ್ಸನ್ನು ಬೆರೆಸಿ ವಿದ್ವಜ್ಜನರೆಲ್ಲ ತಲೆದೂಗುವಂತೆ ಮಾಡಿದ ಮೇರು ನಟ. ಅವರನ್ನು ಯಕ್ಷಗಾನದ ಸವ್ಯಸಾಚಿಯೆಂದು ಜನ ಹೊಗಳಿದರು. ನೃತ್ಯ, ಅಭಿನಯ, ವೇಷ, ಮಾತು ಹೀಗೆ ನಾಲ್ಕು ಅಂಗಗಳಲ್ಲಿಯೂ ಅವರದು ಎತ್ತರದ ಸಿದ್ಧಿ. ಸ್ತ್ರೀ ವೇಷ, ಪುಂಡು ವೇಷ, ರಾಜವೇಷ ಜೊತೆಗೆ ತುಳು ಜಾನಪದ ಪ್ರಸಂಗಗಳ ವಿಭಿನ್ನ ನೆಲೆಯ ಪಾತ್ರಗಳು– ಈ ಎಲ್ಲದರಲ್ಲೂ ಇತರರಿಗೆ ಅಳಿಕೆ ಆದರ್ಶ.

ಯಕ್ಷರಂಗದ ಭೀಷ್ಮಾಚಾರ್ಯರೆಂದೇ ಖ್ಯಾತಿ ಪಡೆದ ಅಳಿಕೆ ಮೋನಪ್ಪ ರೈಗಳು ರಾಮಯ್ಯ ರೈಯವರ ತೀರ್ಥ ರೂಪರು. ಪ್ರತಿಷ್ಠಿತ ಇಚ್ಲಂಪಾಡಿ ಮೇಳದಲ್ಲಿ ಮುಖ್ಯ ವೇಷಧಾರಿಯಾಗಿದ್ದ ಅವರಿಗೆ ರಂಗಸ್ಥಳದ ರಾಜನೆಂಬ ಬಿರುದಿತ್ತು.

1915ನೇ ಇಸವಿ ಮಾರ್ಚ್ 17ರಂದು ಜನಿಸಿದ ರಾಮಯ್ಯ ರೈ, ತಂದೆಯ ನೆರಳಲ್ಲೇ ಯಕ್ಷಗಾನವನ್ನು ಅಭ್ಯಸಿಸಿ, ತನ್ನ ಹನ್ನೊಂದನೇ ವಯಸ್ಸಿನಲ್ಲಿ ಅದೇ ಇಚ್ಲಂಪಾಡಿ ಮೇಳವನ್ನು ಸೇರಿಕೊಂಡರು. ನಾಲ್ಕನೆ ತರಗತಿಗೆ ಅವರ ಓದು ನಿಂತಿತು. ಹಿರಿಯ

ಭಾಗವತ ಮಾಂಬಾಡಿ ನಾರಾಯಣ ಭಾಗವತರು ಅವರಿಗೆ ಗೆಜ್ಜೆ ನೀಡಿ ಆಶೀರ್ವದಿಸಿದ್ದರು. ಅನಂತರದ ದಿನಗಳಲ್ಲಿ ನೂರ ಐದು ವರ್ಷದ ಯಜಮಾನ ಇಚ್ಲಂಪಾಡಿ ಕೋಟ್ಯಣ್ಣಾಳ್ವರು ಮೂರು ತೊಲೆ ಚಿನ್ನದ ಕುರ್ಜಾತುವನ್ನು ಅಳಿಕೆಯವರಿಗೆ ನೀಡಿ ಹರಸಿದರು. ಅಲ್ಲಿಂದ ಅಳಿಕೆ ತಿರುಗಿ ನೋಡಲಿಲ್ಲ. ಯಕ್ಷಗಾನ ರಂಗದಲ್ಲಿ ಯಶಸ್ಸಿನ ಮೆಟ್ಟಿಲನ್ನು ಏರುತ್ತಾ ಹೋದರು. ಕುಂಬಳೆ, ಕಟೀಲು, ಕದ್ರಿ, ಇರಾ ಮತ್ತು ಕರ್ನಾಟಕ ಮೇಳಗಳಲ್ಲಿ ಆರು ದಶಕಗಳ ಕಾಲ ಯಕ್ಷಗಾನ ಸಾಮ್ರಾಟರಾಗಿ ಮೆರೆದರು. ಸ್ಪರ್ಧೆಯ ಜೋಡಾಟಗಳಲ್ಲಿ ಅವರನ್ನು ಸೋಲಿಸಲೆಂದೇ ಇದಿರಾಳಿಗಳು ಕಲಾವಿದರನ್ನು ಸಜ್ಜುಗೊಳಿಸುತ್ತಿದ್ದರು. ಆದರೆ ಆ ಹೊಂತಕಾರಿಗಳೆಲ್ಲಾ ರಾಮಯ್ಯ ರೈಗಳ ಎದುರಿನಲ್ಲಿ ನಿಲ್ಲಲಾರದೆ ನೆಲಕಚ್ಚುತ್ತಿದ್ದುದು ಇತಿಹಾಸ.

ಅಭಿಮನ್ಯು, ಬಭ್ರುವಾಹನ, ಪರಶುರಾಮ, ಚಂದ್ರಹಾಸ ಮೊದಲಾದ ಪುಂಡು ವೇಷಗಳು, ಪ್ರಮೀಳಾ, ಶಶಿಪ್ರಭೆ, ಮೀನಾಕ್ಷಿ, ಚಂದ್ರಮತಿ ಮೊದಲಾದ ಸ್ತ್ರೀ ವೇಷಗಳು, ಕರ್ಣ, ಅರ್ಜುನ, ಕಾರ್ತವೀರ್ಯ, ಕೌರವ, ಇಂದ್ರಜಿತು, ಹನುಮಂತ, ರಕ್ತಬೀಜಾಸುರ, ಸುಧನ್ವ, ದುಷ್ಯಂತ, ಋತುಪರ್ಣ, ನಳ, ಹರಿಶ್ಚಂದ್ರ ಮೊದಲಾದ ರಾಜ ವೇಷಗಳು, ಪೆರುಮಳ ಬಲ್ಲಾಳ, ವೀರ ಕಲ್ಕುಡ, ದೇವು ಪೂಂಜ, ಬಂಗರಸ, ಕೊಡ್ಸರಾಳ್ವ, ಮೊದಲಾದ ತೌಳವ ಪಾತ್ರಗಳಲ್ಲಿ ಅಳಿಕೆಯವರನ್ನು ಮೀರಿಸುವವರು ಬಂದಿಲ್ಲ. ಆ ಪರಂಪರೆಯನ್ನು ಮುಂದುವರಿಸುವ ಶಿಷ್ಯರೂ ತಯಾರಾಗಿಲ್ಲ.

ಅಳಿಕೆಯವರು ಎರಡು ತಲೆಮಾರುಗಳ ನಡುವಿನ ಪ್ರಮುಖ ಕೊಂಡಿಯಾಗಿ ಯಕ್ಷಗಾನ ರಂಗಕ್ಕೆ ಬಂದವರು. 1926ರಿಂದ 1984ರವರೆಗೆ ಎಂದರೆ 58 ವರ್ಷಗಳ ಸುದೀರ್ಘ ಸೇವೆ ಅವರದು. ಇದು ಯಕ್ಷಗಾನ ಮಹಾಯಾನದಲ್ಲಿ ಅಭ್ಯುದಯ ಪರ್ವ. ಪರಂಪರೆಯಿಂದ ಬಂದ ಬಣ್ಣಗಾರಿಕೆ, ಶ್ರುತಿ, ಲಯಬದ್ಧ ಮಾತುಗಾರಿಕೆ ಮತ್ತು ಕುಣಿತಗಳ ವೈಶಿಷ್ಟವನ್ನು ಕಾಪಾಡಿಕೊಂಡು ಬಂದ ಬೆರಳೆಣಿಕೆಯ ಕಲಾವಿದರಲ್ಲಿ ಅಳಿಕೆ ಪ್ರಮುಖರು. ಜೋಡಾಟಗಳಲ್ಲಿ ಮೇಳದ ಯಜಮಾನರಿಗೆ ಅವರೊಬ್ಬ ಓಟದ ಕೋಣ; ಅಥವಾ ಹುಂಜ. ಅವರ ಅಭಿಮನ್ಯು, ಬಭ್ರುವಾಹನ, ಇತ್ಯಾದಿ ಪಾತ್ರಗಳನ್ನು ಸರಿಗಟ್ಟಬೇಕೆಂದು ಹೆಣಗಿ ಸೋಲೊಪ್ಪಿಕೊಂಡ ಕಲಾವಿದರ ಪಟ್ಟಿಯೇ ಇವೆ. ಅಂಥವರನ್ನು ತಯಾರು ಮಾಡಿ ಇವರೆದುರು ಛೂಬಿಟ್ಟು ಮರ್ಮಾಘಾತವಾದ ಯಜಮಾನರೂ ಇದ್ದಾರೆ.

ಇಂದಿನ ಬಹುತೇಕ ಹಿರಿಯ ಸ್ತ್ರೀವೇಷಧಾರಿಗಳು ರೈಯವರ ಸ್ತ್ರೀಪಾತ್ರಗಳು ತಮಗೆ ಆದರ್ಶವಾಗಿತ್ತೆಂದು ಹೇಳಿಕೊಂಡಿದ್ದಾರೆ. ಅವರ ಗರತಿ ಪಾತ್ರಗಳು ಹಾಗೂ ಸತಿ ಸ್ತ್ರೀವೇಷಗಳು ಒಂದಕ್ಕೊಂದು ಭಿನ್ನ, ಹಾಗೂ ಅಷ್ಟೇ ಪರಿಣಾಮಕಾರಿ. ಅವರದೇ ಜೊತೆಗಾರರಾಗಿದ್ದ ಮಂಕುಡೆ ಸಂಜೀವ ಶೆಟ್ಟಿ, ಕೋಳ್ಯೂರು ರಾಮಚಂದ್ರ ರಾಯರು ಅವರ ಸ್ತ್ರೀವೇಷಗಳಿಂದ ಪ್ರಭಾವಿತರಾಗಿದ್ದರು. ಅಳಿಕೆಯವರು ಚಂದ್ರಮತಿಯಾಗಿ ದೀವಟಿಗೆ ಹಿಡಿದು ಸ್ಮಶಾನದಲ್ಲಿ ಸುತ್ತಾಡುವ ಕರುಣಾಜನಕ ಸನ್ನಿವೇಶವನ್ನು, ಖ್ಯಾತ ಸ್ತ್ರೀವೇಷಧಾರಿ ದಿ. ಅಡ್ಯನಡ್ಕ ಕೃಷ್ಣ ಭಂಡಾರಿ ವಿವರಿಸುತ್ತಿರಬೇಕಾದರೆ ಅವರ ಕಣ್ಣುಗಳು

ತೇವವಾಗುತ್ತಿದ್ದುದನ್ನು ನಾನು ಕಂಡಿದ್ದೇನೆ. ಮಂಕುಡೆ, ಕೋಳ್ಯೂರು ಮುಂತಾದವರು ಅಳಿಕೆಯವರ ಪುರುಷ ವೇಷಕ್ಕೆ ಜೊತೆಯಾಗಿ ಸ್ತ್ರೀವೇಷ ಮಾಡಿದಾಗ, ಪೌರುಷವೇ ಮೂರ್ತಿವೆತ್ತ ಅವರಲ್ಲಿ ಸ್ತ್ರೀಪಾತ್ರದ ಯಾವ ಲಕ್ಷಣಗಳನ್ನೂ ಕಾಣದೆ ದಂಗಾಗಿದ್ದನ್ನು ಸ್ಮರಿಸಿಕೊಳ್ಳುತ್ತಾರೆ.

ರಾಜ ವೇಷದ ಗತ್ತು–ಗಾಂಭೀರ್ಯಗಳಲ್ಲಿ ಅಳಿಕೆಯವರನ್ನು ಸರಿಗಟ್ಟುವವರಿಲ್ಲ ಎಂದರೆ ಅತಿಶಯವಾಗದು. ಪೀಠಿಕೆ ವೇಷ ಹಾಗೂ ಇದಿರು ವೇಷಗಳೆರಡರಲ್ಲೂ ಅವರದು ಪರಿಪೂರ್ಣವಾದ ನಿರ್ವಹಣೆ, ಸೊಗಸಾದ ವೇಷಗಾರಿಕೆ, ನರ್ತನ, ಅಭಿನಯ, ರಂಗಚಲನೆ– ಎಲ್ಲದರಲ್ಲೂ ಅವರದು 'ಅಳಿಕೆ ಶೈಲಿ'. ಪುತ್ತೂರು ತಾಲೂಕಿನ ಕುಂಬ್ರದಲ್ಲಿ ದ್ರೌಪದಿ ವಸ್ತ್ರಾಪಹರಣ ಪ್ರಸಂಗದ ಅವರ ಕೌರವ ಪಾತ್ರಕ್ಕೆ ಓರ್ವ ಅಭಿಮಾನಿ ಚಿನ್ನದ ಕೈ ಸರಪಳಿಯನ್ನು ಮೆಚ್ಚುಗೆಯಾಗಿ ನೀಡಿದ್ದನ್ನು ನೆಲದಲ್ಲಿ ಕುಳಿತು ಆಟ ನೋಡುತ್ತಿದ್ದ ನಾನು ಪುಳಕಗೊಂಡಿದ್ದೇನೆ. ಚೂಡಾಮಣಿಯ ಹನುಮಂತನಾಗಿ, ಅವರು ಲೀಲಾಜಾಲವಾಗಿ ಅಭಿನಯಿಸುತ್ತಿದ್ದುದು ಈಗಲೂ ಹಸಿರಾಗಿಯೇ ಇದೆ. ಅವರ ದುಷ್ಯಂತ, ಋತುಪರ್ಣ, ಸೀತಾ ಪರಿತ್ಯಾಗದ ಲಕ್ಷ್ಮಣ, ಅವಸಾನದ ಕರ್ಣ ಇತ್ಯಾದಿ ಪಾತ್ರಗಳು ಅಭಿಮಾನಿಗಳೆದೆಯಲ್ಲಿ ಶಾಶ್ವತವಾಗಿ ಅಚ್ಚೊತ್ತಿವೆ. ನಳಚರಿತ್ರೆಯ ಋತುಪರ್ಣನೆಂಬ ಪುಟ್ಟ ಪಾತ್ರ ನಳನಿಗಿಂತಲೂ ಎತ್ತರಕ್ಕೆ ಬೆಳೆದುದು ಅಳಿಕೆ ಯಕ್ಷರಂಗಕ್ಕಿತ್ತ ದೊಡ್ಡ ಕೊಡುಗೆ. ಶೇಣಿ ಗೋಪಾಲಕೃಷ್ಣ ಭಟ್ಟರ ವೀರಮಣಿಯ ಎದುರಿಗೆ ಅಳಿಕೆಯವರ ಹನುಮಂತ, ಶೇಣಿಯವರ ಪರಿತ್ಯಾಗದ ರಾಮನೆದುರು ಅವರ ಲಕ್ಷ್ಮಣ ಪಾತ್ರಗಳನ್ನು ಕಂಡು ಮೂಕರಾಗಿದ್ದಾರೆ. ಎದುರಾಳಿಯ ಕುಟುಕುವ ಮಾತುಗಳಿಗೆ ವಿಚಲಿತರಾಗದೆ ರಂಗಪ್ರಜ್ಞೆ ಮತ್ತು ಪಾತ್ರ ಮರ್ಯಾದೆಯನ್ನು ದೃಷ್ಟಿಯಲ್ಲಿಟ್ಟು ಅವರು ಉತ್ತರಿಸುತ್ತಿದ್ದ ರೀತಿ ಎಂದೂ ಮರೆಯಲಾಗದ್ದು. ತರ್ಕ– ವಾದಗಳಲ್ಲಿ ಇನ್ನೊಬ್ಬರಿಗೆ ಬಿಟ್ಟುಕೊಡಲಾಗದಷ್ಟು ಸಂಗ್ರಹ–ಸಾಮರ್ಥ್ಯ ಅವರಲ್ಲಿದ್ದರೂ ರಂಗದಲ್ಲಿ ಸ್ಥಿತಪ್ರಜ್ಞರಾಗಿ ಅವರು ವರ್ತಿಸುತ್ತಿದ್ದುದು ಇಂದಿನ ಅನೇಕ ಕಲಾವಿದರಿಗೆ ಮಾದರಿ ಎನ್ನಬಹುದು. ತುಳು ಪ್ರಸಂಗಗಳ ನಾಟಕೀಯತೆ ಮತ್ತು ಪಾತ್ರ ಸ್ವಭಾವಗಳಿಗೆ ತಕ್ಕಂತೆ ವ್ಯತ್ಯಾಸಗೊಳ್ಳುವ ಅವರ ಅಭಿನಯ–ಅಭಿವ್ಯಕ್ತಿ ಅಳಿಕೆಯವರು ಚರಿತ್ರ ನಟರೆಂಬುದನ್ನು ಸಾಬೀತುಗೊಳಿಸಿವೆ. 'ದಳವಾಯಿ ದುಗ್ಗಣ್ಣ'ದ ಪುಂಡ ಯುವರಾಜ, ಪಂಜುರ್ಲಿ ಪ್ರತಾಪದ ಪಿತೃಭಕ್ತ ಬೀರ ಕಲ್ಕುಡ ಪಾತ್ರಗಳನ್ನು ಇನ್ನಿಲ್ಲವೆಂಬಂತೆ ಅವರು ಚಿತ್ರಿಸಿದ್ದಾರೆ. ತಾರುಣ್ಯದಿಂದ ಹಿಡಿದು ವೃದ್ಧಾಪ್ಯದವರೆಗೆ ರಂಗದಲ್ಲಿದಷ್ಟು ಕಾಲ ಅವರು ಉದಾಸೀನ ಮಾಡಿದವರೇ ಅಲ್ಲ. ಕಟೀಲು ಮೇಳದಲ್ಲಿ ಕೊನೆಯ ತಿರುಗಾಟ ಮಾಡುತ್ತಿದ್ದಾಗ ಸಣ್ಣ ಪುಟ್ಟ ಪಾತ್ರಗಳಲ್ಲೂ ಅವರು ತಾದ್ಯಾತ್ಮರಾಗಿ ಅಭಿನಯಿಸುತ್ತಿದ್ದುನ್ನು ಕಂಡು ಅನೇಕರು 'ಈ ಪ್ರಾಯದಲ್ಲೂ ಅಳಿಕೆ ಅಳಿಕೆಯೇ' ಎಂದು ಉದ್ಗರಿಸಿದ್ದನ್ನು ನಾನು ಕೇಳಿದ್ದೇನೆ. ಯಕ್ಷಗಾನದ ಸ್ವರೂಪ ಮತ್ತು ರಂಗ ಪ್ರಯೋಗದ ಬಗ್ಗೆ ಅಳಿಕೆಯವರಿಗೆ ಖಚಿತವಾದ ಅಭಿಪ್ರಾಯಗಳಿದ್ದವು. ನಾವು ಮಂಗಳೂರಿನ ಯಕ್ಷಗಾನ ಪರಿಷತ್ತಿನ ಆಶ್ರಯದಲ್ಲಿ ಅವರ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ ಮೊದಲಾದವನ್ನು ಏರ್ಪಡಿಸಿದ ಸಂದರ್ಭದಲ್ಲಿ ಅವರ ಅಪೂರ್ವವಾದ

ರಂಗಾನುಭವ ಮತ್ತು ಅದರ ಕರಾರುವಕ್ಕಾದ ಮಂಡನೆಗೆ ಸಭೆ ಬೆರಗಾಗಿತ್ತು.

ಅಳಿಕೆ ರಾಮಯ್ಯ ರೈ ತಮ್ಮ ಕಲಾ ಜೀವನದುದ್ದಕ್ಕೂ ಅಲಕಾವತಿಯ ಅನಭಿಷಿಕ್ತ ಸಾಮ್ರಾಟರಾಗಿ ಮೆರೆದವರು. 1926ರಲ್ಲಿ ಕಣಿಪುರ ಗೋಪಾಲ ಕೃಷ್ಣನ ಇದಿರು ಗೆಜ್ಜೆ ಕಟ್ಟಿದ ಅಳಿಕೆ ರಾಮಯ್ಯ ರೈ 1984ರಲ್ಲಿ ಕಟೀಲು ಭ್ರಮರಾಂಭೆಯ ಸನ್ನಿಧಿಯಲ್ಲಿ ಅಂತಿಮವಾಗಿ ಗೆಜ್ಜೆ ಬಿಚ್ಚಿದರು. ಆಗಸ್ಟ್ 21, 1989ರಲ್ಲಿ ಅವರು ಇಹಲೋಕ ತ್ಯಜಿಸಿದರು. ಅವರಿಗೆ ರಾಜ್ಯ ಪ್ರಶಸ್ತಿ ಬಹಳ ಹಿಂದೆಯೇ ಬಂದಿತ್ತು. ಭಾರತದ ಎರಡನೆಯ ರಾಷ್ಟ್ರಪತಿ ಡಾ.ಎಸ್. ರಾಧಾಕೃಷ್ಣನ್ ಎದುರು ಅದ್ಭುತವಾಗಿ ಕುಣಿದು, ಅವರಿಂದ ರಾಷ್ಟ್ರ ಮಟ್ಟದಲ್ಲಿ ಗೌರವಿಸಲ್ಪಟ್ಟಿದ್ದರೂ ಅದು ಸುದ್ದಿಯಾಗಲೇ ಇಲ್ಲ. ನಿಜ ಹೇಳಬೇಕೆಂದರೆ ಅದು ತೆಂಕುತಿಟ್ಟಿನ ಯಕ್ಷಗಾನಕ್ಕೆ ಲಭಿಸಿದ ಮೊದಲ ರಾಷ್ಟ್ರ ಪ್ರಶಸ್ತಿ. ಆದರೆ ಅಳಿಕೆಯವರ ಸಾಧನೆಯನ್ನು ದಾಖಲಿಸುವ ಯತ್ನಗಳು ಯಾವೊಂದು ನೆಲೆಯಲ್ಲೂ ನಡೆದಿಲ್ಲ.

ಮಣಿಪಾಲ ಸಾಹಿತ್ಯ ಸಂಘದವರು ಅಳಿಕೆ ನಿಧನರಾದ ಸಂದರ್ಭದಲ್ಲಿ ಅವರ ನೆನಪಿನ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿದ್ದರು. ಆಗ 'ಯಕ್ಷತಿಲಕ' ವೆಂಬ ಪುಟ್ಟ ಸಂಚಿಕೆಯನ್ನು ಹೊರತಂದಿದ್ದರು. 2008ರಲ್ಲಿ ದೆಹಲಿಯ ತುಳುನಾಡು ಅಭಿವೃದ್ಧಿ ವೇದಿಕೆಯು 'ದೆಹಲಿ ಮಿತ್ರ'ದ ವಸಂತ ಶೆಟ್ಟಿ ಬೆಳ್ಳಾರೆಯವರ ನೇತೃತ್ವದಲ್ಲಿ 'ಅಳಿಕೆ ಸಂಸ್ಮರಣೆ' ಕಾರ್ಯಕ್ರಮವೊಂದನ್ನು ಆಯೋಜಿಸಿದ್ದ ಸಂದರ್ಭದಲ್ಲಿ ಅಳಿಕೆಯವರ ಕುರಿತು ಸಂಸ್ಮರಣಾ ಭಾಷಣ ಮಾಡುವ ಸುಯೋಗ ಈ ಲೇಖಕನದ್ದಾಗಿತ್ತು. ಹುಟ್ಟೂರಿಗರಿಗೆ ನೆನಪಾಗದ ಅಳಿಕೆಯವರು ದೆಹಲಿಯಲ್ಲಿರುವ ತುಳುನಾಡಿಗರಿಗೆ ನೆನಪಾದುದು ಒಂದು ಯೋಗಾಯೋಗ. ದೆಹಲಿ ಮಿತ್ರ ಆಗ ಕನಸು ಕಂಡಿದ್ದ ಕಟ್ಟಿಕೊಂಡಿದ್ದ ಗ್ರಂಥ ಪ್ರಕಟನೆಯ ಸಂಕಲ್ಪ ಈಗ ಈಡೇರುತ್ತಿರುವುದು ಸಂತೋಷ ಪಡುವ ಸಂಗತಿ.

ಅಳಿಕೆಯವರು ಗತಿಸಿ ಎರಡು ದಶಕಗಳು ಕಳೆದಿವೆ. ಅವರ ಮಕ್ಕಳು, ಕುಟುಂಬಸ್ಥರು ಹಾಗೂ ಅಭಿಮಾನಿಗಳು, 2009ರ ಡಿಸೆಂಬರ್‌ನಲ್ಲಿ 'ಅಳಿಕೆ ರಾಮಯ್ಯ ರೈ ಟ್ರಸ್ಟ್'ನ್ನು ಸ್ಥಾಪಿಸಿದ್ದಾರೆ. ದಿ. ಅಳಿಕೆಯವರ ಪತ್ನಿ ಶ್ರೀಮತಿ ಸುಂದರಿ ರಾಮಯ್ಯ ರೈ ಅಧ್ಯಕ್ಷರಾಗಿರುವ ಅಳಿಕೆ ಪ್ರತಿಷ್ಠಾನದಲ್ಲಿ ಪ್ರೊ. ಎಸ್.ಆರ್. ರೈ, ಸಿ.ಆರ್. ರೈ, ಯಶೋದ ಎಸ್. ಶೆಟ್ಟಿ, ವೇದಾ ಜೆ. ಶೆಟ್ಟಿ, ಬಾಲಕೃಷ್ಣ ಆರ್. ರೈ, ಉಷಾ ಎನ್. ಶೆಟ್ಟಿ, ಇಂದಿರಾ ಎಂ. ರೈ, ದುರ್ಗಾಪ್ರಸಾದ್ ರೈ ವಿಶ್ವಸ್ಥರಾಗಿದ್ದಾರೆ. ಪ್ರತಿವರ್ಷ ಓರ್ವ ಅಶಕ್ತ ಕಲಾವಿದರಿಗೆ ಸಹಾಯನಿಧಿಯನ್ನು ನೀಡಲು ಟ್ರಸ್ಟ್ ಯೋಜಿಸಿದೆ. ಹುಟ್ಟೂರಾದ ಅಳಿಕೆಯ ಶ್ರೀ ಸತ್ಯಸಾಯಿ ಲೋಕಸೇವಾ ವೃಂದದಲ್ಲಿಯೇ ಟ್ರಸ್ಟ್ ಉದ್ಘಾಟನೆಯಾಗಿದ್ದು, ಹಿರಿಯ ಯಕ್ಷಗಾನ ಕಲಾವಿದ ಪಕಳಕುಂಜ ಕೃಷ್ಣ ನಾಯ್ಕರಿಗೆ ಪ್ರಥಮ 'ಅಳಿಕೆ ಸಹಾಯನಿಧಿ'ಯನ್ನು ನೀಡಲಾಗಿದೆ. ಈ ಎಲ್ಲಾ ಉಪಕ್ರಮಗಳು 'ಅಳಿಕೆಗೆ ಅಳಿವಿಲ್ಲ' ಎಂಬುದನ್ನು ಸಾರಿ ಹೇಳಿವೆ.

ಯಕ್ಷಗಾನದಲ್ಲಿ ಮತ್ತೊಬ್ಬ ಅಳಿಕೆ ಬರುತ್ತಾರೆ ಎನ್ನುವ ಹಾಗಿಲ್ಲ. ಆದರೆ ಅಳಿಕೆಯವರ ಕಾಲದ ಶಿಸ್ತು, ಶ್ರದ್ಧೆ, ವೃತ್ತಿ ನಿಷ್ಠೆ, ಪರಿಶ್ರಮ ಮತ್ತು ಪಾತ್ರ ತನ್ಮಯತೆ– ಈ ಪಂಚಸೂತ್ರಗಳನ್ನು ಇಂದಿನ ಕಲಾವಿದರೂ ಆಚರಣೆಗೆ ತರಲಿ ಎಂದು ಆಶಿಸಬಹುದಾಗಿದೆ.



# ದಶಾವತಾರಿ ಶ್ರೀ ಅಳಿಕೆ ರಾಮಯ್ಯ ರೈ

**ಪು. ಶ್ರೀನಿವಾಸ ಭಟ್ಟ, ಕಟೀಲು**

ತೆಂಕುತಿಟ್ಟಿನ ದಶಾವತಾರ ಮೇಳಗಳಲ್ಲಿ ಕಲಾವಿದನಾಗಿದ್ದು, ದಿಗಂತ ವಿಶ್ರಾಂತ ಕೀರ್ತಿಶಾಲಿಯಾಗಿ ಮೆರೆದವರು ಶ್ರೀ ಅಳಿಕೆ ರಾಮಯ್ಯ ರೈಯವರು. ಅವರು ಈಗ ನಮ್ಮನ್ನು ಅಗಲಿ ಹೋಗಿರುವವರಾದರೂ ಕಲಾ ಪ್ರಪಂಚದಲ್ಲಿ ಅವರು ನಡೆದು ಬಂದ ದಾರಿಯ ಹೆಜ್ಜೆ ಗುರುತುಗಳು, ಬಹಳ ಕಾಲ ಮರೆಯಾಗುವಂಥವುಗಳಲ್ಲ. ಅವರು ಜನಿಸಿದ ಕಾಲ (1915) ಯಕ್ಷಗಾನ ಬಯಲಾಟದಲ್ಲಿ ಪರಿವರ್ತನೆಯ ಮುಂಗೋಳಿ ಕೂಗಿದ ಮುಂಜಾವು. ಈ ಶತಮಾನದ ಆದಿಭಾಗ ಹಾಗೂ ತತ್ಪೂರ್ವದ ಬಯಲಾಟಗಳ ಸ್ವರೂಪ ಹೇಗಿತ್ತೆಂದು ಸ್ಪಷ್ಟವಾಗಿ ತಿಳಿಸಬಲ್ಲವರು ನಮಗೀಗ ಸಿಗಲಾರರು. ಶ್ರೀ ಮಾಂಬಾಡಿ ನಾರಾಯಣ ಭಾಗವತರು, ಅಗರಿ ಶ್ರೀನಿವಾಸ ಭಾಗವತರು ಇವರಂತಹ ಹಿರಿಯರಿಂದ ಕೆಲವು ವಿವರಗಳನ್ನು ಪಡೆಯಬಹುದು. ಕೆಲವು ವರ್ಷಗಳ ಹಿಂದೆ ಖ್ಯಾತ ಮದ್ದಳೆಗಾರ ಕೆಮ್ಮಣ್ಣು (ಮೂಡಬಿದ್ರಿ) ನಾರ್ಣಪ್ಪಯ್ಯ ಮತ್ತು ಶ್ರೀ ಮವ್ವಾರು ಕಿಟ್ಟಣ್ಣ ಭಾಗವತ ಇವರಿಬ್ಬರಲ್ಲಿ ನಡೆಸಿದ ಸಂದರ್ಶನ. ಪತ್ರ ವ್ಯವಹಾರಗಳಿಂದ ತಿಳಿದು ಬರುವಂತೆ, ಅಂದಿನ ಬಯಲಾಟದಲ್ಲಿ, ಈ ಕಾಲಕ್ಕೆ ಕಳಪೆಯೆನಿಸಬಹುದಾದ ಕೆಲವಂಶಗಳಿದ್ದವು. ಬಯಲಾಟದ ಮುಖ್ಯ ಆಕರ್ಷಣೆಯಾದ ಚೆಂಡೆಗೆ ಪ್ರಾಶಸ್ತ್ಯವಿರಲಿಲ್ಲ. ಒಂದೇ ಕೋಲಿನಿಂದ ಚೆಂಡೆಬಾರಿಸುವ ಕ್ರಮವಿತ್ತು. ಹಿಮ್ಮೇಳದವರು ಇಡೀ ರಾತ್ರಿ ನಿಂತಿರಬೇಕಾಗಿತ್ತು. ಅವರೂ ವೇಷದೊಂದಿಗೆ ಚಲಿಸಬೇಕಾಗಿತ್ತು. ವಾದ್ಯಗಳಲ್ಲಿ ಶ್ರುತಿ ಸಾಂಗತ್ಯವಿರಲಿಲ್ಲ. ಅರ್ಥಗಾರಿಕೆಯಲ್ಲಿ ಲಘು ಶಬ್ಧಗಳು, ವಿಚಾರಗಳು ಬರುತ್ತಿದ್ದವು.

ಭಾಮಿನಿ, ವಾರ್ಧಕಗಳನ್ನು ಹಾಡುವಾಗ ಅದರ ಮೊದಲ ಚರಣವನ್ನು ಮತ್ತೆ, ಮತ್ತೆ ಹೇಳುವ ಕ್ರಮವಿತ್ತು. ಸಾಹಿತ್ಯ ಶುದ್ಧವಿರಲಿಲ್ಲ. ಇಂತಹವುಗಳನ್ನು ಹೊಡೆದಟ್ಟಿ, ಬಯಲಾಟಕ್ಕೆ, ಒಂದು ಸಂಸ್ಕಾರವಿತ್ತವರು ದಿ. ಬಲಿಪ ನಾರಾಯಣ ಭಾಗವತರು

(1889–1966). ಅವರು ಬಯಲಾಟಕ್ಕೆ ಪ್ರತಿ ವಿಶ್ವಾಮಿತ್ರನಂತಿದ್ದರು. ಅವರ ಹಾಡುಗಾರಿಕೆಗೆ ನೂತನ ಆಯಾಮಗಳನ್ನೀಯಲು ಪ್ರಸಿದ್ಧ ಹರಿದಾಸ ಪಾವಂಜೆ ಲಕ್ಷ್ಮೀನಾರ್ಣಪ್ಪಯ್ಯ ನವರು ಸಹಕರಿಸಿದ್ದರಂತೆ. ಈಗ ನಾವು ಬಲಿಪರ ಶೈಲಿಯನ್ನು ಪರಂಪರೆ ಎನ್ನುತ್ತೇವೆ. ಆದರೆ ಆ ಕಾಲದಲ್ಲಿ ಅದನ್ನು ಯಕ್ಷಗಾನವೇ ಅಲ್ಲವೆಂದು ಮೂದಲಿಸಿದವರಿದ್ದರಂತೆ. ಈ ಕಾಯಕದಲ್ಲಿ ದಿ. ಬಲಿಪರಿಗೆ ಸಹವರ್ತಿಗಳಾಗಿ ಶ್ರೀ ಕಿಟ್ಟಣ್ಣ ಭಾಗವತರು. ಮಾಂಬಾಡಿ ಭಾಗವತರು, ಜೋಯಿಸ ಭಾಗವತರು, ಹಿಮ್ಮೇಳದವರಲ್ಲಿ ಕುದುರೆಕೊಡ್ಲು ರಾಮಭಟ್ಟ, ನಿಡ್ಲೆ ನರಸಿಂಹ ಭಟ್ಟ ಮೊದಲಾದವರು ಸಹಕರಿಸಿದ್ದರು. ಇವರೆಲ್ಲರ ಪ್ರಯತ್ನದ ಫಲವಾಗಿ ಗ್ರಾಮೀಣ ಜನರ ಕೈಗೂಸಾಗಿದ್ದ ಬಯಲಾಟ ಕಲೆಯ ಕಡೆಗೆ ವಿದ್ಯಾವಂತರ ದೃಷ್ಟಿ ಬೀಳುವಂತಾಯಿತು. ಇಂತಹ ಒಂದು ಒಳ್ಳೆಯ ಅವಧಿಯಲ್ಲಿ ಜನಿಸಿದ ರೈಯವರಿಗೆ, ಒಬ್ಬ ಕಲಾವಿದನ ಯಶಸ್ಸಿಗೆ ಬೇಕಾಗಬಹುದಾದ ಹಲವು ಗುಣಗಳು ಲಭ್ಯವಾಗಿದ್ದವು. ಕಲಾವಿದ ಮನೆತನದ ಪರಂಪರೆ, ಪರಿಸರ, ಸಹವಾಸ, ಚಿಂತನಶೀಲತೆ, ಅಧ್ಯಯನ ಆಸಕ್ತಿ, ಅದ್ಭುತ ಗ್ರಹಣ ಶಕ್ತಿ, ಪ್ರತ್ಯುತ್ಪನ್ನಮತಿ, ದಶಾವತಾರ ವೇಷಕ್ಕೆಂದೇ ಹೇಳಿ ಮಾಡಿಸಿದಂತಹ ಮೈಕಟ್ಟು ಇವುಗಳು ದೈವದತ್ತವಾಗಿ ದೊರಕಿದ್ದವು. ಅವರ ತಂದೆ ಶ್ರೀ ಮೋನಪ್ಪ ರೈಯವರು, 'ಭಾರತದ ಭೀಷ್ಮ'ನೆಂಬ ಹೊಗಳಿಕೆಗೆ ಪಾತ್ರರಾಗಿದ್ದ ವೇಷಧಾರಿ ಯಾಗಿದ್ದರು. ಅವರಿಂದ ಯಕ್ಷಗಾನದ ಪ್ರಾಥಮಿಕ ಅನುಭವಗಳನ್ನು ಮೈಗೂಡಿಸಿಕೊಂಡು, ತನ್ನ 12ನೆ ವರ್ಷದಲ್ಲಿ ಶಾಲಾ ವಿದ್ಯಾಭ್ಯಾಸವನ್ನು ನಿಲ್ಲಿಸಿ ಇಚ್ಲಂಪಾಡಿ ಮೇಳದಲ್ಲಿ ಗೆಜ್ಜೆ ಕಟ್ಟಿದರು. ಮುಂದಿನ ವರ್ಷಗಳಲ್ಲಿ ಕಟೀಲು, ಇರಾ, ಕರ್ನಾಟಕ ಯಕ್ಷಗಾನ ನಾಟಕ ಸಭಾ ಈ ಸಂಸ್ಥೆಗಳಲ್ಲಿ 60 ವರ್ಷಗಳಷ್ಟು ಕಾಲ ಅವರ ಕಲಾಸೇವೆ ನಡೆದಿದೆ. ಒಂದೆರಡು ವರ್ಷ ಕದ್ರಿ ಮೇಳದಲ್ಲಿದ್ದಂತೆ ತಿಳಿದು ಬರುತ್ತದೆ. ಅವರು ತುಳು ಪ್ರಸಂಗಗಳಲ್ಲಿ ಅಭಿನಯಿಸುತ್ತಿದ್ದರೂ ಅವರ ಮೂಲಸತ್ವದ ಪುರಾಣ ಪಾತ್ರಗಳು ಅವರಿಂದ ದೂರ ಹೋಗಲಿಲ್ಲ.

1972ನೇ ಇಸವಿಯಲ್ಲಿ ಕಟೀಲು ದೇವಳದ ಉದರಾಶ್ರಯ ಹಾಗೂ ಶ್ರೀ ವೇದಮೂರ್ತಿ ಸದಾನಂದ ಅಸ್ರಣ್ಣರ ಪ್ರೋತ್ಸಾಹದಿಂದ ಶಾಲಾ ಬಾಲಕರಿಗೆ ಮತ್ತು ಆಸಕ್ತರಿಗೆ ಯಕ್ಷಗಾನ ನಾಟ್ಯದ ವಿಶೇಷ ತರಬೇತಿಗೆಂದು ಒಂದು ಕಾರ್ಯಾಗಾರದ ವ್ಯವಸ್ಥೆಯಾಗಿತ್ತು. ಅದರ ಗುರು ಶ್ರೀ ಅಳಿಕೆಯವರು; ಅವರಿಗೆ ಸಹಾಯಕ ಕಾಂಚನ ನಾರಾಯಣ ಭಟ್ಟರು (ಮದ್ಲೆಗಾರ). ಅವರು ನಮ್ಮೊಂದಿಗಿದ್ದ ಒಂದು ತಿಂಗಳ ಕಾಲ ಕಲೆಗೆ ಸಂಬಂಧಿಸಿದ, ಅಂತೆಯೇ ಅವರ ವೈಯಕ್ತಿಕ ಜೀವನದ ಅನುಭವಗಳನ್ನು ಸಂಭಾಷಣೆಯಿಂದ ತಿಳಿಯಲು ಅವಕಾಶ ದೊರೆಯಿತು. ಬಯಲಾಟದಲ್ಲಿ ಕೇಶವಾರಿ ಕಿರೀಟದ ರಾಕ್ಷಸ ಪಾತ್ರಗಳನ್ನು ಬಿಟ್ಟು, ಉಳಿದ ಎಲ್ಲಾ ರೀತಿಯ ವೇಷಗಳನ್ನು ಅವರು ಮಾಡಿದ್ದಾರೆ. ಸ್ತ್ರೀ ವೇಷದ ಅನುಭವಗಳನ್ನು ವಿಖ್ಯಾತ ಸ್ತ್ರೀ ವೇಷಧಾರಿ ಶ್ರೀ ಐತಪ್ಪ ಶೆಟ್ರಿಂದಲೂ, ಪುಂಡು ವೇಷಕ್ಕೆ ಹುರುಪಿನ ಪುಂಡು ವೇಷಧಾರಿ ಕುಂಞಣ್ಣ ಅಡ್ಯಂತಾಯರನ್ನೂ, ರಂಗ ಸ್ಥಳ ಪ್ರವೇಶದ ಕ್ರಮ ಮತ್ತು ಇತರ ಕೆಲವು ವಿಷಯಗಳಿಗೆ

ಶ್ರೀ ಕುಂಬಳೆ ಗುಂಡನವರನ್ನೂ ಅಪೂರ್ವವಾದ ಕಿರುಕುಣಿತಗಳಿಗೆ ಶ್ರೀ ಕಾವುಕಣ್ಣನವರನ್ನೂ ಆದರ್ಶವಾಗಿರಿಸಿ, ಇವರು ಪರಿಪೂರ್ಣತೆಯತ್ತ ಸಾಗಿದ್ದಾರೆ. ಇಷ್ಟು ಸಾಲದೆ ತನ್ನ ಮನೋಧರ್ಮದಿಂದಲೂ ನಾನಾ ಅನುಭವಗಳನ್ನು ಮಾಡಿಕೊಂಡಿದ್ದರು. ಬಾಲ್ಯದಲ್ಲಿ ಪ್ರಹ್ಲಾದ, ಮಾರ್ಕಾಂಡೇಯ, ಬಾಲಕೃಷ್ಣ, ಬ್ರಹ್ಮಚಾರಿ ಹನುಮಂತ, ಧ್ರುವ, ಚಂದ್ರಹಾಸ, ವಿಭೀಷಣ ಇಂತಹ ಪಾತ್ರಗಳಿಂದ ಉದಯೋನ್ಮುಖರಾದರು. ಜವ್ವನದಲ್ಲಿ ಅಭಿಮನ್ಯು, ಬಭ್ರುವಾಹನ, ಚಿತ್ರಕೇತು, ಲಕ್ಷ್ಮಣ, ಮತ್ಸ್ಯವಾನರ, ಅಂಗದ, ಶ್ವೇತವಾಹನ, ಪರಶುರಾಮ ಈ ರೀತಿಯ ಹುರುಪಿನ ಪಾತ್ರಗಳನ್ನು ವಹಿಸಿ, ಪಡೆದ ಬಹುಮಾನಗಳಿಗೆ ಲೆಕ್ಕವಿಲ್ಲ. ವಯಸ್ಸು ಏರುತ್ತಾ ಬಂದಾಗ ಅರ್ಜುನ, ಕರ್ಣ, ತಾಮ್ರಧ್ವಜ, ಸುಧನ್ವ, ಋತುಪರ್ಣ, ಭೀಷ್ಮ, ರಕ್ತಬೀಜ, ಶಿಶುಪಾಲ, ಹಿರಣ್ಯಾಕ್ಷ, ಚಂಡ, ಮುಂಡ ಈ ಬಗೆಯ ವೇಷಗಳಿಂದ ಹೆಸರು ಪಡೆದರು. ಬೆಡಗಿನ ಸ್ತ್ರೀ ಪಾತ್ರಗಳಾದ ಮಾಯಾಪೂತನಿ, ಮಾಯಾಅಜಮುಖಿ, ಮಾಯಾಶೂರ್ಪನಖಿ ಇಂತವುಗಳಲ್ಲದೆ, ಅಂಬೆ, ಚಂದ್ರಮತಿ, ದಮಯಂತಿ, ಸುಭದ್ರೆ, ಶಶಿಪ್ರಭೆ, ಶ್ರೀದೇವಿ ಮೊದಲಾದ ಗಂಭೀರ ಪಾತ್ರಗಳನ್ನು ಭಾವಪೂರ್ಣವಾಗಿ ನಿರ್ವಹಿಸುತ್ತಿದ್ದರು.

ಇವರ ವೇಷಗಳು ಎಲ್ಲ ರೀತಿಯಲ್ಲೂ ಉಳಿದವರಿಗಿಂತ ವಿಭಿನ್ನವಾಗಿ ಮೆರೆಯುತ್ತಿದ್ದವು. ಇದಕ್ಕೆ ಇರುವ ಕಾರಣಗಳು ಒಂದೆರಡಲ್ಲ. ಪುಂಡು ವೇಷಗಳಿಗೆ ಕುಣಿತ ಪ್ರಧಾನ. ಅಭಿಮನ್ಯು ವಿನಂತಹ ವೇಷಗಳ ಪ್ರವೇಶದಲ್ಲಿ, ಯುದ್ಧದ ಸನ್ನಿವೇಶದಲ್ಲಿ ಒಂದೇ ತಾಳದ ಪದ್ಯಗಳು ಒತ್ತೊತ್ತಿಗೆ ಬಂದರೂ ವೈವಿಧ್ಯಮಯವಾಗಿ ಕುಣಿಯುವ ರೀತಿ ಅವರಿಗೇ ಮೀಸಲು. ಚೆಂಡೆಯವರ ಕೈಸೋಲುವ ತನಕ ಕುಣಿದು, ನಿಂತಲ್ಲಿಂದಲೇ ನಿರರ್ಗಳವಾಗಿ, ನಿರಾಯಾಸವಾಗಿ ಅರ್ಥವಿಸುವ ಸಾಮರ್ಥ್ಯ ಅವರಿಗಿತ್ತು. ಪದ್ಯದ ಬಿಡ್ತಿಗೆ ಎತ್ತುವಲ್ಲಿವರೆಗೆ ನಿಂತಲ್ಲೇ ಅಭಿನಯಿಸಿ, ಮುಂದೆ ಕುಣಿಯಲು ಹೊರಡುವ ರೀತಿ ಆಕರ್ಷಣೀಯವಾಗಿತ್ತು. ಅದರಲ್ಲಿ ಸಹಜತೆಯಿತ್ತು. ತುಡಿತವಿರಲಿಲ್ಲ. ನಿಧಾನ ಪದ್ಯದ ಕಿರು ಕುಣಿತಗಳನ್ನು ಕುಣಿಯುವಾಗ, ಶ್ರುತಿಬದ್ಧವಾದ ಅವರ ಗೆಜ್ಜೆಯಲ್ಲಿ ಹೊರ ಹೊಮ್ಮುತ್ತಿದ್ದ ತಾಳದ ನುಡಿತ ಅಪೂರ್ವವಾಗಿತ್ತು. ಕಟ್ಟಿದ ನೂಲುಗಳು ಕಾಣದಂತೆ ಮೈಯ ಮಣಿ ಸಾಮಾನುಗಳನ್ನು ಧರಿಸಿಕೊಳ್ಳುವ ಅವರ ಕೈಚಳಕ ಎಲ್ಲರಿಗೂ ಬರುವಂತದ್ದಲ್ಲ. ಅವರ ವೃತ್ತಿಜೀವನದಲ್ಲಿ, ಅವರ ವೇಷಭೂಷಣ, ಕಿರೀಟ, ಗೆಜ್ಜೆಗಳು ಒಮ್ಮೆಯೂ ಅವ್ಯವಸ್ಥೆಯಾದುದಿಲ್ಲ. ರೈಯವರ ಅರ್ಥಗಾರಿಕೆ ತಿದ್ದಿ ತೀಡಿದ ಪಾಂಡಿತ್ಯಪೂರ್ಣವಾದ ಒಂದು ಸಾಹಿತ್ಯ ಸೃಷ್ಟಿ. ಪ್ರಾಕ್ಕಾವ್ಯಗಳಲ್ಲಿ ಮಾತ್ರ ದೊರಕಬಹುದಾದ ಪದಸಂಚಯ, ಸಮಯೋಚಿತ ನುಡಿಗಟ್ಟು, ಅರ್ಥಗರ್ಭಿತ ಗಾದೆಯ ಮಾತು, ವ್ಯಾಕರಣ ಶುದ್ಧವಾದ, ಆಲಂಕಾರಿಕ ಭಾಷೆ, ಅಲ್ಲಲ್ಲಿಗೆ ಅಗತ್ಯವಾದ ಪೂರ್ವಕತೆ, ಮುಖಭಾವ, ಸ್ವರಭಾರದ ಏರಿಳಿತ ಇತ್ಯಾದಿ, ಇತ್ಯಾದಿಗಳಿಂದ ಪಂಡಿತ ಜನಪ್ರಿಯವಾಗಿತ್ತು. ಪ್ರಸಂಗ ಸಾಹಿತ್ಯಕ್ಕೆ ಆಕರಗಳಾದ ತೊರವೆ ರಾಮಾಯಣ, ಗದಗು ಭಾರತ, ಜೈಮಿನೀ ಭಾರತ, ಚಾಟುವಿಟಲನ ಭಾಗವತ, ಹರಿಶ್ಚಂದ್ರ ಕಾವ್ಯ, ರನ್ನನ ಸಾಹಸ ಭೀಮ ವಿಜಯ,

ಪಂಪಭಾರತ ಮೊದಲಾದ ಹಳೆಗನ್ನಡ ಕಾವ್ಯಗಳು ಅವರ ಪಾರಾಯಣ ಗ್ರಂಥಗಳಾಗಿದ್ದವು. ಯಾವುದಾದರೊಂದು ಪುರಾಣದ ಮೂಲೆಯಲ್ಲಿ ಹೇಳಿದ, ಬಹುಜನರ ಗಮನಕ್ಕೆ ಬಾರದ ಕತೆಗಳನ್ನು ಹುಡುಕಿ ಬಳಸಿಕೊಳ್ಳುವುದರಲ್ಲಿ ಅವರು ಅಗ್ರಗಣ್ಯರಾಗಿದ್ದರು.

ಅವರು ಅಭಿಮನ್ಯುವಾಗಿ ಗಳಿಸಿದ ಪ್ರಸಿದ್ಧಿ ವಿಶೇಷವಾದುದು. ಹಲವು ಜೋಡಾಟಗಳಲ್ಲಿ ಈ ಪಾತ್ರಧಾರಿಯಾಗಿ ಜಯಭೇರಿ ಬಾರಿಸಿದ್ದರು. ಇವತ್ತಿಗೂ ಅಭಿಮನ್ಯು ಕಾಳಗವೆಂದರೆ ರೈಯವರನ್ನು ನೆನಪಿಸುವ ಹಳಬರಿದ್ದಾರೆ. ಪಾರ್ತಿಸುಬ್ಬನು ಹೇಳಿದ ಸಿಡಿಲ ಮರಿಯಂಗದನಂತೆ ಅವರ ಅಂಗದನ ಅಭಿನಯವಿತ್ತು. ಅವರ ಕೃಷ್ಣಾರ್ಜುನ ಕಾಳಗದ ಸುಭದ್ರೆಯಲ್ಲಿ ವಿನೂತನತೆಯಿತ್ತು. ಸಂಧಾನಕ್ಕೆ ಬಂದ ಸುಭದ್ರೆಯನ್ನು ಮಾವಿನಸೊಪ್ಪಿನಿಂದ ಬಡಿದು ಓಡಿಸುವ ದೃಶ್ಯ ಪರಂಪರೆಯಿಂದ ಬಂದುದಿದೆ. ರೈಯವರ ಸುಭದ್ರೆ ಕಾಳಗದ ಗಂಡಾಂತರವನ್ನು ಗಂಡನಿಗೆ ತಿಳಿಸಲು ಬರುವ, ಜವಾಬ್ದಾರಿಯುತ ನಾರೀಮಣಿಯಾಗಿ ಬರುತ್ತಾಳೆ. ಅರ್ಜುನ ಸಂಧಿಗೊಪ್ಪದೆ ಅವಳನ್ನು ಹಿಂದಕ್ಕಟ್ಟಿದ್ದರೂ ದೂರದಲ್ಲಿ ನಿಲ್ಲುವಳು. ಒಂದು ಕ್ಷಣ ಮೌನ. ಮರುಕ್ಷಣದಲ್ಲಿ ಅರ್ಜುನ 'ಸುಭದ್ರಾ' ಎಂದಾಗ 'ಪ್ರಾಣೇಶ್ವರಾ' ಎಂದು ಓಡೋಡಿ ಬಂದು ಅಪ್ಪಿ ಕಣ್ಣೀರಿಳಿಸಿ ಯುದ್ಧಾಂತ್ಯದ ಪರಿಸ್ಥಿತಿ, ಅವನಿಗೆ ಪ್ರತಿಕೂಲವಾದರೆ, ಮುಂದಿನ ಗತಿಯೇನೆಂದು ಗೋಳಿಡುವುದು. ಆಗ ಪಾರ್ಥನು ಅಂತಹ ಕಾಲ ಬಂದರೆ ಸಹಗಮನ ಮಾಡಬಾರದೆಂದೂ ಅಭಿಮನ್ಯುವಿನೊಂದಿಗೆ ಬಂದು, ಧರ್ಮರಾಯನ ಆಸರೆಯಲ್ಲಿರಬೇಕೆಂದೂ ದ್ವಾರಾವತಿಯಲ್ಲಿರ ಬಾರದೆಂದೂ ಹೇಳುವ ಭಾಗ ಮಾರ್ಮಿಕವಾಗಿ ಮೂಡಿ ಬರುತ್ತಿತ್ತು. ಇಂತಹ ದೃಶ್ಯಗಳನ್ನು ಕಲ್ಪಿಸುವಲ್ಲಿ ಖ್ಯಾತ ಸ್ತ್ರೀ ವೇಷಧಾರಿ ಕಟೀಲು ಪುರುಷೋತ್ತಮ ಭಟ್ಟರೂ ಪಾಲ್ಗೊಳ್ಳುತ್ತಿದ್ದರಂತೆ. ಅವರ ಮಾಯಾ ಅಜಮುಖಿಯನ್ನು ಧರ್ಮಸ್ಥಳ ಶ್ರೀ ಮಂಜಯ್ಯ ಹೆಗ್ಡೆಯವರೂ, ಅಂಬೆಯನ್ನು ಆಗಿನ ಎಡನೀರು ಶ್ರೀಗಳವರೂ ಮೆಚ್ಚಿ ಹರಸಿದರಂತೆ. ಚಂದ್ರಮತಿಯ ಪಾತ್ರಕ್ಕೆ ರಾಘವಾಂಕನ ಹರಿಶ್ಚಂದ್ರ ಕಾವ್ಯ ಹಿನ್ನೆಲೆಯಾಗಿತ್ತು. ಅಗರಿ ಭಾಗವತರ ನಿರ್ದೇಶನದಲ್ಲಿ ಪ್ರದರ್ಶನಗೊಳ್ಳುತ್ತಿದ್ದ ಶಕುಂತಳಾ ಪರಿಣಯದ ದುಷ್ಯಂತ, ಕಾಳಿದಾಸನ ಶಾಕುಂತಳ ನಾಟಕದ ದುಷ್ಯಂತನನ್ನು ನೆನಪಿಸುತ್ತಿತ್ತು. ಶಕುಂತಳೆಯಾಗಿ ಖ್ಯಾತ ಸ್ತ್ರೀ ಪಾತ್ರಧಾರಿ ಕಟೀಲು ಪುರುಷೋತ್ತಮ ಭಟ್ಟರು ಅಭಿನಯಿಸುತ್ತಿದ್ದರು. ಒಂದು ನವರಾತ್ರಿ ವೇಳೆಯಲ್ಲಿ ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಒಂದು ಪಂಥಾಹ್ವಾನದ ಪ್ರದರ್ಶನದಲ್ಲಿ ಈ ಪ್ರಸಂಗವಾದಾಗ ಪೂಜ್ಯ ಮಂಜಯ್ಯ ಹೆಗಡೆಯವರು ನೋಡಿ ವಿಸ್ಮಿತರಾಗಿದ್ದರಂತೆ. ದೇವಯಾನಿ ಪ್ರಸಂಗವೂ ಇವರ ಜೋಡಿಯಲ್ಲಿ ಅಪೂರ್ವ ರೀತಿಯಲ್ಲಿ ಪ್ರದರ್ಶನಗೊಳ್ಳುತ್ತಿತ್ತು. ಅವರ ಕಲ್ಪನೆಯ ಕುಲುಮೆಯಲ್ಲಿ ಪರಿಶುದ್ಧವಾಗಿ ಸಿದ್ಧಗೊಂಡ ಒಂದು ಸುಂದರ ಪಾತ್ರ ಚಿತ್ರ ಋತುಪರ್ಣನದು. ಬಾಹುಕನನ್ನು ಕಂಡು ನಾನು ರಾಜನೆಂಬುದನ್ನು ಮರೆತು ದಿಗ್ಗನೆದ್ದು ಸತ್ಕರಿಸುವಲ್ಲಿ (ಚಕ್ರವರ್ತಿ ನಳನು ಬಾಹುಕನಾಗಿ ಬಂದಾಗಲೂ ಅವನ ಪೂರ್ಣ ವ್ಯಕ್ತಿತ್ವ ಅವ್ಯಕ್ತವಾಗಿ ಪರಿಣಾಮ ಬೀರಿತೆಂಬ ಭಾವ) ಮೃಗ ಬೇಟೆಗೆ ಹೋದಾಗ ಕಾಡಿನಲ್ಲಿ, ದಮಯಂತಿಯ

ಪುನಃ ಸ್ವಯಂವರಕ್ಕೆ ಹೋಗುವಾಗ ನಡೆದ ಘಟನೆಗಳಲ್ಲಿ, ಆಶ್ಚರ್ಯಚಕಿತನಾಗಿ, ಬಾಹುಕನ ನಿಜಾಂಶವನ್ನು ತಿಳಿಯಲು ಯತ್ನಿಸುವ ದೃಶ್ಯಗಳನ್ನು ನಮ್ಮನ್ನು ಮೂಕಪ್ರೇಕ್ಷಕರನ್ನಾಗಿಸುತ್ತಿದ್ದರು. ಕರ್ನಾಟಕ ಯಕ್ಷಗಾನ ನಾಟಕ ಸಭಾದವರಿಂದ ತಿಂಗಳುಗಟ್ಟಲೆ ಪ್ರದರ್ಶನಗೊಂಡ ನಳ– ದಮಯಂತಿ ಪ್ರಸಂಗದ ಯಶಸ್ಸಿಗೆ ರೈಯವರ ಋತುಪರ್ಣನ ಪಾತ್ರವೂ ಒಂದು ಮುಖ್ಯ ಕಾರಣವಾಗಿತ್ತು. ಭಾವಪೂರ್ಣ ಅಭಿನಯದಿಂದ, ನಮ್ಮನ್ನು ಮುಗ್ಧಗೊಳಿಸುತ್ತಿದ್ದ ಅವರ ಚೂಡಾಮಣಿಯ ಹನುಮಂತನನ್ನು ಮರೆಯಲು ಸಾಧ್ಯವಿಲ್ಲ. ಸೀತೆಯನ್ನು ಅಮ್ಮಾ, ಜನನಿ, ತಾಯಿ ಎಂದು ಸಂಬೋಧಿಸುತ್ತಿದ್ದ ಎರಡಕ್ಷರಗಳಲ್ಲಿ ಹೃದಯವೇ ತುಂಬಿ ಬಂದಂತೆ ಭಾಸವಾಗುತ್ತಿತ್ತು. ಶ್ರೀ ರಾಮಚಂದ್ರನು ಪರಿಚಯಕ್ಕಾಗಿ ಹೇಳಿದ ಸಂಕೇತಗಳನ್ನು ಹೇಳಿ "ಇದು ನಿಜವೆ, ಇದು ಸತ್ಯವೆ, ಇದು ಹೌದೆ" ಎಂದು ಕೈಜೋಡಿಸಿ ವಿನಮ್ರನಾಗಿ ಪ್ರಶ್ನಿಸುವ ದೃಶ್ಯ ಮರೆಯುವಂತದ್ದಲ್ಲ. ಸುಧನ್ವ ಕಾಳಗದಲ್ಲಿ ಶ್ರೀಕೃಷ್ಣನ ಪ್ರವೇಶವಾದಾಗ "ಕಂಡು ಪುಳಕೋತ್ಸವದ ಹರುಷದಿ....." ಈ ಪದ್ಯಕ್ಕೆ ಅವರು ತೋರುವ ಭಕ್ತಿಯ ಭಾವಾಭಿವ್ಯಕ್ತತೆ ಅರ್ಥಪೂರ್ಣವಾಗಿತ್ತು. "ಕೃಷ್ಣನು ಅರ್ಜುನನಿಗಾಗಿ ಬಂದುದಲ್ಲ. ಹಸ್ತಿನಾವತಿಯಿಂದ ತನ್ನನ್ನು ಸೋಲಿಸಲು ಬಂದದ್ದು, ಎಂದರೆ ಅವನನ್ನು ಬರಿಸಿದ್ದು ತಾನು" ಎಂದು ವಿವರಿಸುವಲ್ಲಿ ಅರ್ಥ ಮಾರ್ಮಿಕವಾಗಿತ್ತು. ಎಲ್ಲರೂ ಹೇಳುವ ಅಭಿಪ್ರಾಯವನ್ನೇ ಅವರು ಹೇಳುತ್ತಿದ್ದರೂ ಅವರ ಮಾತಿನ ಶೈಲಿ, ಅದನ್ನು ವಿಶಿಷ್ಟಗೊಳಿಸುತ್ತಿತ್ತು. 1978ನೇ ಇಸವಿಯಲ್ಲಿ ನಮ್ಮ ನೇತೃತ್ವದಲ್ಲಿ ಕರ್ನಾಟಕ ಯಕ್ಷಗಾನ ನಾಟಕ ಸಭಾದವರ ಒಂದು ಪ್ರದರ್ಶನ ಫಲಿಮಾರಿನಲ್ಲಿ ಜರಗಿತ್ತು. ಭಾಗವತ ದಾಮೋದರ ಮಂಡೆಚ್ಚರು, ಶ್ರೀಮಾನ್ ರೈಯವರು, ಕೋಳ್ಯೂರು ರಾಮಚಂದ್ರ ರಾಯರು ಇವರೆಲ್ಲರೂ ಅಲ್ಲಿ ಕನ್ನಡ ಪ್ರಸಂಗವನ್ನೇ ಆರಿಸಬೇಕೆಂದು ಪ್ರೋತ್ಸಾಹಿಸಿದರು. ಅವರ ಆಶಯದಂತೆ 'ವಿಜಯ ವಾಹಿನಿ' ಪ್ರಸಂಗವನ್ನು ಆರಿಸಲಾಗಿತ್ತು. ಪ್ರೇಕ್ಷಕರಾಗಿ ಬಂದವರಲ್ಲಿ ಬಹ್ವಂಶ ಕನ್ನಡ ಪ್ರಸಂಗವೆಂದೇ ಬಂದಿದ್ದ ಆಸಕ್ತರ ಒಕ್ಕೂಟವಾಗಿತ್ತು. ಭಾಗವತ ಮಂಡೆಚ್ಚರು ಅದ್ಭುತವಾದ ಲಹರಿಯಲ್ಲಿದ್ದರು. ಕಲಾವಿದರು ದ್ವಿಗುಣ ಉತ್ಸಾದಲ್ಲಿದ್ದರು. ರೈಯವರು ಭೀಷ್ಮನಾಗಿ ರಂಗಸ್ಥಳಕ್ಕೆ ಬಂದಿದ್ದರು. ಎಳೆಹರೆಯದ ಹುರುಪಿನಿಂದಿದ್ದ ಅವರನ್ನು ಗುರುತಿಸಲು ಅಸಾಧ್ಯವಾಗಿತ್ತು. ಅಂದಿನ ವರ್ಣ ವಿನ್ಯಾಸ, ವೇಷಭೂಷಣ, ನಾಟ್ಯ ವೈಭವ, ಅಂಬೆ (ಕೋಳ್ಯೂರು) ಭೀಷ್ಮರ ಚುಟುಕಿನ ಪ್ರಶ್ನೋತ್ತರಗಳು, ಬಹಳ ಕಾಲ ಪರಿಸರದ ಯಕ್ಷಗಾನ ಪ್ರೇಮಿಗಳಿಗೆ ಮನೆಮನೆ ಮಾತಾಗಿತ್ತು.

ಅವರು ಕರ್ನಾಟಕ ಯಕ್ಷಗಾನ ನಾಟಕ ಸಭಾದಲ್ಲಿದ್ದರೂ ಕಟೀಲು ಮೇಳವನ್ನು ಮಾತೃ ಸಂಸ್ಥೆಯೆಂದು ಭಾವಿಸುತ್ತಿದ್ದರು. ಕಟೀಲು ಮೇಳದ ತಿರುಗಾಟದ ಕೊನೆಯ ಕೆಲವು ಆಟಗಳಿಗೆ ಅವರು ಬರುವುದಿತ್ತು. ಅಂತಹ ದಿನಗಳಲ್ಲಿ ಅವರ ಶ್ರೀರಾಮ, ಭರತ, ಭೀಷ್ಮ, ಕರ್ಣ, ಶಿಶುಪಾಲ, ಸುಧನ್ವ, ಶ್ರೀಕೃಷ್ಣ ಇಂತಹ ಪಾತ್ರಗಳನ್ನು ಕಾಣುವ ಅವಕಾಶ ದೊರೆಯುತ್ತಿತ್ತು. ಅವರ ವಯಸ್ಸು ಕಳೆಯುತ್ತಾ ಬಂದಂತೆ ಒಳಗಿನ ಕಲೆ ಹೊರಗಿನಿಂದ ಕಳೆಗೆಡಲಾರಂಭಿಸಿತು. ಆ ಅವಧಿಯಲ್ಲಿ ಕೊನೆಯ ಮೂರು ತಿರುಗಾಟ

ಗಳನ್ನು ಕಟೀಲು ಮೇಳದಲ್ಲಿ ಕಳೆದಿದ್ದರು. ಆಗ ವಿಶೇಷ ಆಯಾಸವಿಲ್ಲದ ಲಘು ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಆಗಲೂ ಆಟಕ್ಕೆ ಬಂದವರಲ್ಲಿ ರೈಯವರ ವೇಷ ನೋಡಲು ಕಾಯುವ ಜನರಿದ್ದರು. ಒಬ್ಬ ಕಲಾವಿದನಿಗೆ ವೈವಿಧ್ಯಮಯವಾದ ನಾಟ್ಯಗಳಲ್ಲಿ ಅನುಭವವಿರಬಹುದು. ಆದರೆ ಎಲ್ಲವನ್ನೂ ಒಂದೇ ದಿನ ಕುಣಿಯುವ ಚಪಲವಿರಬಾರದು. ಪಾತ್ರೋಚಿತವಲ್ಲ, ಸಮಯೋಚಿತವಲ್ಲದ, ಕುಣಿತದಿಂದ ಕಾಲಯಾಪನ ಮಾಡುವವರನ್ನು ಅವರು ಅಲ್ಲಗಳೆಯುತ್ತಿದ್ದರು. ತೀರ ಲಘು ಶಬ್ಧಗಳಿಂದ ಅರ್ಥವಿಸಬಾರದೆಂಬ ನಿಲುವು ಅವರಲ್ಲಿತ್ತು. ಮೇಳ ಬಿಟ್ಟ ಬಳಿಕವೂ ನವರಾತ್ರಿ ವೇಳೆ ಕಟೀಲಿಗೆ ಬಂದಿದ್ದ ರೈಯವರು, ಕಂಸ-ವಧೆ ಪ್ರಸಂಗದಲ್ಲಿ ಶ್ರೀದೇವಿಯ ಸೇವಾರೂಪವಾಗಿ ಅಕ್ರೂರನಾಗಿ ಅಭಿನಯಿಸಿದ್ದರು. ದಶಾವತಾರಿ ರೈಯವರನ್ನು ರಂಗಸ್ಥಳದಲ್ಲಿ ಕಂಡದ್ದು ಅದೇ ಕೊನೆ. ಪೂಜ್ಯ ದಿ. ಬಲಿಪ ನಾರಾಯಣ ಭಾಗವತರ ಹಿರಿತನದಲ್ಲಿ ಯಕ್ಷಗಾನಕ್ಕೆ ನೀಡಲ್ಪಟ್ಟ ಕಾಯಕಲ್ಪವನ್ನು ಸ್ವೀಕರಿಸಿ, ಯಕ್ಷಗಾನದ ಸೇವಾ ದೀಕ್ಷಿತನಾಗಿ, ಅಪಾರ ಕೀರ್ತಿಶಾಲಿಯಾಗಿ, ವಿಧಿವಶರಾಗಿ, ಕಲಾದೇವಿಯ ಸನ್ನಿಧಿಗೆ ಅರ್ಪಿಸಲ್ಪಟ್ಟ ಅನರ್ಘ್ಯ ರತ್ನ ರೈಯವರನ್ನಲ್ಲದೆ, ಮತ್ಯಾರನ್ನು ದಶಾವತಾರಿ ಎನ್ನುವುದು...?

* * *

... ಅಳಿಕೆಯವರು ಓರ್ವ ಪರಿಪೂರ್ಣ ಕಲಾವಿದ. ಅವರ ಅಭಿಮನ್ಯು ಹೇಗೋ ಹಾಗೆಯೇ ಅವರ ಸ್ತ್ರೀವೇಷಗಳು ಅವರ ಕೌರವ, ಋತುಪರ್ಣ-ಈ ಪಾತ್ರಗಳೂ ದಂತಕತೆಗಳಾಗಿವೆ.

... ಅವರ ಕಲಾವ್ಯವಸಾಯದ ಹಿರಿಮೆ ಗರಿಮೆಗಳನ್ನು ಜನಸಾಮಾನ್ಯರೂ, ಪಂಡಿತರೂ ಒಮ್ಮತದಿಂದ ಪ್ರಶಂಸಿಸಿದ್ದರು.

ಅವರನ್ನು ಪ್ರೊ. ತೆಕ್ಕುಂಜೆಯವರ ನೇತೃತ್ವದಲ್ಲಿ ಮಂಗಳೂರು ಕನ್ನಡ ಸಂಘದ ವತಿಯಿಂದ ಸಮ್ಮಾನಿಸುವ ಸುಯೋಗ ನಮ್ಮ ಬಳಗಕ್ಕೆ ಲಭಿಸಿತ್ತು.

**ದಿ. ಅ. ಬಾಲಕೃಷ್ಣ ಶೆಟ್ಟಿ ಪೊಳಲಿ**

ವೇಷಧಾರಿಯಾಗಿ ಪಾತ್ರದಲ್ಲಿ ಅರ್ಥವನ್ನು ತುಂಬಿದವರು... ಅವರು ಬಿಟ್ಟು ಹೋದ ಸ್ಥಾನ ಬರಿದು ಎಂದೇ ನನ್ನ ಭಾವನೆ.

**ಅರುವ ಕೊರಗಪ್ಪ ಶೆಟ್ಟಿ**

... ನನ್ನ ಬದುಕಿಗೆ ದಾರಿ ತೋರಿದ ಮಾವ ಅವರು. ನನ್ನ ಅಪ್ಪ ಅಮ್ಮನಿಗೆ ಮದುವೆ ಸಂಧಾನ ಮಾಡಿ, ಮದುವೆ ಮಾಡಿಸಿದವರು ಅವರೇ. ಶ್ರೀ ಧರ್ಮಸ್ಥಳ ಯಕ್ಷಗಾನ ಕೇಂದ್ರದಲ್ಲಿ ನನ್ನನ್ನು ಸೇರಿಸಿ ನಾಟ್ಯಗುರುಗಳಾದ ಕುರಿಯ ವಿಠಲ ಶಾಸ್ತ್ರಿಗಳ, ಪಡ್ರೆ ಚಂದುರವರ ಶಿಷ್ಯನಾಗಿಸಿದರು. ಹೀಗೆ ನಾನು ಕಲಾವಿದನಾಗಲು ಅವರು ಕಾರಣ... ಅವರೇರಿದ ಎತ್ತರಕ್ಕೆ ಏರಿಲ್ಲ ಎಂಬ ಸಂಕೋಚ ನನಗಿದೆ.

**ಉಬರಡ್ಕ ಉಮೇಶ ಶೆಟ್ಟಿ**



# ತೆಂಕುತಿಟ್ಟಿನ ಯುಗ : ಅಳಿಕೆ

**ಡಾ. ಕೆ.ಎಂ. ರಾಘವ ನಂಬಿಯಾರ್**

ನನಗಿನ್ನೂ ಸುಮಾರು ಹನ್ನೆರಡು-ಹದಿಮೂರರ ಹರೆಯ. ನನ್ನ ಯಕ್ಷಗಾನ ಸಂಘದ ಮದ್ದಳೆಗಾರ ಪಿ. ವಿಟ್ಠಲ ಪ್ರಭು ಅವರೊಂದಿಗೆ ಕಾರ್ಕಳ ಪರಿಸರದ ದೂರ ದೂರದ ಊರಿಗೆ ಹೋಗಿ ಆಟ ನೋಡುವುದಿತ್ತು. ಆ ವೇಳೆಗೆ ವೇಷಗಾರಿಕೆ ಕುರಿತ ವಿಮರ್ಶೆ ನಡೆಯುವುದಿತ್ತು. ನಮ್ಮ ಬಳಗದಲ್ಲಿ ತಿಮ್ಮರಸ ಪುರಾಣಿಕ್, ಗೋವಿಂದ ರಾಯ ಪ್ರಭು, ಜಗನ್ನಾಥ ಭಟ್ ಮೊದಲಾದವರಿದ್ದರು. ಆ ವೇಳೆಗೆ ಇರಬೇಕು, ವಿಟ್ಠಲ ಪ್ರಭು ಹೇಳುತ್ತಿದ್ದರು 'ವೇಷ ನೋಡಬೇಕು, ಅಳಿಕೆ ರಾಮಯ್ಯ ರೈಗಳದು' ಅಂತ.

ಅಳಿಕೆ ಅವರು ಆಗ ಕುಂಡಾವು ಮೇಳದಲ್ಲಿ ಅಥವಾ ಕರ್ನಾಟಕ ಯಕ್ಷಗಾನ ನಾಟಕ ಸಭಾ ಮಂಡಳಿಯಲ್ಲಿ ಇದ್ದಿರಬೇಕು. ಆಗ ಹೆಚ್ಚಾಗಿ ತುಳು ಪ್ರಸಂಗಗಳನ್ನೇ ಆ ಮೇಳದವರು ಆಡುವುದು. ಆದರೆ ಇತರ ವೇಷಧಾರಿಗಳಿಗಿಂತ ಅಳಿಕೆ ರಾಮಯ್ಯ ರೈಗಳ ನಾಟ್ಯ ಮತ್ತು ಪ್ರಾತಾಭಿನಯದ ರೀತಿ ಪ್ರತ್ಯೇಕ ಆಕರ್ಷಣೆ ಹೊಂದಿತ್ತು. ಮೊದಲ ವೇಷದರ್ಶನದಲ್ಲೆ ಅಳಕೆಯವರು ನನ್ನನ್ನು ಗೆದ್ದುಬಿಟ್ಟಿದ್ದರು.

ಅವರ ಮಾತುಗಾರಿಕೆಯಲ್ಲಿ ಹರಿದಾಸ ಕಲಾವಿದರಲ್ಲಿದ್ದ ಸಾಹಿತ್ಯ, ಸಂಪತ್ತು, ಸರಳವಾದರೂ ಶಕ್ತಿಯುತ ಭಾಷೆ, ಸಾಂಪ್ರದಾಯಿಕ ಪಾತ್ರಾಭಿನಯದ ಸೊಗಸು, ಅಚ್ಚುಕಟ್ಟಾದ ತೆಂಕುತಿಟ್ಟಿನ ಪದ್ಧತಿಯ ನಾಟ್ಯ, ಬಿಡ್ತಿಗೆ ಮುಕ್ತಾಯಗಳ ಕುಣಿತ ಸಹಿತವಾದ ಆಲಸ್ಯವಿಲ್ಲದ ಕಸುಬುಗಾರಿಕೆ ಕಾಣಬಹುದಿತ್ತು. ದುರ್ದೈವಕ್ಕೆ ಸುಮಾರು ಹತ್ತು ವರ್ಷಗಳವರೆಗಾದರೂ ತಮಿಳು ಸಿನೆಮಾದ ಕಥಾ ಪಾತ್ರಗಳ (ಉದಾ: ನಾಡೋಡಿ ಮನ್ನನ್, ಮನ್ನಾದಿಮನ್ನನ್, ವೀರಪಾಂಡ್ಯ ಕಟ್ಟ ಬೊಮ್ಮನ್ ಇಂಥ ಸಿನೆಮಾದಲ್ಲಿ ಕಾಣುತ್ತಿದ್ದ) ವೇಷಗಳ ದಾರಿಯಲ್ಲಿ ಅಳಿಕೆ ರಾಮಯ್ಯ ರೈ ಅವರ ವೇಷಗಳಿರುತ್ತಿದ್ದವು.

ಅವರು ತೆಂಕುತಿಟ್ಟಿನ ಪ್ರಾತಿನಿಧಿಕ ವೇಷಧಾರಿ ಎಂದು ಗೊತ್ತಾದುದೇ ಎಪ್ಪತ್ತರ ದಶಕದಲ್ಲಿ ಪಾರಂಪರಿಕ ವೇಷಭೂಷಣಗಳ ಪುನಾರಚನೆ ಮಾಡಿದಾಗ. ಅಳಿಕೆಯವರ ಸುಧನ್ವ, ಯಯಾತಿ, ರಾಜಸೂಯ ಮತ್ತು ವಸ್ತ್ರಾಪಹಾರದ ದುರ್ಯೋಧನ, ನಭೂತೋ ನ ಭವಿಷ್ಯತಿ ಎಂಬಂಥ 'ನೆಗಳ್ತೆವೆತ್ತ' (ಇದು ಅವರದೆ ಬಳಕೆಯ ಮಾತು) ಋತುಪರ್ಣ, ಕರ್ಣ ಇಂಥ ಪಾತ್ರವನ್ನು ಅವರಿಗೆ ಸಾಟಿಯೆನ್ನುವಂತೆ ಮಾಡಿದುದನ್ನು ಇವತ್ತಿನವರೆಗೆ ನಾನು ಕಂಡಿಲ್ಲ. ಅವರ ದುಷ್ಯಂತ ಹಾಗೂ ದಮಯಂತಿ, ಚಂದ್ರಮತಿ ಇಂಥ ಸ್ತ್ರೀಪಾತ್ರಗಳು ಇವೂ ಅತ್ಯಂತ ಉಜ್ವಲ ರಂಗಾಭಿನಯಗಳಾಗಿದ್ದವೆಂದು ಡಾ. ಕೋಳ್ಯೂರು ರಾಮಚಂದ್ರ ರಾಯರಿಂದ ಕೇಳಿದ್ದೇನೆ.

ಮೇಲೆ ಹೇಳಿದ ಪಾತ್ರಗಳಲ್ಲಿ ರೈಗಳ ಹೆಚ್ಚುಗಾರಿಕೆ ಎಂದರೆ ಆ ಪಾತ್ರಗಳ ವ್ಯಕ್ತಿತ್ವಗಳಲ್ಲಿ ಇದ್ದ 'ಅರಿಸ್ಟಾಕ್ರಾಟಿಕ್' ಮನೋಭಾವ. ಮಾತುಗಾರಿಕೆಯಲ್ಲಿ ಪಾತ್ರದ ವ್ಯಕ್ತಿತ್ವಕ್ಕೆ ತಕ್ಕುದಾದ ಎತ್ತರದ ಸ್ತರ. ಹಗುರವಾದ ಮಾತು ಎಲ್ಲೂ ತೂರಿಕೊಳ್ಳಲಾರದು. ಘನತೆ, ಗಾಂಭೀರ್ಯಗಳ ಪ್ರತಿಮೂರ್ತಿಯಾಗಿದ್ದವು ಆ ಪಾತ್ರಗಳು. ಅವರೆದುರು ವೇಷ ಮಾಡಿ ಹಗುರ ಮಾತನ್ನಾಡಲು ಧೈರ್ಯ ಪಟ್ಟವರೇ ಇಲ್ಲ ಎನ್ನಬಹುದು.

ಅವರ ಋತುಪರ್ಣನ ಪಾತ್ರಕ್ಕೆ ಯಾಕೆ ಅಷ್ಟೊಂದು ಮಹತ್ವ? ಎಷ್ಟೋ ವೇಳೆ 'ದಮಯಂತಿ ಪುನಃ ಸ್ವಯಂವರ' ಎಂಬ ಭಾಗವನ್ನೆ ಪ್ರದರ್ಶಿಸುತ್ತಿದ್ದರು. ಯಾಕೆಂದರೆ ಅಳಿಕೆಯ ಋಣಪರ್ಣನಿಗಾಗಿ. ಏನಿದೆ ಆ ಋತುಪರ್ಣನಲ್ಲಿ? ಬಾಹುಕನ ಭೇಟಿ. ಒಂದು ಬೇಟೆ, ಬಾಹುಕನಿಂದ ಆಹಾರ ಸ್ವೀಕಾರ, ಕುಂಡಿನಪುರದ ಓಲೆಗೆ ವೀರಾವೇಶದ ಪ್ರತಿಕ್ರಿಯೆ, ಬಾಹುಕನನ್ನು ನಳನೆಂದು ಗುರುತಿಸುವುದು – ಇಷ್ಟಾದರೆ ಆ ಪಾತ್ರಾಭಿನಯ ಮುಗಿದ ಹಾಗೆ. ಆದರೆ ಅಳಿಕೆ ಅವರ ಪಾತ್ರಾಭಿನಯದಲ್ಲಿ ಆ ಕಥಾಭಾಗ ವೀರಕರುಣ ರಸಗಳೆರಡನ್ನೂ ಹರಿಸುತ್ತಿತ್ತು.

ಋತುಪರ್ಣ ಬಾಹುಕನ ಬಾಯಿ ಬಿಡಿಸುವಲ್ಲಿ 'ಬಾಳ ದೈನ್ಯದಿಂದ ನಾನು । ಕೇಳಿದರು ಒಳವ ನೀನು । ಪೇಳದಿರ್ದ ಮೇಲೆ ನಿನ್ನ । ಕಾಲಿನೆಡೆಯೊಳು ॥ 1 ॥ ನಾಲಿಗೆಯ ನಿರಿದುಕೊಂಡು । ಬೀಳುಗೊಡುವೆ ಪ್ರಾಣವೆಂದು । ಭೂಲಲಾಮ ನಿರ್ಧರಿಸಿ । ಏಳಲಾಕ್ಷಣ ॥ 2 ॥' ಈ ಪದಗಳನ್ನು ಹಾಡಿದಾಗ ಅಳಿಕೆಯವರು ಬಾಯಿಂದ ನಾಲಿಗೆಯನ್ನು ಮಾರುದ್ದಕ್ಕೆ ಎಳೆದ ಹಾಗೆ ಕೈ ಮಾಡಿ ಅದನ್ನು ಕತ್ತರಿಸುವುದಾಗಿ ಮಾಡಿ ತೋರಿಸುವಾಗ ಯಾರಿಗೂ ಕರುಳು ಹಿಸುಕಿದಂತಾಗಬೇಕು. ಈ ಸನ್ನಿವೇಶವನ್ನೇ ಕುರಿತು ನನ್ನಲ್ಲಿ ಗುರು ವೀರಭದ್ರ ನಾಯಕರು ಹೇಳಿದುದು, 'ರೈಗಳ ಆ ಅಭಿನಯದ ವೇಳೆ ಹೊಟ್ಟೆಗೆ ಚೂರಿ ಹಾಕಿದ ಹಾಗೆ ಆಗುತ್ತದೆ' ಅಂತ.

ಚಕ್ರವರ್ತಿಯಾದ ನಳನ ವ್ಯಕ್ತಿತ್ವದ ಔನ್ನತ್ಯ, ಋತುಪರ್ಣನ ಸ್ವಾಮಿನಿಷ್ಠೆ, ಅದಕ್ಕಾಗಿ ಆತ್ಮಾರ್ಪಣೆ ಮಾಡುವವರೆಗಿನ ಸನ್ನದ್ಧತೆ ಈ ತತ್ವಪ್ರತಿಪಾದನೆಯನ್ನು ಅಳಿಕೆ ಅವರಂತೆ ಮಾಡಿದವರಿಲ್ಲ, ಕಳೆಗಟ್ಟಿಸಿದವರಿಲ್ಲ. ಇವರ ಪಾತ್ರಾಭಿನಯವನ್ನು ನಾನು ಅತ್ಯಂತ ಆರಾಧಿಸಿದ ಇನ್ನೊಬ್ಬ ಪರಿಪೂರ್ಣ ಕಲಾವಿದ, ಕೆರೆಮನೆ ಮಹಾಬಲ ಹೆಗಡೆ ಅವರ

ಋತುಪರ್ಣನೊಂದಿಗೆ ಹೋಲಿಸಿದ್ದೇನೆ. ಹತ್ತು ಅಂಕಗಳನ್ನಾದರೂ ಅಳಿಕೆಯವರು ಹೆಚ್ಚು ಗಳಿಸುತ್ತಾರೆ.

ತುಳು ಪ್ರಸಂಗಗಳು ಯಕ್ಷಗಾನವಲ್ಲ ಎಂಬ ತೀವ್ರ ವಾದ ಮಂಡಿಸುವವರಿಗೂ, ಅವುಗಳಲ್ಲಿನ ಅಳಿಕೆ ಅವರ ಪೆರುಮಳ ಬಲ್ಲಾಳನನ್ನಾಗಲಿ, 'ತುಳುನಾಡ ಸಿರಿ'ಯ ಕಾಂತು ಪೂಂಜನನ್ನಾಗಲಿ ಒಂದು ರಂಗಭೂಮಿಯಾಗಿ ಕಡೆಗಣಿಸಲು ಸಾಧ್ಯವಾಗದು. 'ಕಚ ದೇವಯಾನಿ' ಪ್ರಸಂಗದಲ್ಲಿ ಅವರ 'ಯಯಾತಿ' ಒಂದು ಸೊಗಸಾದ ಪಾತ್ರವಾಗಿತ್ತು. ಈಗಿನ ಕೆಳವರು ಚಿತ್ರಿಸುವಂತೆ 'ಯಯಾತಿ'ಯನ್ನು ಲಂಪಟನಾಗಿ ಅವರು ಕಂಡಿರಲಿಲ್ಲ. ಪ್ರತಿ ಸನ್ನಿವೇಶದಲ್ಲೂ ಸಂದಿಗ್ಧಕ್ಕೆ ಸಿಲುಕಿದ ಸಾತ್ವಿಕ ಪುರುಷನೊಬ್ಬನ ತುಮುಲಗಳನ್ನು ಅವರು ಮನುಮುಟ್ಟುವಂತೆ ಅಭಿನಯಿಸುತ್ತಿದ್ದರು.

ನಾನು ಮೊದಲು ಅವರನ್ನು ನೋಡುವಾಗಲೆ ಅವರಿಗೆ ಐವತ್ತರ ಹರೆಯ ತಲಪಿರಬೇಕು. ಆ ಹರೆಯದಲ್ಲೂ ಅವರ ನಾಟ್ಯದ ಲಾಲಿತ್ಯ ನಿಬ್ಬೆರಗಾಗಿಸುವಂತಿತ್ತು. ತೆಂಕುತಿಟ್ಟಿನ ನ್ಯಾಯವಾದ ನಾಟ್ಯ ಅವರದಾಗಿತ್ತು. ಈಗಿನ ಕೆಲ ಗುರುಗಳಂತೆ ಭರತನಾಟ್ಯ, ಬಡಗು, ಕೂಚುಪುಡಿ ಇತ್ಯಾದಿಗಳ ಕಲಸು ಮೇಲೋಗರ ಮಾಡಿ ತಾವು ಎಲ್ಲೆಲ್ಲೂ ಸಲ್ಲುವ ಕುಳಗಳೆಂದು ತೋರುವ ಚಪಲ ಅವರಿಗೆ ಇರಲಿಲ್ಲ. ಅವರಲ್ಲಿ ಬೆಟ್ಟು ಮಾಡಬಹುದಾಗಿದ್ದ ಕೊರತೆ ಒಂದೇ. ಅವರ 'ಕೋಲು ಕಿರೀಟ'ದ ವೇಷ ಪುಂಡುವೇಷದ ಲಯದಲ್ಲಿ ಕುಣಿಯುತ್ತಿತ್ತು. ಈ ಲಯದ ವ್ಯತ್ಯಾಸ ಅವರೆದುರು ಅಂಥದೇ ಕಿರೀಟದಲ್ಲಿ ಮೂಡುಬಿದಿರೆ ಮಾಧವ ಶೆಟ್ಟರು ಕುಣಿಯುವಾಗ ಸ್ಪಷ್ಟವಾಗುತ್ತಿತ್ತು. ಆದರೆ ಅಳಿಕೆ ಯವರನ್ನು ಕುಣಿಸುವಾಗ ಭಾಗವತರೂ, ಚೆಂಡೆ–ಮದ್ದಳೆ ನುಡಿಸುವ ಮದ್ದಳೆಗಾರರೂ ವಹಿಸುವ ಎಚ್ಚರಿಕೆಯಿಂದಾಗಿ ಆ ಬಗೆ ಲೋಪ ತೋರಗೊಡದೆ ಸಾಗಿ ಬಿಡುತ್ತಿತ್ತು.

ಎಂಬತ್ತರ ದಶಕದ ಆದಿಭಾಗದಲ್ಲಿ ಎಂಜಿಎಂ ಕಾಲೇಜಿನಲ್ಲಿ ಪ್ರೊ. ಕು.ಶಿ. ಹರಿದಾಸ ಭಟ್ಟರು ದಿಲ್ಲಿಯ ಎನ್.ಎಸ್.ಡಿ ವಿದ್ಯಾರ್ಥಿಗಳಿಗಾಗಿ ಡಾ. ಕೆ. ಶಿವರಾಮ ಕಾರಂತರನ್ನು ಮುಂದಿಟ್ಟುಕೊಂಡು ಏರ್ಪಡಿಸಿದ ಯಕ್ಷಗಾನ ಕಮ್ಮಟ, ಪ್ರದರ್ಶನಗಳ ವೇಳೆ ನನಗೂ ರೈಗಳ ಜತೆ ಸೇರುವ ಸಂದರ್ಭ ಬಂತು.

ಪ್ರಾತ್ಯಕ್ಷಿಕೆ ನೀಡಲೂ, ರಾತ್ರಿ ಪ್ರದರ್ಶನ ನೀಡಲೂ ಧರ್ಮಸ್ಥಳ ಮೇಳವನ್ನು ಗೊತ್ತುಪಡಿಸಲಾಗಿತ್ತು. ಬೆಳಗ್ಗೆ 10 ಗಂಟೆಗೆ ತೆಂಕುತಿಟ್ಟಿನ ನೃತ್ಯ ಪ್ರಾತ್ಯಕ್ಷಿಕೆ. ಅದರಲ್ಲಿ ಧರ್ಮಸ್ಥಳ ಮೇಳದ ಜತೆ ಸೇರಿಕೊಳ್ಳಲು ಅಳಿಕೆ ರಾಮಯ್ಯ ರೈ ಅವರನ್ನೂ ಕರೆಸಲಾಗಿತ್ತು. ಅಳಿಕೆಯವರು ಬಂದರು. ಮೇಳ ತಲಪಲು ತುಂಬ ತಡವಾಯಿತು.

ಸ್ಥಳದಲ್ಲಿ ನನ್ನನ್ನು ಭಾಗವತಿಕೆ ಮಾಡಲೂ, ಡಾ. ಎಂ. ಪ್ರಭಾಕರ ಜೋಶಿಯವರನ್ನು ಮದ್ದಳೆ ಬಾರಿಸಲೂ ಕೇಳಲಾಯಿತು. ಅಳಿಕೆಯವರು ಪದಕ್ಕೆ ನಾಟ್ಯಮಾಡಿದರು. ಮೊದಲ ಪದವನ್ನು ವಿಲಂಬ ಲಯದಲ್ಲಿ ನಡೆಸಿದಾಗ ರೈಗಳಿಗೆ ಆದ ತೊಡಕು ನನ್ನ ಗಮನಕ್ಕೆ ಬಂತು. ಮುಂದಿನ ಪದ್ಯದ ಲಯವನ್ನು ಒಂದಿಷ್ಟು ಚುರುಕುಗೊಳಿಸಿದೆ. ರೈಗಳು ಮರಳಿ ನೀರನ್ನು ಸೇರಿದ ಮೀನಿನಂತೆ ಮಿಂಚುತ್ತ ಲಾಸ್ಯವಾಡಿದರು.

ಕರ್ನಾಟಕ ಮೇಳ ಉಡುಪಿ ಕಡೆಗೆ ಬಂದಾಗ ಅಳಿಕೆಯವರು, ಬೋಳಾರ ನಾರಾಯಣ ಶೆಟ್ಟರು, ಮಿಜಾರು ಅಣ್ಣಪ್ಪ ಹಾಸ್ಯಗಾರರು, ಕೋಳ್ಯೂರು ರಾಮಚಂದ್ರ ರಾಯರು ಇವರೆಲ್ಲ ಸಿಟಿಬಸ್‌ಸ್ಟ್ಯಾಂಡ್ ಬಳಿಯ ಎಂ.ಎಸ್. ಕೃಷ್ಣನ್ ಅವರ ಜವುಳಿ ಮಳಿಗೆಗೆ ಭೇಟಿ ನೀಡದಿರುತ್ತಿರಲಿಲ್ಲ. ಅವರೆಲ್ಲ ನನಗೆ ನಿಕಟಪರಿಚಯಗೊಂಡದ್ದು ಅಲ್ಲೇ.

ನಾನು ಬರೆದ ಮೊದಲ ಯಕ್ಷಗಾನ ಪ್ರಸಂಗ 'ಪರೀಕ್ಷಿತ' ಮೊದಲ ಪ್ರದರ್ಶನ ಕಂಡದ್ದು 1975ರ ಮಳೆಗಾಲದಲ್ಲಿ ಮಂಗಳೂರು ಟೌನ್ ಹಾಲಿನಲ್ಲಿ. ವ್ಯವಸ್ಥಾಪಕ ಕರ್ನೂರು ಕೊರಗಪ್ಪ ರೈ ಅವರು ಆ ಕಾಲದ ಹಿರಿಯ ವೇಷಧಾರಿಗಳನ್ನೆಲ್ಲ ಕರೆದಿದ್ದರು. ಶೇಣಿ ಗೋಪಾಲಕೃಷ್ಣ ಭಟ್ಟರು ಬಂದಿರಲಿಲ್ಲ. ಅವರ ಸ್ಥಾನದಲ್ಲಿ ಅಳಿಕೆ ರಾಮಯ್ಯ ರೈ ಅವರು 'ಪರೀಕ್ಷಿತ' ಪಾತ್ರವನ್ನು ಗಳಿಸಿದರು. ಆ ಪಾತ್ರಾಭಿನಯ ಆ ಪ್ರಸಂಗಕ್ಕೆ ಅದ್ಭುತ ಆಕಾರವನ್ನು ನೀಡಿತಲ್ಲದೆ, ಆ ಪಾತ್ರವನ್ನು ಶೇಣಿಯವರಿದ್ದರೂ ಅಳಿಕೆಯವರೇ ಮಾಡಬೇಕೆಂಬ ಹಾಗೆ ಮಾಡಿದರು.

ಅವರೊಮ್ಮೆ ಕಲಾಪೋಷಕ ದಿ. ಎಂ.ಎಸ್. ಕೃಷ್ಣನ್ ಅವರ ಮಳಿಗೆಯಲ್ಲಿ ಕುಳಿತಿದ್ದಾಗ ನಾನು ಹೋಗಿದ್ದೆ. ಮಾತುಕತೆ ನಡುವೆ ನನಗೊಂದು ಪ್ರೀತಿಯ ಕಿವಿಮಾತು ಹೇಳಿದರು. 'ಇಂದೇ, ಪುರಾಣೊಲೆಡ್ ಕತೆ ಇಪ್ಪುನು ಈತ್ (ತೋರು ಬೆರಳಿನ ತುದಿಯ ಗೆರೆಗೆ ಹೆಬ್ಬೆರಳು ತಾಗಿಸಿ) ಐಕ್ಕ್ ಕೈ ಕಾರ್ ಕೂಡಿಸಾದ್ ಪ್ರಸಂಗ ಮಲ್ಪೊಡು. ಇರೆಗ್ ಎಡ್ಡೆನೆ ಪ್ರಸಂಗ ತಯಾರ್ ಮಲ್ಪೆರೆ ಆಪುಂಡು' (ಇಗೊಳ್ಳಿ, ಪುರಾಣಗಳಲ್ಲಿ ಕತೆ ಇರುವುದು ಇಷ್ಟು (ಕಡಿಮೆ ಎಂದರ್ಥ) ಅದಕ್ಕೆ ಕೈ ಕಾಲು ಸೇರಿಸಿ ಪ್ರಸಂಗ ಮಾಡಬೇಕು. ನಿಮಗೆ ಒಳ್ಳೆಯ ಪ್ರಸಂಗ ರಚಿಸಲು ಬರುತ್ತದೆ) ಎಂದರು. ಆ ಪ್ರಶಂಸಾವಾದ ಯಾವ ಪದವಿ ಪ್ರಶಸ್ತಿಗೆ ಕಡಿಮೆ?

ತುಳು ಪ್ರಸಂಗಗಳಿಂದ ಅವರಿಗೂ, ಮೇಳಕ್ಕೂ ತುಂಬ ಪ್ರಸಿದ್ಧಿ ಬಂದಿರುವುದಾದರೂ ಅವರ ಅಂತರ್ಯ ಪೌರಾಣಿಕ ಪ್ರಸಂಗಗಳನ್ನೇ ನೆನೆಯುತ್ತಿತ್ತು. ಅವರ ತುಳು ಪಾತ್ರಾಭಿನಯ ಒಂದೊಂದು ಪೌರಾಣಿಕ ಪಾತ್ರವನ್ನು ಅಭ್ಯಸಿಸಿದ ಸಂಸ್ಕಾರದಿಂದ ರೂಪುಗೊಳ್ಳುತ್ತಿತ್ತು. ಕೊನೆಯ ಕೆಲವು ವರ್ಷಗಳನ್ನು ಕಟೀಲು ಮೇಳದಲ್ಲಿ ಕಳೆದು ಧನ್ಯತೆ ಅನುಭವಿಸಿದರು. 'ರಾಜಸೂಯ ಯಾಗ'ದ ಕೌರವ, 'ದ್ರೌಪದೀ ವಸ್ತ್ರಾಪಹಾರ'ದ ಕೌರವ ಈ ಪಾತ್ರಗಳನ್ನು ಅಳಿಕೆ ಅವರಂತೆ ಜೀವಂತಗೊಳಿಸಿದವರು ಇನ್ನೊಬ್ಬರಿಲ್ಲ.

ಅಳಿಕೆ ರಾಮಯ್ಯ ರೈ, ಕದ್ರಿ ವಿಷ್ಣು, ಮೂಡುಬಿದಿರೆ ಕಿಟ್ಟು, ಮೂಡುಬಿದಿರೆ ಮಾಧವ ಶೆಟ್ಟಿ, ಪಡ್ರೆ ಚಂದು ಇವರೆಲ್ಲ ನಾಟ್ಯದಲ್ಲಿ ತೆಂಕುತಿಟ್ಟಿನ ಒಂದು ವಿಶಿಷ್ಟ ಪಾರಂಪರೀಯ ಶಿಸ್ತಿಗೆ ಒಳಪಟ್ಟವರು. ಈಗ ಇರುವವರಲ್ಲಿ ಅರುವ ಕೊರಗಪ್ಪ ಶೆಟ್ಟಿ ಅವರನ್ನು ಈ ಗುಂಪಿನಲ್ಲಿ ಗುರುತಿಸಬರುತ್ತದೆ. ಈ ನಾಟ್ಯದ ಶೈಲಿ ಬಗೆಗೆ ಅನಾದರ ಬೆಳೆಸಿಕೊಂಡ ನಮ್ಮ ಕಲಾವಿದ, ರಸಿಕರ ಬುದ್ಧಿಮತ್ತೆಗೆ ಅಚ್ಚರಿಯೆನಿಸುತ್ತದೆ.

(ಅಳಿಕೆ ರಾಮಯ್ಯ ರೈ ಕುರಿತ ಹೆಚ್ಚಿನ ಮಾಹಿತಿಗೆ ಮಣಿಪಾಲದ 'ಸ್ವರ್ಣಾ ಯಕ್ಷಗಾನ ಮಂಡಳಿ' ಪ್ರಕಟಿಸಿದ 'ಯಕ್ಷತಿಲಕ' ನೋಡಬಹುದು.)



# ಕಲಾತ್ಮಕತೆಯ ಅಚ್ಚು ಅಳಿಕೆ

ಡಾ. ಎಂ. ಪ್ರಭಾಕರ ಜೋಶಿ

ಒಂದು ಪಾರಂಪರಿಕ ಕಲಾಸ್ವರೂಪವನ್ನು, ಅದರ ನಿಜವನ್ನು ಅರಿತು ಅದರಲ್ಲಿ ನುರಿತು, ಅದನ್ನು ಸೃಷ್ಟಿಶೀಲವಾಗಿ ಬಳಸಿ, ಅನನ್ಯ, ಅರ್ಹ ಕೀರ್ತಿಗೆ ಪಾತ್ರರಾಗುವುದು ಹೇಗೆಂಬಲ್ಲಿ ಓರ್ವ ಮಾದರಿ ಕಲಾವಿದರು – ಅಳಿಕೆ ರಾಮಯ್ಯ ರೈಗಳು. ತೆಂಕುತಿಟ್ಟು ಯಕ್ಷಗಾನದ ಅಗ್ರಮಾನ್ಯ, ಪ್ರಾತಿನಿಧಿಕ ಕಲಾವಿದನೆಂಬ ಅವರ ಹೆಗ್ಗಳಿಕೆ ಅದೆಷ್ಟು ಸತ್ಯವೆಂಬುದು ಅವರ ವೇಷಗಳನ್ನು ಕಂಡವರಿಗೆ ಅನುಭವಕ್ಕೆ ಬಂದ ವಿಷಯ. ಪಾರಂಪರಿಕ ಪ್ರಾವೀಣ್ಯ ಮತ್ತು ಅದರೊಳಗಿನ ಸೃಜನಶೀಲತೆಗಳ ಪಾಕವಾಗಿ ರೈಗಳ ಕಲಾಸಿದ್ಧಿ ಬಹಳ ಎತ್ತರದ್ದು.

1927–1985ರ ಅವಧಿಯಲ್ಲಿ ಆರು ದಶಕ ಕಾಲ ರಂಗದಲ್ಲಿದ್ದ ರೈಗಳು – ಅಕ್ಷರಶಃ 'ರಂಗವನ್ನಾಳಿ ಮೆರೆದ' ಕಲಾಕಾರ. ಮವ್ವಾರು ಕಿಟ್ಟಣ್ಣ ಭಾಗವತ, ಮಾಂಬಾಡಿ ಭಾಗವತರು, ತಂದೆ ಮೋನಪ್ಪ ರೈ, ವೇಷಧಾರಿಗಳಾದ ಕುಂಬಳೆ ಗುಂಡ, ಕುಂಞಣ್ಣ ಅಡ್ಯಂತಾಯ, ಐತಪ್ಪ ಶೆಟ್ಟಿ ಇಂತಹ ಪರಿಣತರಿಂದ ಕಲಿತು, ತನ್ನ ಕಾಲದ ಶ್ರೇಷ್ಠರೊಂದಿಗೆ ಕಲೆತು ಬೆಳೆದು ಯಕ್ಷಗಾನ ಮಾಧ್ಯಮದ ಸಾಧ್ಯತೆಯ ಒಂದು ಎತ್ತರವನ್ನು ಕಾಣಿಸಿದವರು ರೈಗಳು. ಅವರ ಪಾತ್ರಗಳನ್ನು ಕಂಡುದು ನನ್ನಂತಹವರ ಒಂದು ಕಲಾಭಾಗ್ಯವೆಂದು ಯಾವುದೇ ಅತಿಶಯೋಕ್ತಿ ಇಲ್ಲದೆ ಹೇಳುತ್ತೇನೆ.

ಹಳೆಯ ಮೇಳಗಳ ಕ್ರಮದಂತೆ ಬಾಲಗೋಪಾಲ ವೇಷದಿಂದ ತೊಡಗಿ, ಪುಂಡು (ತರುಣ) ವೇಷ, ಸ್ತ್ರೀವೇಷ, ಪೀಠಿಕೆ ವೇಷ (ನಾಯಕ) ಇದಿರುವೇಷ (ಪ್ರತಿನಾಯಕ) ಗಳಿಗೆ ಸಾಗಿ ಪಕ್ವ ಸಮೃದ್ಧ ಕಲಾಯಾನ ನಡೆಸಿದವರವರು. ಆ ಆಕಾಲದಲ್ಲಿ, ಆ ಆ ವರ್ಗದಲ್ಲಿ ಅವರು ಅಗ್ರಗಣ್ಯರೆ ಆಗಿದ್ದರು.

1954ರ ಸುಮಾರಿಗೆ ನನ್ನ ಎಲಿಮೆಂಟರಿ ಶಾಲಾ ದಿನಗಳಲ್ಲಿ, ನಮ್ಮೂರು (ಕಾರ್ಕಳದ ಮಾಳ) ಹಿರಿಯರಾದ ಅನಂತಯ್ಯ ಹೆಬ್ಬಾರರ ಜತೆ ಬಜೆಗೋಳಿಯಲ್ಲಿ ಕಂಡ ಅವರ 'ಅವಸಾನದ ಕರ್ಣ' ನಿಂದ ತೊಡಗಿ, ಕಟೀಲು ಮೇಳದ ಅವರ ಕೊನೆಯ ತಿರುಗಾಟದ ತನಕ (1985) ನಾನು ಕಂಡ ವಿವಿಧ ಪಾತ್ರಗಳ ನೆನಪಿಗೆ, ಅವಸಾನವಿಲ್ಲ. ಅವರ

ಆಪ್ತರಲ್ಲಿ ಒಬ್ಬನಾಗಿ, ತಾಳಮದ್ದಳೆಯಲ್ಲೂ ಸಹಕಲಾವಿದನಾದುದು ನನ್ನ ಹೆಮ್ಮೆ.

ಪರಂಪರೆಯ ವಿಧಾನಗಳ ಬಗೆಗೆ, ಮತ್ತು ಪಾತ್ರ ಸ್ವಭಾವ, ನಾಟ್ಯಧರ್ಮಿ, ಸನ್ನಿವೇಶ ಚಿತ್ರಣಗಳ ಕುರಿತು ಖಚಿತವಾದ ಜ್ಞಾನವೂ, ನಿಲುಮೆಯೂ ಅವರಿಗಿತ್ತು. ನೃತ್ಯದ ಚಲನೆಗಳ, ಆಕಾರದ ಸೊಗಸು, ಗಾಂಭೀರ್ಯಗಳು, ವೇಷದ ಅಚ್ಚುಕಟ್ಟು, ಇದಿರಾಳಿಗೆ ಪ್ರತಿಕ್ರಿಯೆ ನೀಡುವ ಕ್ರಮ, ಪದ್ಯ – ಅರ್ಥ ಸಂವಿಧಾನಗಳು ಉತ್ಕೃಷ್ಟ. ಸಂಭಾಷಣಾ ವಿಧಾನ ಅಷ್ಟು ಅಂದ. ಭಾಷೆ ಪ್ರೌಢ, ಚೊಕ್ಕ, ಕಾವ್ಯಗಳ ಹಳೆ–ಹೊಸ ಸಾಹಿತ್ಯಗಳ ಓದಿನಿಂದ ಪುಟಗೊಂಡ ಬಾಯಿಪಾಠವಿಲ್ಲದೆ, ಸ್ವಂತಿಕೆ ಉಳ್ಳದ್ದು. ಆಟದ ರಂಗಸ್ಥಳದ ಅರ್ಥಗಾರಿಕೆಗೆ ಹೊಸರೂಪ ನೀಡಿದವರಲ್ಲಿ ಅವರೂ ಒಬ್ಬರು.

ಪ್ರದರ್ಶನದ ಉದ್ದಕ್ಕೂ – ನಿಗಿನಿಗಿ ಜೀವಂತಿಕೆಯುಳ್ಳ ರಂಗ ವ್ಯವಹಾರ, ಪರಿಣಾಮಕಾರಿ ಉಪಸ್ಥಿತಿ ಅವರದು. ವಿವಿಧ ಭಾವಗಳಲ್ಲಿ ಏಕಪ್ರಕಾರದ ಹಿಡಿತವಿತ್ತು. ಯಕ್ಷಗಾನ ಮಾಧ್ಯಮದಲ್ಲಿ ಮೆರೆಸಲು ಕಷ್ಟವೆನಿಸುವ – ದುಷ್ಯಂತನನ್ನು, ಪಾರಂಪರಿಕ ವೇಷದೊಂದಿಗೆ ಅವರು ನಿರ್ವಹಿಸಿದ ರೀತಿಯಿಂದ ನಾನು ಬೆರಗಾಗಿದ್ದೇನೆ. ಕರ್ಣ, ಋತುಪರ್ಣ, ಕೌರವ, ಭರತರಂತೆಯೆ ಲವಕುಶ ಪ್ರಸಂಗದ ಲಕ್ಷ್ಮಣ, ಕೋಟಿಚೆನ್ನಯದ ಬಲ್ಲಾಳ ಅಷ್ಟೇ ಯಶಸ್ವಿ. ಕರ್ನಾಟಕ ಮೇಳದಲ್ಲಿ ಅವರೊಂದಿಗಿದ್ದ ಉತ್ತಮ ಕಲಾವಿದರ ದೊಡ್ಡತಂಡದಲ್ಲಿ (ಮಂಡಚ್ಚ ಭಾಗವತರು, ನಾರಂಪಾಡಿ ಸುಬ್ಬಯ್ಯ ಶೆಟ್ಟಿ, ಬೋಳಾರ ನಾರಾಯಣ ಶೆಟ್ಟಿ, ರಾಮದಾಸ ಸಾಮಗ, ಕೋಳ್ಯೂರು ರಾಮಚಂದ್ರ ರಾವ್, ಅರುವ ಕೊರಗಪ್ಪ ಶೆಟ್ಟಿ, ಅಣ್ಣಪ್ಪ ಹಾಸ್ಯಗಾರ – ಹೀಗೆ ಹಲವರು) ಅವರು ತಕ್ಕವರಾಗಿ, ಪೂರಕವಾಗಿ, ಕೀರ್ತಿಕಾರಣರೂ, ಭಾಜನರೂ ಆದರು.

ರಾಮದಾಸ ಸಾಮಗರ ಭೀಷ್ಮನಿಗೆ ಕೌರವನಾಗಿ ಅವರು ನಡೆಸುತ್ತಿದ್ದ ಸಂಭಾಷಣೆ, 'ಮಾಯಾ ಸರೋವರ' ದೃಶ್ಯದಲ್ಲಿ ಕೋಳ್ಯೂರರ ದ್ರೌಪದಿ, ಅಣ್ಣಪ್ಪ ಹಾಸ್ಯಗಾರರ ಸಖಿಯರೊಂದಿಗೆ ಅವರು ನಿರ್ಮಿಸುತ್ತಿದ್ದ ಒಳಗುದಿ–ಸೇಡು–ನಂಜು–ಹಾಸ್ಯಗಳ ಸಂಕೀರ್ಣ ಅಭಿನಯ ಚಿತ್ರ – ಹೀಗೆ ಅನೇಕಾನೇಕ ಸಂದರ್ಭಗಳನ್ನು ನೆನಪಿಸಬಹುದು.

ರಂಗವ್ಯವಹಾರ ಬಿಗಿ, ಉದ್ದಕ್ಕೂ ಕಾಣಿಸಿಕೊಳ್ಳುವ ಜೀವಂತಿಕೆ, ಸರ್ವಾಂಗ ಅಭಿವ್ಯಕ್ತಿ ಮತ್ತು ತುಡಿತಗಳು, ವ್ಯಾವಸಾಯಿಕ ಬದ್ಧತೆಗಳಲ್ಲೆಲ್ಲ ಅಳಿಕೆ ಆದರ್ಶಪ್ರಾಯರು.

ರಂಗದ ಹೊರಗೂ – ಚೊಕ್ಕ ಉಡುಪು, ತೂಕದ ವ್ಯವಹಾರ, ಗೌರವದ ಆತ್ಮೀಯತೆಗಳ ಚಿತ್ರ ಅವರು.

ಕಲಾ ಶ್ರೀಮಂತಿಕೆಯ ಅಳಿಕೆ – ಅಳಿವಿಲ್ಲದ ಅಚ್ಚು.

* * *

ಅಳತೆಗೆ ಮೀರಿದ ಎತ್ತರ ಏರಿದವರು ಅಳಿಕೆ. ಅವರಿಗೆ ಅವರೇ ಉಪಮೆ.

ಎನ್.ಪಿ. ಶೆಟ್ಟಿ, ಮುಲ್ಕಿ



# ಆಟದವನ ಬದುಕು ಬದುಕಿದವನ ಆಟ

....... ಇಂತಹ ಪ್ರಸಂಗಗಳು ನನ್ನ ಜೀವಮಾನದಲ್ಲಿ ನಾನು ಎದುರಿಸಿದ್ದನ್ನು ಬರೆಯುತ್ತಾ ಹೋದರೆ ಅದೊಂದು ರಾಮಾಯಣವಲ್ಲ, ರಾಮಯ್ಯನ ಪುರಾಣ ವಾದೀತು. ಕೆಳಗಿನ ಒಂದು ಘಟನೆಯನ್ನು ಓದುಗರ ಮುಂದಿಟ್ಟು ಮತ್ತೆ ನನ್ನ ಪ್ರಸಂಗ ಪ್ರವೇಶ ಮಾಡುವೆ.

ಈ ಸಮಯ ಕದ್ರಿ ಮೇಳವು ನಾನಿದ್ದ ಈರಮ್ಮನ ಮನೆಯ ಸಮೀಪ 'ಕೇಳಿ' ಬಡಿಯಿತು. ಆಟವೆಂದರೆ ಕಿವಿ ನಿಮಿರುವ ನಾನೂ ಅಂದಿನ ಬಯಲಾಟಕ್ಕೆ ಪ್ರೇಕ್ಷಕನಾಗಿ ಹೋದೆ. ಓಲೆಯವಳಿಗೆ ಓಲೆಯವಳು ಇಷ್ಟ ಎಂಬಂತೆ ಬಯಲಾಟದಲ್ಲಿ ಆಡಿ ಕುಣಿದ ನನಗೆ ಆ ಕೂಟವೇನೂ ಅಪರಿಚಿತವಲ್ಲ.

ಆಟದ ಮಧ್ಯೆ ನಾನೊಮ್ಮೆ ನೇಪಥ್ಯ ಚೌಕಿಗೆ ಹೋದಾಗ ಕದ್ರಿ ಶ್ರೀ ಮಂಜುನಾಥೇಶ್ವರ ಮೇಳದ ಯಜಮಾನ ಶಂಭು ಹೆಗ್ಗಡೆಯವರು ಅಲ್ಲಿ ಮುಂದಿನ ವೇಷಗಳಿಗೆ ಪ್ರವೇಶದ ನಿರ್ದೇಶನ ನೀಡುತ್ತಿದ್ದರು. ಅವರು ರೋಗ ಹಿಡಿದು ಗುಣಮುಖವಾಗುತ್ತಾ ಬರುತ್ತಿರುವ ನನ್ನ ಪೇಲವ ಶರೀರವನ್ನು ಕಂಡು ಅಳಿಕೆಯವರ ಮಗನೆಂದು ಕೇಳಿ ಜಾತಿ ವಾತ್ಸಲ್ಯದಿಂದ ಪ್ರೀತ್ಯಾದರದಿಂದ ಮಾತನಾಡಿ ನಾನು ಆಟಕ್ಕೆ ಹೋಗದಿದ್ದ ಕಾರಣ ತಿಳಿದು ನನ್ನನ್ನು ಮರುದಿನ ಅವರ ಆಟ ಮುಗಿದೊಡನೆ ನನ್ನ ತಂದೆಯವರಿದ್ದ ಮೇಳಕ್ಕೆ ನನ್ನ ಸಾಕುತಾಯಿಯ ಒಪ್ಪಿಗೆ ಪಡೆದು ಕರೆಯೊಯ್ದರು.

ಏಕೆ ಇವನನ್ನು ಮೇಳಕ್ಕೆ ಸೇರಿಸಿಕೊಳ್ಳುತ್ತೀರಿ ಎಂದು ಕೇಳಿದಾಗ, ಅವರು ಅವರ ಆರ್ಥಿಕ ಬಿಕ್ಕಟ್ಟನ್ನು ಮುಂದಿಟ್ಟು ಊಟಕ್ಕೆ ಕುಣಿಯುವುದಿದ್ದರೆ ಕುಣಿಯಲಿ ಎಂಬ ಧಾಟಿಯ ಮಾತನ್ನು ಕೇಳಿದ ಹೆಗ್ಗಡೆಯವರು, ಇಂಥ ವಿದ್ಯಾವಂತ ಹುಡುಗನು ಪುಕ್ಕಟೆ ದುಡಿಯಲು ಹುಟ್ಟಿದವನಲ್ಲ. ಮುಂದೆ ಇವನ 'ಏರನ್ನು' ನಿರೀಕ್ಷಿಸುತ್ತಿರಿ ಎಂದು ನನ್ನನ್ನು ಅವರೊಂದಿಗೆ ಕೊಡಿಯಾಲಗುತ್ತಿನ ಅವರ ಭವ್ಯ ಮನೆಗೆ ತಂದು ನನಗೆ ಶರೀರ ಪುಷ್ಟಿ ತ್ರಾಣಕ್ಕೆ ಟಾನಿಕ್ಕು, ಹಾಲು – ಹಣ್ಣು ಯಥೇಚ್ಛ ಕೊಡಿಸಿ ಮುಂದಿನ ಗೆಜ್ಜೆ ಕಟ್ಟುವ ದಿನಕ್ಕೆ ಹಿಂದೆ ಬೈಕೋಲಿಗೆ ಸೀರೆ ಸುತ್ತಿದ ವೇಷವೆಂದು ಅಪಪ್ರಥೆಗೆ ಈಡಾಗಿದ್ದ ನನ್ನ ಸ್ತ್ರೀವೇಷ ಇಂದು ಸೀರೆಯುಟ್ಟು ಸ್ತ್ರೀವೇಷ ಮಾಡಿದೆನೆಂದರೆ, 70 ವರ್ಷದ ಮುದುಕ ರಸಿಕ ಎದ್ದು ಕಣ್ಣು ಹೊಡೆದು 'ಬಲೇ ವಯ್ಯಾರಿ ಮಾರನಂಗನೆಯಂತಿಹಳು ಈ ಪೋರಿ' ಎಂದು ಹಾಡಿ ಹೊಗಳುವ ಮಟ್ಟಕ್ಕೆ ತಂದಿತ್ತು.

ಹೆಗ್ಗಡೆಯವರ ಔದಾರ್ಯಯುತ ಮಳೆಗಾಲದ ಸಮ್ಮಾನ, ಈ ಸಮಯ

ವೇಷಧಾರಿಗಳ ಅಭಾವ, ಆರ್ಥಿಕ ಪರಿಸ್ಥಿತಿಯ ಒತ್ತಡದಿಂದ ಹೆಗ್ಗಡೆಯವರೂ ಕದ್ರಿ ಮೇಳವನ್ನು ಮುಂದೆ ನಡೆಸುವ ನಿರ್ಧಾರವನ್ನು ಕೈಬಿಡುವ ಹಂತಕ್ಕೆ ಬಂದಿದ್ದರು. ಕೊಡಿಯಾಲಗುತ್ತಿನಲ್ಲಿ ನಾನು ಆರೈಕೆ ಹೊಂದುತ್ತಿರುವ ಸಮಯ ಆಗಾಗ್ಗೆ ತಂದೆಯವರು ನನ್ನನ್ನು ನೋಡಿಕೊಂಡು ಹೋಗಲು ಅಳಿಕೆಯಿಂದ ಮಂಗಳೂರಿಗೆ ಕಾಲ್ನಡಿಗೆಯಿಂದ ಪಾಣೆಮಂಗಳೂರು ತನಕ ಬಂದು ಸಿಕ್ಕಿದ ಹಾಯಿ ದೋಣಿಯಲ್ಲಿ ಮಂಗಳೂರಿಗೆ ಬರುತ್ತಿದ್ದರು. ಆಟದವರೆಂದರೆ ಸರ್ವಸಾಮಾನ್ಯ ಎಲ್ಲರಿಗೂ ಪರಿಚಿತರು. ಅದರಲ್ಲೂ ದೋಣಿ ನಡೆಸುವ ಮರಕ್ಕಾಲ ಬಂಧುಗಳಿಗೆ ನಿಕಟ ಪರಿಚಿತರು. ದೋಣಿಯ ಪ್ರಯಾಣ, ಪುಕ್ಕಟೆಯಾಗಿ ಪ್ರಯಾಣಿಸುವ ನಮಗೆ ಅವರ ಸೊಗಸಾದ ಹೊಳೆ ಭೋಜನದಲ್ಲಿ ಹಿರಿಪಾಲು. ದೋಣಿಯಲ್ಲೇ ಹೋಗು ಬರುತ್ತಾ ಗಾಳ ಬೀಸು ಬಲೆಯಲ್ಲಿ ಹಿಡಿದ ಮೀನುಗಳನ್ನು ನಮಗೆ ದೋಣಿಯಲ್ಲೇ ಅಟ್ಟು ಉಣ್ಣುವ ಸೊಗಸು ಖುಷಿ 'ಬಲ್ಲವನೇ ಬಲ್ಲ ಬೆಲ್ಲದ ಸವಿಯ' ಎಂಬ ಮಾತಿಗೆ ಪುಷ್ಟಿ ಕೊಡುವಂತಹದು. ತಂದೆಯವರೊಂದಿಗೆ ನಾನೂ ಇಲ್ಲಿ ಇವರೊಂದಿಗೆ ಪಾಲುಗಾರ ಎಂಬುದನ್ನು ಮರೆತ ಕೃತಘ್ನನಲ್ಲವೆಂದು ತೋರಿಸಲು ಇಲ್ಲಿ ಇದನ್ನು ನಿವೇದಿಸಿರುವೆ.

ತಂದೆಯವರು ಮಳೆಗಾಲದಲ್ಲಿ ನನ್ನನ್ನು ಕಾಣಲು ಕೊಡಿಯಾಲಗುತ್ತಿಗೆ ಆಗಾಗ ಬರುತ್ತಿದ್ದರು ಎಂದೆನಲ್ಲವೇ, 'ಏನಕೇನ ಪ್ರಕಾರೇಣ ಮಾತಿಗೊಂದು ಮಾತು ಚಕ್ಕುಲಿಗೊಂದು ತೂತು' ಎಂಬಂತೆ ಹಿರಿಯ ಹೆಗ್ಗಡೆಯವರು ಈ ವರುಷ ಕದ್ರಿ ಮೇಳ ಹೊರಡಿಸುವ ಇಚ್ಛೆ ನಮಗಿಲ್ಲ. ನೀವೂ ರಾಮಯ್ಯನೂ ನಮ್ಮ ಮೇಳಕ್ಕೆ ಬರುವುದಿದ್ದರೆ ಮಾತ್ರ ಮುಂದಿನ ಕದ್ರಿಯ ಚೆಂಡೆ ಮದ್ದಳೆಯು ರಣಗುಟ್ಟುವುದು ಎಂದಾಗ ನನ್ನನ್ನು ಕೈಬಿಟ್ಟ ನನ್ನ ಹಿಂದಿನ ಮೇಳದ ಯಜಮಾನರ ಸಂಕುಚಿತ ಬುದ್ಧಿಗೆ ರೋಸಿದ್ದ ತಂದೆಯವರು ದಿಢೀರನೆ ಹೆಗ್ಗಡೆಯವರ ಮಾತಿಗೆ ಅಸ್ತು ಗೊಟ್ಟಾಗ ನನಗೂ ತುಂಬಾ ಮುಜುಗರ. ಕಾರಣ ಶಂಭು ಹೆಗ್ಗಡೆಯವರ ಅಣ್ಣ ಹಿರಿಯ ಹೆಗ್ಗಡೆಯವರು ಕದ್ರಿ ಮಂಜುನಾಥೇಶ್ವರ ಮೇಳದ ಯಜಮಾನನೆಂದಿದ್ದರೂ ಹೆಚ್ಚಿನ ಕಾರುಭಾರವೆಲ್ಲಾ ತಮ್ಮ ಶಂಭು ಹೆಗ್ಗಡೆಯವರ ಪಾಲಿನದೇ ಆಗಿತ್ತು. ಆ ಕಾಲ ವೀಳ್ಯದಾಟವು ನಾಮಕಾವಸ್ಥೆ ಎಂಬಂತೆ ನಾಲ್ಕು ರೂಪಾಯಿ ದಿನದ ಪಡಿಯಿಂದ ದಿನದ ಪಡಿ ಸಮೇತ 2-3 ವರುಷಗಳ ಅಂತರದಲ್ಲಿ 12 ರೂಪಾಯಿಯಿಂದ 14 ರೂಪಾಯಿಗಳಿಗೇರಿದರೂ ಆಗ ಮೇಳ ನಡೆಸಲು ಅನಿವಾರ್ಯವಾಗಿ ಬೇಕಾದ 30 ಜನರ ಜೀವನ ನಿರ್ವಹಣೆ, ಸೀರೆ ಕುಪ್ಪಸ ಕೊಳ್ಳಲು ಮೇಲೆ ಕೆಳಗೆ ನೋಡಬೇಕಿದ್ದ ಕಾಲ. ಇದಕ್ಕೆ ಮೇಳದ ಯಜಮಾನರು ಒಂದೆರಡು ಒಳ ಯೋಜನೆಗಳನ್ನು ಯೋಜಿಸಿಯೂ ಇದ್ದರು. ಇಸ್ಪೀಟು, ಜುಗಾರಿ, ತಪ್ಪಲೆ ಜುಗಾರಿ, ಐಟ್ಟುಂಡೊ ನೆಟ್ಟ್ ಉಂಡೊ ಮೊದಲಾದವು ಅಲ್ಲದೆ ರಂಗಸ್ಥಳದ ನೆರೆಯಲ್ಲಿ ಹಾಕಿದ ಚಾ-ದುಕಾನು, ಮಣಿ-ಸರಕಿನ ಅಂಗಡಿ, ತಿಂಡಿ - ಪಾನೀಯಗಳ ಅಂಗಡಿಯಿಂದ ಪಾಲು ಪಡೆಯುತ್ತಿದ್ದರು. ಹೆಗ್ಗಡೆಯವರ ಆಟದಲ್ಲಿ ಹೆಚ್ಚಿನಂಶ ಜುಗಾರಿಯೇ ಪ್ರಧಾನ ಆಕರ್ಷಣೆ. ಇದೇ ಅವರ ಮೇಳದ ಆಯ-ವ್ಯಯದ ಮೂಲ. ಇದಕ್ಕೆ ಆಗಾಗ್ಗೆ ಪೊಲೀಸಿನವರ ದಾಳಿಯಾದರೂ ಅವರ ಮಾಮೂಲನ್ನು ತೆತ್ತುದಾದರೆ, ಒಂದಲ್ಲ ಹತ್ತು ರೀತಿಯ

ಜುಗಾರಿ ಆಟವನ್ನು ಆಡುವುದಕ್ಕೂ ಪೊಲೀಸರ ಆಕ್ಷೇಪವಿರಲಿಲ್ಲ. ಇದರ ಕಥೆಯನ್ನು ಮುಂದೆ ಬರೆಯುವೆ.

ಶಂಭು ಹೆಗ್ಗಡೆಯವರು ಹೆಣ್ಣು ಮೋಹಿಸುವಂಥ ಸ್ಫುರದ್ರೂಪಿ. ತುಂಬಾ ರಸಿಕ. 'ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ' ಎಂಬ ಸ್ವಭಾವ. ಯಕ್ಷಗಾನ ಆಟದ ವ್ಯವಸಾಯ ಇದಕ್ಕೆ ಪೂರಕ. ಜುಗಾರಿ ಎಂದ ಮೇಲೆ ಹೆಗ್ಗಡೆಯವರು ಕುಡಿತಕ್ಕೂ ಒಗ್ಗಿದ್ದರು ಎಂದು ಪ್ರತ್ಯೇಕ ಎಂದು ಹೇಳಬೇಕೇನು, ಜವ್ವನದ ನುರ್ಕು, ಐಸಿರಿಯ ಸೊರ್ಕು, ಸ್ಥಾನಮಾನ ಮಾನದ ಮದಿಪು, ಆಗ ಸ್ವಾಭಾವಿಕವಾಗಿ ಬರುವ ವಿವೇಕ ವಿಹೀನ ತುಡಿಪು ಇವು ನಾಲ್ಕು ಒಂದಾದಾಗ ಕಾಲವನ್ನೆ ಕೆಡಿಸುವ ಹುಮ್ಮಸ್ಸಿನಿಂದ ನಡೆಯುವ ನಡತೆ ಕಿರಿಯ ಹೆಗ್ಗಡೆಯವರ ಪಾಲಿಗೆ. ಇದಕ್ಕೆ ಪೂರಕವಾಗಿ ಉಂಡಾಡಿಗಳ ಒಡನಾಟ. ಅವರ ಸೋಮಾರಿ ಕೂಟದ ಸರಪಂಚರಲ್ಲಿ ಕೆಲವರು ಅವರ ಮೆಹರ್ಬಾನಿ ಗಳಿಸಲು ಅವರು ಹುಂ ಎಂದರೆ ಸಾಕು. ಎದುರಿಗಿದ್ದ ಬಡಪಾಯಿಯನ್ನು ಹಣ್ಣುಗಾಯಿ ನೀರುಗಾಯಿ ಮಾಡಿ ಮುಗಿಯಿತು. ಮತ್ತೆ ಕೆಲವರು ಭಟ್ಟಿ ಸಾರಾಯಿ ಸಂಪಾದಕರು. ಇನ್ನು ಕೆಲವರು ಅಣ್ಣನಿಗೆ ಹೆಣ್ಣು ದಲ್ಲಾಳಿ ಮಾಡುವ ಖದೀಮರು. ಹೊಗಳಿದರೆ ಹೆಗ್ಗಡೆಯವರು ಹೆಗಲ ಶಾಲನ್ನೇ ದಾನ ಮಾಡುವ ದಾನ ಶೂರ ಕರ್ಣನೆಂದು ಖ್ಯಾತರಾದವರು. ಮನಸ್ಸಾದರೆ ಕಿಸೆಯಲ್ಲಿದ್ದಷ್ಟನ್ನು ಮೆಚ್ಚಿದ ಹುಡುಗಿಗೂ ಹಾಗೂ ಹುಡುಗನಿಗೂ ಬಾಚಿ ಕೊಡುವ ಉದಾರಿ. ಕಿಸೆಯಲ್ಲಿದ್ದುದು ಮುಗಿದ ನಂತರ ರಾತ್ರಿಯಿಡೀ ಕುಣಿದು ದಣಿದ ವೇಷಧಾರಿಯು ಬಂದು ತನ್ನ ಖರ್ಚಿಗೆ ಎಂಟಾಣೆ ಕೇಳಿದರೆ ಅವರಿಗೆ ದೇವಭಾಷೆಯ ನಾಮಾರ್ಚನೆ. ರಂಡೇ ಮಗನಿಂದ ಪ್ರಾರಂಭವಾಗಿ ಅವನ ಕುಟುಂಬ ಸಂಸಾರವನ್ನು ಅದೇ ಧಾಟಿಯ ಪದ ಪುಂಜಗಳಿಂದ ಪುನೀತಗೊಳಿಸಿ ನಡೆ ಸೂಳೆ ಮಗನೇ ಎಂಬಲ್ಲಿಗೆ ಮಂಗಳ ಹಾಡಿದಾಗ ಅವನು ಹೋಗದೆ ಮತ್ತೂ ಅಂಗಲಾಚುತ್ತಿದ್ದರೆ ಎದ್ದು ತನ್ನ ನೀಳ ಕೈಯಿಂದ ಮುಸುಡಿಗೆ ಒಂದೇಟು ಎದುರಿಂದ, ಹಿಂಗಡೆಯಿಂದ ಕಾಲೆತ್ತಿ ಕುಂಡೆಗೊಂದು ಲಾತು. ಇದನ್ನು ಪುರಸ್ಕಾರವಾಗಿ ಪಡೆದ ಬಡತಾಯಿ ಮಗ ತಿಂದ ಕೈ ಕಾಲಿನ ಏಟಿಗೆ ಎದುರು ಮುಗ್ಗರಿಸಿ ಬೀಳದೆ ಹಿಂದೆ ಬಾಗಿ ಕುಸಿಯದೆ ಮೇಲಕ್ಕೆ ಎಗರಿ ಒಂದು ಸುತ್ತು ಎತ್ತರದಲ್ಲಿ ತಿರುಗಿ ತನ್ನ ಹಿಂದಿನ ದಿನದ ಆಟದ ಹಾರು ಕುಣಿತದ ತಾಲೀಮನ್ನು ನೆರೆದವರಿಗೆ ತೋರಿಸಿ ಕುಂಡೆಗೆ ಕಾಲು ಕೊಟ್ಟು ಬದುಕಿದರೆ ಬೇಡಿ ತಿಂದೇನು ಎಂಬ ಧಾಟಿಯಿಂದ ಹಿಂದಿರುಗಿ ನೋಡದೆ ಓಟಕ್ಕಿತ್ತರೆ ಮತ್ತವನಿಗೆ ನಿಲ್ದಾಣ ಮಡಿಕೇರಿಯ ಕಾಫಿ ತೋಟ ಇಲ್ಲವೇ ಮುಂಬೈಯ ದುಖಾನ್.

ಇದನ್ನೆಲ್ಲಾ ಅರಿತ ನಾನು ಇವರೊಂದಿಗೆ ದುಡಿಯಲು ಮೀನಮೇಷವೆಣಿಸಿದುದು ಸ್ವಾಭಾವಿಕ. ಆದರೆ ಇವರು ನನ್ನನ್ನು ಮನೆ ಮಗನಂತೆ ಮೂರು ತಿಂಗಳು ಸಾಕಿದ ಋಣಭಾರವು ಅವರ ಮೇಳದ ಸೇವೆಯನ್ನು ಕೈಗೊಳ್ಳಲು ಮುಂದೂಡುತ್ತಿದೆ. ಇವರ ಗುಣ ನಡತೆಯು ಭಯಗೊಳಿಸುತ್ತಿದೆ. ತಂದೆಯವರ ಒಪ್ಪಿಗೆಯು ನನ್ನನ್ನು ಅತ್ತ ದರಿ ಇತ್ತ ಪುಲಿ ಎಂಬ ಪರಿಸ್ಥಿತಿಯಲ್ಲಿ ತಂದಿಟ್ಟಿದೆ. ಈಗ ನನ್ನ ಪರಿಸ್ಥಿತಿ ಹೆಣ್ಣನ್ನು ನೋಡುವಾಗ ಆಸೆಯಾಗುತ್ತದೆ. ಭೂತವನ್ನು ನೋಡುವಾಗ ಭಯವಾಗುತ್ತಿದೆ ಎನ್ನುವ ತೆರ. ಈ

ವಿಚಾರವನ್ನು ನಾನು ತಂದೆಯವರ ಮುಂದಿಟ್ಟು ಹೇಗಾದರೂ ಇಲ್ಲಿಂದ ಜಾರೋಣ ವೆಂದರೆ ಮಾತಿಗೆ ಕಟ್ಟುಬಿದ್ದ ತಂದೆಯವರ ಪಾಡು ಅಡಕೊತ್ತಿನಲ್ಲಿ ಸಿಕ್ಕ ಅಡಕೆಯಂತೆ. ಅನುಭವದಿಂದ ನುಡಿಯುವ ಮಗನ ಮಾತನ್ನು ಕೇಳುವುದೋ ಆಪತ್ಕಾಲದಲ್ಲಿ ನೆರವಿತ್ತುದನ್ನು ಮರೆಯುವುದೋ ಎಂಬ ಪರಿಸ್ಥಿತಿ ತಂದೆಯವರದು. ಅವರು ಶಂಭು ಹೆಗಡೆಯವರೊಡನೆ ನಿರ್ದಾಕ್ಷಿಣ್ಯದಿಂದೆಂಬಂತೆ ನುಡಿದರು. ಹೆಗ್ಗಡೆಯವರೇ ನಾವು ಕದ್ರಿ ಮೇಳದಲ್ಲಿ ತಂದೆ ಮಗ ಕಾಯಾ ವಾಚಾ ಮನಸಾ ದುಡಿಯಲು ನಿರ್ಧರಿಸಿದ್ದೇವೆ. ಆದರೆ ನಮ್ಮ ಒಂದು ಕಿರು ಕೇಳಿಕೆಯನ್ನು ನೀವು ಮನ್ನಿಸಬೇಕು. ನನ್ನ ಮಗನನ್ನಂತೂ ನೀವು ನಿಮ್ಮ ಬೆನ್ನು ಬಿದ್ದ ತಮ್ಮನೆಂದು ಪರಿಗಣಿಸಿದ್ದೀರಿ. ನನ್ನನ್ನು ಅವನನ್ನೂ ನೀವು ಕೆಳಸ್ತರದಲ್ಲಿ ನೋಡಬಾರದು. ಅಂದಿನ ತನಕ ಕದ್ರಿ ಮೇಳವು ನಮ್ಮದೆಂದೇ ನಡೆಯುವೆವು ಎಂದೆವು. ಅದನ್ನು ಆಯಿತೆಂದು ಉಲ್ಲಾಸದಿಂದ ಹೆಗ್ಗಡೆಯವರು "ನಾನು ರಾಮಯ್ಯ ನಿಗಾಗಿಯೇ ಈ ಮೇಳವನ್ನು ಹೊರಡಿಸುವ ನಿರ್ಧಾರಕ್ಕೆ ಬಂದುದು. ಹಾಗೆಯೇ ಆಗಲಿ. ವೀಳ್ಯದ ಹಣದಿಂದ ಮೇಳ ನಡೆಸಿಕೊಂಡು ಹೋಗುವ ಹೊಣೆ ನಿಮ್ಮದು. ನಾನು ಅದರಿಂದ ಪೈಸೆ ಮುಟ್ಟುವುದಿಲ್ಲ. ನನಗೆ ಇತರ ಯೋಜನೆಗಳಿವೆ ತಾನೆ, ಬೇಕಿದ್ದರೆ ನಾನೇ ಆಟಕ್ಕೆ ಅಗತ್ಯ ಬಿದ್ದರೆ ಸಹಾಯ ಮಾಡುವೆನು" ಎಂದಾಗ ನಮಗೆ ಬೇರೆ ಉಪಾಯವಿಲ್ಲದೆ ಈ ಹುಲಿಯ ಬೋನಿನನಲ್ಲಿಯೇ ಇರಲು ನಿರ್ಧರಿಸಿದೆವು. ಆಟದ ಸರ್ವಾಧಿಕಾರವೂ ನಮ್ಮದಾದರೆ ಮೇಳದ ಸರ್ವಾಧಿಕಾರಿ ಹೆಗ್ಗಡೆಯವರೆ!

ಮೂರು ವರ್ಷ ನಮ್ಮ ಇರುವಿನಲ್ಲಿ ಮೇಳ ಯಾವೊಂದು ವಿಘ್ನ ವಿಡ್ಡೂರವಿಲ್ಲದೆ ನಡೆಯಿತು. ನಮ್ಮ ತಂದೆ –ಮಗನ ಹೆಸರು ಜನತೆಯ ನಾಲಿಗೆಯ ತುದಿಯಲ್ಲಿ ಕುಣಿಯಿತು. ನಾವು ರಂಗಸ್ಥಳದಲ್ಲಿ ನಲಿದ ದ್ಯೋತಕವಾಗಿ ನನ್ನ ದಮಯಂತಿಯ ವೇಷವೀಗ ಹಿಂದಿನಂತೆ ಬೈತಡ್ಕ ಸೀರೆ ಸುತ್ತಿದ ಹಾಗೆ ಅಲ್ಲ, ಪದ್ಮಿನಿ ಜಾತಿಯ ಸ್ತ್ರೀ ವೇಷವೆಂದು ಬೆಟ್ಟೆತ್ತಿ ತೋರಿಸಬೇಕು ಎಂಬಂತಾಯಿತು. ನನ್ನ ಕೈಗೆ ಬಂದ ಹೆಂಗಸರ ವೇಷಗಳಿಂದ ಗಂಡನನ್ನು ಛೇಡಿಸಲು ಬೇಕಾದ ಪದ ಪ್ರಯೋಗವನ್ನು ಆಯ್ಕೆ ಮಾಡಿ, ನಾನು ಊರಿನ ಹೆಂಗಸರಿಗೆ ಕೊಡುತ್ತೇನೆ ಎನ್ನುವಂತಹ ಅಭಿಪ್ರಾಯ ಹುಟ್ಟಿಕೊಂಡಿತು. ಕದ್ರಿ ಮೇಳದಲ್ಲಿ ಮೂರು ವರ್ಷ ಯಾವ ಎಡರೂ ತೊಡರೂ ಇಲ್ಲದೆ ಜನತಾ ಜನಾರ್ದನರು ಮೆಚ್ಚುವಂತೆ,ದೇವರು ಮೆಚ್ಚುವಂತೆ ದಿನ ಕಳೆಯಿತು. ನನ್ನ ವೇಷಗಾರಿಕೆ ಕುಣಿತ ಮಾತಿನ ಮೋಡಿಗೆ ಮೆಚ್ಚಿದ ಕೊಡಿಯಾಲ ಕುಟುಂಬ– ಹೆಗ್ಗಡೆದ್ವಯರ ಹಿರಿತನದಲ್ಲಿ, ಸಾಹುಕಾರ ಕೀರ ಬ್ಯಾರಿಗಳ ಚಿನ್ನದ ಕಂಕಣಗಳ ಎಡೆಗೆ ಕೋಟ್ಯಣ್ಣ ಆಳ್ವರ ಕುರ್ಜಾತು ಮಾಲೆಯ ಮಧ್ಯೆ ನನಗೆ ತುಂಬಿದ ಸಭೆಯಲ್ಲಿ ಹೊಗಳಿಕೆಯ ಸರಮಾಲೆಯೊಂದಿಗೆ ಕೊರಳಿಗೆ ಹೂಮಾಲೆ ಪಟ್ಟೆ ಶಾಲು ಹಾಕಿ ಕೈಗೆ ಕೆತ್ತನೆಯ ಕೆಲಸದ ತೋಕಾ ತೊಡಿಸಿ ಬೆನ್ನು ತಟ್ಟಿದರು. ಕಟೀಲು ಮೇಳದ ಮದ್ದೆಗಾರರು ಇದನ್ನು ಕೇಳಿ ಹೊಟ್ಟೆ ಉರಿಯಿಂದ ಅಂದರಂತೆ. 'ಯಾರೋ ಅಟ್ಟು ಕೊಟ್ಟದ್ದನ್ನು ಕದ್ರಿಯವರು ಉಂಡರೆಂದು'. ಅಂದರೆ ನಮ್ಮನ್ನು ಪಳಗಿಸಿದ್ದು ಕಟೀಲು ಮೇಳದವರು. ಈಗ ಆ ಫಲ ಪಡೆಯುವುದು ಕದ್ರಿ ಮೇಳದವರೆಂದು.

ಕದ್ರಿ ಮೇಳದಲ್ಲಿ ಮೂರು ವರುಷ ತಂದೆ ಮಕ್ಕಳ ತಿರುಗಾಟ ನಡೆದು ಪತ್ತನಾಜೆಗೆ

ಮನೆಗೆ ಮರಳಿದ್ದೆವು. ಯಕ್ಷಗಾನ ರಂಗದಲ್ಲಿ ಪರಿಪೂರ್ಣತೆಯನ್ನು ಪಡೆದವನೆಂದು ಅಚ್ಚೊತ್ತಿಕೊಳ್ಳಬೇಕಿದ್ದರೆ ಅವನು ಯಾವ ರಂಗದಲ್ಲೇ ಅರ್ಪಿಸಿಕೊಂಡಿರಲಿ, ಅವನು ಭಾಗವತನಾಗಿರಲಿ, ವೇಷಧಾರಿ, ಮದ್ದಲೆಗಾರ, ಹಾಸ್ಯಗಾರ ಯಾರೇ ಆಗಿರಲಿ, ತನ್ನ ಆಯ್ದ ವಿಷಯಕ್ಕೆ ಪರಿಪೂರ್ಣ ನಿಗಾ ಕೊಟ್ಟು ಮತ್ತಿನ ನಾಟ್ಯ, ಚೆಂಡೆ ಮದ್ದಲೆ ಇವುಗಳಲ್ಲಿ ಪರಿಣಿತಿ ಪಡೆದರೆ ಮಾತ್ರ ಅವನು ಯಕ್ಷಗಾನ ಕಲಾವಿದನೆಂದು ಮನ್ನಣೆ ಪಡೆಯಲು ಅರ್ಹ. ಅಲ್ಲದೇ ಇಂದಿನ ಹೆಚ್ಚಿನವರಂತೆ ದಿನಕಳೆದು ಕೂಳು ಸಂಬಳಕ್ಕಾಗಿ ಗೇದರೆ ಆಟ, ತಾಳ ಮದ್ದಳೆ ಕಸುವು ಕಳಕೊಂಡು ಸಪ್ಪೆ.

ಹಿಂದಿನ ದಿನಗಳಲ್ಲಿ ಬಯಲಾಟ ಮೇಳಗಳಲ್ಲಿ ರಾಜ ವೇಷಧಾರಿಯೇ ಆಗಿರಲಿ, ತನ್ನ ಪರಾಕ್ರಮಕ್ಕೆ ವಿರಾಮ ಸಿಕ್ಕಿತೆಂದು ತಿಂದು ಮಲಗಲು ಎಡೆಯೇ ಇಲ್ಲ. ಅವನು ತನ್ನ ವಿರಾಮ ಕಾಲದಲ್ಲಿ ಭಾಗವತನ ಹಿಂದಿನಿಂದ ಕ್ರಮಬದ್ಧವಾಗಿ ಚಕ್ರ ತಾಳ ಕುಟ್ಟುತ್ತಾ ಆ ಸಮಯದಲ್ಲಿ ರಂಗದಲ್ಲಿರುವ ವೇಷದ ಕುಣಿತ ಮಾತುಗಾರಿಕೆಯನ್ನು ಮನನ ಮಾಡುತ್ತಿರಬೇಕು. ಕಿರಿಯರು ರಂಗಸ್ಥಳದಲ್ಲಿ ಭಾಗವತರ ಆಸನದ ಕೆಳಗೆ ಮೂಲೆ ಮೂಲೆಗಳಲ್ಲಿ ಕುಳಿತು ಬಣ್ಣದ ವೇಷ ಬಂದಾಗ ಅಟ್ಟಹಾಸ ಲಬೋಗುಟ್ಟುತ್ತಾ ಆಟದ ಪಾಠವನ್ನು ಕಲಿಯಬೇಕು. ಇಂತಹ ಕಟ್ಟು ನಿಟ್ಟು ಆ ಕಾಲದಲ್ಲಿದ್ದುದರಿಂದಲೇ ನಾಲ್ಕನೆ ತರಗತಿ ಕಲಿತ ನಾನು ನಿರರ್ಗಳವಾಗಿ ಭಾರತ, ರಾಮಾಯಣ, ಭಾಗವತ ವೇದೋಪನಿಷತ್ತು ಗಳ ಪಾಠವನ್ನು ಹೊರಗೆಡಹುತ್ತಿದ್ದೆ. ಈ ಕಾರಣಕ್ಕಾಗಿ ಆ ಕಾಲದ ಹೆಸರಾಂತ ಪೊಳಲಿ ಶಾಸ್ತ್ರಿ, ಕವಿಭೂಷಣ ಕೆ.ಪಿ. ಶೆಟ್ಟಿ ಯಕ್ಷಗಾನದ ಕರ್ಣನೆಂದು ಖ್ಯಾತರಾದ ಎನ್.ಎಸ್. ಕಿಲ್ಲೆ , ಉಭಯ ಭಾಷಾ ವಿಶಾರದ ಬಡಕಬೈಲು ಪರಮೇಶ್ವರಯ್ಯ, ಕೃಷ್ಣ ಸಂಧಾನದ ಚತುರನೆಂದು ಹೊಗಳಿಸಿಕೊಂಡ ಅರ್ಕುಳ ಸುಬ್ರಾಯಾಚಾರಿ, ಯಕ್ಷಗಾನ ರಂಗದಲ್ಲಿ ಸಿಂಗದ ಮರಿಯೆಂದು ಖ್ಯಾತರಾದ ರಂಗಪ್ಪಯ್ಯ, ಬೆಡಂಗಿನ ಶಶಿಮುಖಿಯೆಂದು ಪಂಡಿತೋತ್ತಮರಿಂದ ಮಾಲೆ ಸೂಡಿಸಿಕೊಂಡ ಕೆಮ್ಮಿಂಜೆ ಬಳ್ಳಕ್ಕುರಾಯರು, ಗಂಭೀರ ಅರ್ಥಧಾರಿ ಪಡ್ರೆಯವರೇ ಮೊದಲಾದ ಯಕ್ಷಗಾನ ಅಷ್ಟದಿಗ್ಗಜಗಳಿಂದ ಮುಕ್ತಕಂಠದಿಂದ ಹೊಗಳಿಸಿಕೊಂಡೆನೆಂದು ಹೆಮ್ಮೆಗಾಗಿ ಹೇಳುವ ಮಾತಲ್ಲ. ಈ ಮಾತುಗಳನ್ನು ಮನವಿಟ್ಟು ಕೇಳಿ ಆಚರಿಸಿದರೆ ಉಳಿದ ಕಲಾವಿದರೂ ಈ ನಿಟ್ಟಿನಲ್ಲಿ ಮೇಲ್‌ಸ್ತರಕ್ಕೆ ಏರಲೆಂದು ಸದಾಶಯದಿಂದ.

ಈಗ ಈ ಹಿಂದೆ ತಿರುಗಾಟದ ಮೇಳಕ್ಕೆ ಸೇರಿದ ಯಾರೇ ಆಗಲಿ ಅವರ ದಿನಚರಿ ಹೇಗಿತ್ತು ಎಂಬುದನ್ನು ತಿಳಿಸಿದರೆ, ಅಪಚಾರವಾಗದು. ಇದರಲ್ಲಿ ಯಕ್ಷಗಾನ ಬಯಲಾಟದವರ ಜೀವನವು ತಿರುಕನ ಕನಸು. ರಾತ್ರಿ ರಾಜಾಧಿರಾಜನ ವೇಷ. ಅದಕ್ಕನುಗುಣವಾಗಿ ನಡೆ ನುಡಿ ಮಾತುಗಾರಿಕೆ. ಬೆಳಗಾಯಿತೇ ವೇಷ ಬಿಚ್ಚಿ, ಬಣ್ಣ ಬಿಚ್ಚಿ, ತುಂಡು ಬೀಡಿ ಹೆಕ್ಕಿ ಎಳೆದು ಮುಂದಿನ ಆಟದ ಮಜಲಿಗೆ ಹತ್ತು ಹದಿನೈದು ಮೈಲು ಕಾಲು ನಡಿಗೆಯ ಪಯಣ. ಮೇಳದ ಯಜಮಾನರು ಒಳ್ಳೆ ಪರಿಸ್ಥಿತಿಯಲ್ಲಿದ್ದರೆ ಬೆಲ್ಲದ ಕಾಫಿಗಾದರೂ ಎರಡಾಣೆ ಗಿಟ್ಟುತ್ತಿತ್ತು. ಇಲ್ಲವಾದರೆ ಉಪವಾಸ ವನವಾಸ. ದಾರಿಯಲ್ಲಿ ಸಿಕ್ಕ ಗೇರು ಹಣ್ಣು, ಮಾವಿನ ಹಣ್ಣು , ಯಕ್ಷಗಾನ ಆಟದಲ್ಲಿ ಪ್ರೀತಿಯಿದ್ದವರು ಕರೆದು ಕೊಟ್ಟ ಮಜ್ಜಿಗೆ ನೀರು, ಕೊಯಿದು ಕೊಟ್ಟ ಸೌತೆ ಮಿಡಿ ಇವೇ ಅಂದಿನ ಗುರಿ

ಮುಟ್ಟುವಲ್ಲಿವರೆಗಿನ ಆಹಾರ–ಪಾನೀಯ. ಕಿರಿಯರು ಹೊತ್ತಿಗೆ ಮೊದಲು ಪೆಟ್ಟಿಗೆಯವರೊಂದಿಗೆ ಹೋಗಿ ಮುಟ್ಟದಿದ್ದರೆ ಎತ್ತಿನ ಬಂಡಿಯಲ್ಲೋ ಸಿಕ್ಕಿದ ಲಾರಿಗಳಲ್ಲೋ ಹೋಗಿ ಮುಟ್ಟಿದವರು ಕೊಡುವ ಶಿಕ್ಷೆ ಇಂದು ನೆನೆಸಿಕೊಂಡರೆ ಉಸ್ಸಪ್ಪಾ ಎನ್ನಿಸುತ್ತದೆ.

ಕಿರಿಯರು ಅಂದಿನ ಆಟದ ಮಜಲಿಗೆ ಮೊದಲು ಹೋಗಿ, ಆಟ ಆಡಿಸುವವರು ವೀಳ್ಯವಿತ್ತಿದ್ದರೆ ಅವರ ಮನೆಯಿಂದ ಅಂದಿನ ಭೂರಿ ಭೋಜನದ ಸಾಮಾನು (!), ದೀವಟಿಗೆಯ ಎಣ್ಣೆ , ದೀವಟಿಗೆಗೆ ಸುತ್ತಬೇಕಾದ ವಸ್ತ್ರ –ಗಿಸ್ತ್ರ ತಂದು ಮಡಗಿರದಿದ್ದರೆ ಹಾಸ್ಯಗಾರ, ಮದ್ದೆಗಾರರ ಮುಷ್ಟಿಗಟ್ಟಿದ ಕುಟ್ಟಿಯ ರುಚಿ ಉಂಡವನೇ ಬಲ್ಲ. ಇಷ್ಟರಲ್ಲೇ ಮಕ್ಕಳ ಪರಿ ಪಾಟ್ಲು ಕೊನೆಯಲ್ಲ. ಅಡಿಗೆ ಭಟ್ಟರಿಗೆ ಕಟ್ಟಿಗೆ ಸರಬರಾಜು ಇವರಿಂದಲೇ ಆಗಬೇಕು. ಅಧಿಕಾರ ಚಲಾಯಿಸುವ ವೇಷಧಾರಿಗಳಿಗೆ ಮಾವಿನ ಹಣ್ಣಿನ ಕಾಲದಲ್ಲಿ ಅದನ್ನೂ ಸರಬರಾಜು ಮಾಡುವುದರೊಂದಿಗೆ, ಇದಕ್ಕೆ ಬೇಕಾಗುವ ಎಳೆ ಮೆಣಸು ಯಾರ ಹಿತ್ತಲಿನಿಂದಾದರೂ ಕಣ್ಣು ತಪ್ಪಿಸಿ ಇವರಿಗೆ ತಂದೊಪ್ಪಿಸದಿದ್ದರೆ ಅವರ ಕಾಲಿನ ತುಳಿತ ಕಟ್ಟಿಟ್ಟ ಬುತ್ತಿ. ಸಕಾಲದಲ್ಲಿ ದೊಂದಿಯ ಸಾಮಾನು ಹಿಲಾಲು ಒರಸಿಟ್ಟು ಬಿಡಾರಕ್ಕೆ ಬಂದು ಸಿಕ್ಕಿದುದನ್ನು ತಿಂದು ಮಲಗುವ ತಾಣ ಹುಡುಕಿ ಚಾಪೆ ಹಾಸಿಟ್ಟು ಮತ್ತೆ ಸ್ನಾನ, ಬಟ್ಟೆ ಒಗೆಯುವುದು ಇತ್ಯಾದಿ. ಅಲ್ಲಿಂದ ಹಿಂದಿರುಗಿ ಬಂದು ಎರಡು ಗಂಟೆ ಹೊತ್ತಿಗಾಗುವಾಗ ಭಟ್ಟರು ಕೊಟ್ಟ ಅರೆಬೆಂದ ಅನ್ನ, ಸಾರು – ಗೀರು ಸೊಪ್ಪು – ಸದೆಯ ಪಲ್ಯದ ಮೃಷ್ಟಾನ್ನ ಭೋಜನ ತೀರಿಸಿ ನಿದ್ದೆ ಮಾಡಿದರೆ ಸುಮಾರು ಆರು ಗಂಟೆಗೆ ಯಾರಾದರೂ ಎಬ್ಬಿಸಿ ಬಿಡುತ್ತಿದ್ದರು. ಮತ್ತೆ ಆಟ ಆಡಿಸುವವರ ಮನೆಗೆ ಹೋಗಿ ಅವರ ಮುನ್ಸಬು ಅರಿತು ಅತ್ತಿತ್ತ ತಿರುಗಿ ದೀಪದ ಎಣ್ಣೆ, ಸ್ವಸ್ತಿಕಕ್ಕೆ ಅಕ್ಕಿಕಾಯಿ ತಂದು ಮಡಗುವುದು ಮೇಳದ ಮಕ್ಕಳ ಕರ್ತವ್ಯ. ಈ ಹುಡುಗರ ಪಾಲಿಗೆ ಅಂದು ನಿಯಮಿತ ಕಾರ್ಯಕ್ರಮವೇ ರೂಪುಗೊಂಡಿತ್ತು. ಇಂತಿಂಥವರು ಕಟ್ಟಿಗೆ ಹೆಕ್ಕಿ ತರುವುದು, ಇಂಥವರು ಬಾಳೆಯೆಲೆ ತರುವುದು ಎಂಬ ಕಟ್ಟುನಿಟ್ಟಾದ ನಿಯಮವಿತ್ತು. ಆಗ ಕೆಲಸ ಮಾಡಲು ನಿಯಮಿಸಿದ ಹುಡುಗ ತಪ್ಪಿದನೆಂದಾದರೆ, ಒಂದೊಮ್ಮೆ ಅವನಿಗೆ ಆ ಊರಲ್ಲಿ ಕಟ್ಟಿಗೆ, ಬೇಕಾದಷ್ಟು ಬಾಳೆ ಎಲೆ ಸಿಗದೆ ಹೋದರೆ, ಅದಕ್ಕೆ ಜುಲ್ಮಾನೆಯಾಗಿ ಆತನಿಗೆ ಕೊಡುವ ಸಂಬಳದಲ್ಲಿ 'ತುಷ್ಟಿ'ಯೆಂದು ಇಂತಿಷ್ಟು ಕಳೆಯಬೇಕು ಎಂಬ ನಿಶ್ಚಯವಿದ್ದುದರಿಂದ ಈ ನಿಟ್ಟಿನಲ್ಲಿ ಜಾಗರೂಕರಾಗಿದ್ದ ಯಜಮಾನರು ಆದಷ್ಟು ಮುತುವರ್ಜಿ ವಹಿಸಿ ಹುಡುಗನಿಗೆ ಕೊಡಬೇಕಾದ ಕೂಲಿಯನ್ನು ತುಷ್ಟಿಯೆಂದು ವಜಾಗೊಳಿಸಿ ಅವನಿಗೆ ದಕ್ಕುತ್ತಿದ್ದುದು, ಹೊತ್ತು ಗೊತ್ತಿಲ್ಲದ ಸಮಯದಲ್ಲಿ ಹೊಟ್ಟೆ ಬಿರಿಯುವಷ್ಟು ಊಟ ಮಾತ್ರ. ದಕ್ಕಿದ್ದು ಸಿಕ್ಕಿದ ಪುಣ್ಯವೆಂದು ಹೊಟ್ಟೆ ತುಂಬಾ ಉಂಡು ಮಲಗಿದವನೇ ಬಡ ಹಾಸ್ಯಗಾರನಿಗಿಷ್ಟು ಗುದ್ದು. ಈ ತುಷ್ಟಿಯ ಸಂಪ್ರದಾಯಕ್ಕೆ ಬಡಗು ತಿಟ್ಟಿನ ಕುಂದಾಪುರದವರು ಕಳಪು ಎನ್ನುತ್ತಿದ್ದರು.

ನನ್ನ ತಂದೆಯವರು ಗೌರವಾನ್ವಿತ ವೇಷಧಾರಿ. ಎಲ್ಲರಿಗೂ ಗುರು ಸಮಾನರಾಗಿ ಶಿಸ್ತು ಬದ್ಧ ಜೀವನ ನಡೆಸುವವರಾದುದರಿಂದ ನನಗೆ ಈ ಕೆಲಸ ಬೊಗಸೆಯಲ್ಲಿ ವಿನಾಯಿತಿ. ಪೆಟ್ಟು–ಕುಟ್ಟಿಯಿಂದ ದೂರ ಉಳಿದರೂ ಕಾಳನಿಗೆ ಬಂದ ಬೆತ್ತ ಒಂದು ದಿನ ಬೊಳ್ಳನಿಗೂ ಬಾರದಿರದು ಎಂಬ ಅಂಜಿಕೆಯಿಂದ ಈ ಉಪದ್ವ್ಯಾಪವೇ ಬೇಡ

ಹೇಳದ ಊರಿಗೆ ಓಡೋಣವೆಂದು ಮನಸ್ಸು ತುಡಿದು ಇಂದು ತಂದೆಯವರು ಬಣ್ಣ ಬಳಿಯಲು ಕುಳಿತಾಗ ಯಾರಿಗೂ ಹೇಳದೆ ಊರಿಗೆ ಕಂಬಿ ಕೀಳುವುದು ಎಂದು ಬೈಗು ಪುಳ್ಳಿ ಆರಿಸಲು ಎಲೆ ತರಲು ಹೋದವ ಈ ನಿಶ್ಚಯಕ್ಕೆ ದೃಢವಾಗಿ ಬಂದವ– ಅದೇನು ಸದ್ದು....? ಕೇಳಿಯ ಬಡಿತ– ರಥ್ಯಾಂ– ರಡ್ಡಾಂ– ರಡ್ರಡ್ಡಾಂ– ಈ ಅನುರಣಿತಕ್ಕೆ ಆಲೋಚಿಸಿದ ಆಲೋಚನೆ. ಆ ಚೆಂಡೆಯ ಪೆಟ್ಟಿಗೆ ದಿಗಂತ ವ್ಯಾಪಿ. ನಾ ವೋ ಯಥಾಪೂರ್ವ ಕಲ್ಪಯೇತ್ "ಸೆಟ್ಟಿಯೇನು ಮಾಡುತ್ತಾನೆ...? ಅಳೆಯುತ್ತಾನೆ ಸುರಿಯುತ್ತಾನೆ" ಎಂಬಂತೆ ನೇಪಥ್ಯಕ್ಕೆ ಎಲ್ಲವನ್ನೂ ಮರೆತು ನಾಗಾಲೋಟ. ಇದನ್ನಲ್ಲವೇ ಮೋಹಿನಿ ಸೆಳೆತವೆನ್ನುವುದು... ?

ಕೆಲವೇ ಗಳಿಗೆಗಳ ಹಿಂದೆ ಈ ಕಸುಬಿನಲ್ಲಿ ಜಿಗುಪ್ಸೆ ತಳೆದು ಹೇಳದೆ ಊರಿಗೆ ಹೋಗಲು ಕಾಲಿಗೆ ಬುದ್ಧಿ ಹೇಳಬೇಕೆಂದು ನಿಶ್ಚಯಿಸಿದವನು, ಹಿಂದಿರುಗಿ ಬಂದು ಕರ್ಣಪರ್ವ ಪ್ರಸಂಗದಲ್ಲಿ ನಿತ್ಯವೇಷ ಬಾಲಗೋಪಾಲ ಕುಣಿದು ನಕುಲ ಸಹದೇವರಲ್ಲಿ ಯಾವುದಾದರೂ ಒಂದು ಪಾತ್ರವನ್ನು ಮಾಡಿ ಆಮೇಲೆ ಕೃಷ್ಣನಾಗಿ ನಂತರ ಅಭಿಮನ್ಯುವಿನ ಸಾರಥ್ಯವನ್ನು ನಿರ್ವಹಿಸುತ್ತ ಕೌರವನ ತಮ್ಮಂದಿರಲ್ಲೊಬ್ಬನಾಗಿ ಕಾಣಿಸಿಕೊಂಡು ಪುನಃ ಕರ್ಣಾರ್ಜುನ ಕಾಳಗಕ್ಕಾಗುವಾಗ ಕೃಷ್ಣನ ವೇಷ ಧರಿಸಿ ಸ್ವಲ್ಪ ವಿಶ್ರಾಂತಿಯ ಸಮಯ ಕಣ್ಣು ಕೂರಿತೇ ಬೇರೆಯವರಿಗಾದರೆ ಹಾಸ್ಯಗಾರನಿಂದ ಕುಟ್ಟಿ– ಕೈ ಹಿಡಿದೆಳೆದು ನಿಲ್ಲಿಸಿ ಬೈಗುಳ ಸರಮಾಲೆ. ಇದರಿಂದ ನನಗೆ ಈ ಶಿಕ್ಷೆ ತಪ್ಪಿದ್ದರೂ 'ಪಂಕ್ತಿ ತಪ್ಪಿದರೂ ಊಟ ಸಿಕ್ಕಿತು' ಎಂಬಂತೆ ತಂದೆಯವರಿಂದ ಪೂಜೆಗೊಳ್ಳುವುದು ತಪ್ಪದು. ನಾನೆಲ್ಲಿ ಈ ಸಮಯ ನಿದ್ದೆ ಮಾಡಿ ಬಿಡುವೆನೋ ಎಂದು ತಂದೆಯವರು ನನ್ನನ್ನು ಕಣ್ಣಿಗೆ ಎಣ್ಣೆಯಿಕ್ಕಿ ಎಂಬಂತೆ ಕಾಯುತ್ತಿದ್ದರು. ದುಡಿಮೆಗೊಲಿಯುವುದೇ ವಜಪತೆಯನು ಸೈರಿಸನು ದುಡಿಸದಾ ಎಂಬ ಧ್ಯೇಯ ವಾಕ್ಯಕ್ಕೆ ಅವರ ಕೊನೆಯ ಉಸುರಿನ ತನಕ ಅಂಜಿ ನಡೆದ ಅವರು ಮಗನನ್ನು ಎಡವ ಬಿಡೆನೆಂದು ಸರ್ಪಗಾವಲು ಕಾಯುತ್ತಿದ್ದರು. ತಂದೆಯ ಉತ್ತೇಜನ ಈ ನಿಟ್ಟಿನಲ್ಲಿ ಪ್ರೀತಿ ಪಾತ್ರನಾದ ನನಗೂ, ನಾನೊಬ್ಬ ಅದ್ವಿತೀಯ ಯಕ್ಷಗಾನ ಕಲಾಗಾರನಾಗಬೇಕೆಂಬ ಹೆಬ್ಬಯಕೆ. ಈ ದಿಕ್ಕಿನಲ್ಲಿ ನನ್ನ ದುಡಿತವೂ ನಡೆಯಲು ನಾನೂ ಅನಿವಾರ್ಯವಾಗಿ ಬದ್ಧ ಕಂಕಣನಾಗಬೇಕಿತ್ತು. ಇಲ್ಲವಾದರೆ ನನ್ನ ಪಾಡೂ 'ಪರಸೆಯೊಟ್ಟಿಗೆ ಹೋದ ಪುಟ್ಟ ಬಂದ ಪುಟ್ಟ 'ಎಂಬಷ್ಟೆ.

ಆ ಕಾಲವೆಂದರೆ 1927ರ ಸಮಯ. ವೀಳ್ಯ ನಾಲ್ಕು ರೂಪಾಯಿಯದ್ದು ವರ್ಷಕ್ಕೆ ಎರಡು ರೂಪಾಯಿಯಂತೆ ಏರುತ್ತಾ ಹೋಗಿ 12–16ಕ್ಕೆ ಮುಟ್ಟಿದುದು. 1932ರ ಹೊತ್ತಿಗೆ ರೂಪಾಯಿ ಮೂವತ್ತಕ್ಕೆ ಏರಿತ್ತು. ಈಗ ಪ್ರಸಿದ್ಧ ವೇಷಧಾರಿಯ ಆರು ತಿಂಗಳ ಸಂಬಳ 30ರಿಂದ 150 ರೂಪಾಯಿ ಒಳಗೆ. ಅವನಿಗೆ ಆಟದ ತಿರುಗಾಟದ ಕಾಲದಲ್ಲಿ ನಡೆದು ಕಲ್ಲೊತ್ತಾಗಿ ವೇಷ ಮಾಡಲು ಅಸಾಧ್ಯವಾದರೆ, ಜ್ವರ ಬಂದು ಚಾಪೆ ಹಿಡಿದರೆ, ಮನೆಯಲ್ಲಿ ತಂದೆ ತಾಯಿ ಸತ್ತು ಅವರ ಅಪರಕ್ರಿಯೆಗೆ ಹೋದನಾದರೆ ಅವನ ಪಾಲಿಗೆ ತುಷ್ಟಿ. ಅವನ ದಿನ ಸಂಬಳದ ದುಪ್ಪಟ್ಟು.

ತಂದೆ ಮಗ ನಾವಿಬ್ಬರೂ ಯಾವೊಂದು ಎಡರು ತೊಡರು ಇಲ್ಲದೆ ನಮ್ಮದೇ ಮೇಳವೆಂದು ಉಪ್ಪನ್ನವಿತ್ತು ಸಾಕಿದ ಧನಿ ಶಂಭು ಹೆಗ್ಗಡೆ ಬಂಧುಗಳಿಗೆ ಎರಡೆಣಿಸದೆ

ಮೇಳವನ್ನು ನಡೆಸುತ್ತಾ ಬಂದೆವು. ಹೆಗ್ಗಡೆಯವರೂ ಆಡಿದ ಮಾತಿನಂತೆ ನಾವು ಮೇಳದಿಂದ ನಿರ್ಗಮಿಸುವ ತನಕ ಸುಮಾರು ಮೂರು ವರ್ಷ ಯಾರು ಯಾರ ಮೇಲೆಲ್ಲಾ ಸವಾರಿ ಮಾಡಿದರೂ ನಮಗೆ ತಂದೆ ಮಗನಿಗೆ ಥೂ ಛೀ ಎಂದವರಲ್ಲ. ಯಾರು ಏನು ಊದಿದರೋ ಪತ್ತನಾಜೆಗೆ ಕೆಲವು ದಿನಗಳು ಇರುವಾಗ ಸುಮಾರು 1936ನೆ ಇಸವಿಯೆಂದು ನೆನಪು. ಕುಡಿದು ಮತ್ತೇರಿ ಚೌಕಿಗೆ ಬಂದವರು ವೇಷಕ್ಕೆ ಅಣಿಯಾಗುತ್ತಿದ್ದ ನನ್ನನ್ನು ಕರೆದೆಂದರು. 'ನಿನ್ನೆ ಕಲ್ಲಾಡಿ ಕೊರಗ ಶೆಟ್ಟಿ ನಿನ್ನನ್ನು ಕರೆದು ಏನು ಅಂದನು' ಎಂದು. ಹೌದು ಹಿಂದಿನ ದಿನ ಬಯಲಾಟ ನೋಡಲು ಬಂದಿದ್ದ ಕೊರಗ ಶೆಟ್ರು ನನ್ನ ವೇಷವನ್ನು ಕಂಡು ಮಾತುಗಾರಿಕೆಯನ್ನು ಕೇಳಿ ಮೆಚ್ಚಿ ಕಾಫಿ ಕೊಟ್ಟು ಹರಸಿ ಹೋಗಿದ್ದರು. ಅವರು ತಂದೆಯವರೊಡನೆ ಕೂಡಾ ಯೋಗಕ್ಷೇಮವನ್ನೂ ವಿಚಾರಿಸಿದ್ದರು. ಕೊರಗಶೆಟ್ಟರು ಸಾತ್ವಿಕ ಬಂಟನಾದರೆ ಹೆಗ್ಗಡೆಯವರು ತಾಮಸಿ ಬಂಟ. ಹೆಗ್ಗಡೆಯವರು 'ಗಟ್ಟಿಯಾದರೆ ರೊಟ್ಟಿ  ತೆಳುವಾದರೆ ತೆಲ್ಲಾವು 'ಎನ್ನುವ ಪ್ರಕೃತಿಯವರಾದರೆ ಶೆಟ್ಟರು 'ರೊಟ್ಟಿಗಾಗದುದು ಸುಟ್ಟು ಹೋಗಲಿ' ಎಂದು ಬಿಡುವರಲ್ಲದೆ ಏನಾದರೂ ಹೇಗಾದರೂ ಮಾಡಿ ತೆಲ್ಲಾವು ಹುಯ್ಯೋ ಜಾಯಮಾನದವರಲ್ಲ.

ಎದುರೆದುರಾದಾಗ ಶೆಟ್ಟರಿಗೂ ಹೆಗ್ಗಡೆಯವರಿಗೂ ತುಂಬು ಸ್ನೇಹ. ಹೊರಗಿನಿಂದ ಎಣ್ಣೆ ಸೀಗೆಯೆಂದು ಬಲ್ಲವರೇ ಬಲ್ಲರು. ಅವರಿಗಿಬ್ಬರಿಗೂ ಎಲ್ಲೋ ಜುಗಾರಿಯ ಕಳದಲ್ಲಿ ಹೊಯ್-ಕೈ ಮಾತುಕತೆ ನಡೆದಿರಬೇಕು. ಇದರಿಂದಾಗಿ ಹೆಗ್ಗಡೆಯವರು, ಶೆಟ್ಟರು ನಮ್ಮನ್ನು ಆಧರಿಸಿ ಮಾತಾಡಿದಕ್ಕೆ ಅಪಾರ್ಥ ಕಲ್ಪಿಸಿ ನಮ್ಮನ್ನು ತರಾಟೆಗೆ ತೆಗೆದುಕೊಂಡುದು. ಇದನ್ನು ತಿಳಿದ ತಂದೆಯವರೆಂದರು. ನೀವು ಈ ವಿಚಾರಕ್ಕೆ ಸಿಟ್ಟುಗೊಳ್ಳಬೇಕೆಂದಿಲ್ಲ. ಶೆಟ್ಟರು ಮಗುವಿನ ವೇಷಗಾರಿಕೆಯನ್ನು ಮೆಚ್ಚಿ ಅಭಿನಂದಿಸಿರುವುದು ಮಾತ್ರವೆಂದಾಗ- ಕ್ರೋಧತಪ್ತ ಹೆಗ್ಗಡೆಯವರಿಂದ ಹುಟ್ಟು ಭಾಷೆಯ ಕರ್ಣಕಠೋರ ಮಾತಿನ ಸರಮಾಲೆ ಹೊರಹೊಮ್ಮ ತೊಡಗಿತು. ಮಾನಕ್ಕಾಗಿ ಪ್ರಾಣವನ್ನೇ ಪಣಕ್ಕೊಡ್ಡುವ ತಂದೆಯವರು ಕಂಪಿಸತೊಡಗಿದರು. ಹೆಗ್ಗಡೆಯವರು ಇದನ್ನು ತಂದೆಯ ನಿರ್ಬಲತ್ವವೆಂದು ಕಂಡರೆ ತಂದೆಯವರ ಗುಣ ವಿಶೇಷವನ್ನು ಅರಿತ ನಾನು ತಂದೆಯವರು ಒರಗಿಸಿಟ್ಟ ಖಡ್ಗದತ್ತ ನೋಡುವುದನ್ನು ಕಂಡು ಕಣ್ಣೀರಿಳಿಸಿದೆ. ಇದನ್ನು ಅರ್ಥವಿಸಿಕೊಂಡ ತಂದೆಯವರು ಬಿಟ್ಟು ಕೊಡದೆ ಮಾತಿಗೆ ಪ್ರತಿಮಾತು ಎಸೆದೆಂದರು- 'ನಿಮಗೆ ನೀರು ಇಲ್ಲಿ ಮಾತ್ರ. ದೇವರ ದಯೆ ಹೊತ್ತ ನಾವು ಹೊರಟೆವೆಂದರೆ ನಮಗೆ ಹೋದಲೆಲ್ಲಾ ಯಥೇಚ್ಛ ಸ್ವಚ್ಛ ನೀರು ದೊರಯದಿರದು.'

ಅಂತೂ ಕದ್ರಿ ಮೇಳಕ್ಕೆ, ಮೇಳದ ಯಜಮಾನರಿಗೆ ಯಾವೊಂದು ತಪ್ಪು ಮಾಡದೆ ವಿದಾಯ ಹೇಳುವ ಪ್ರಮೇಯ ಆಯಾಚಿತವಾಗಿ ಬಂದೊದಗಿತು. ನಮಗೆ ತಂದೆ ಮಕ್ಕಳಿಗೆ ಯಾವೊಂದು ತುಷ್ಟಿಗೂ ನಾವು ಪಕ್ಕಾಗದವರಾದುದರಿಂದ ವರ್ಷಾಂತ್ಯಕ್ಕೆ ಮೂರು ನೂರು ರೂಪಾಯಿ ಸಂಬಳ ಬರುವುದಿತ್ತು. ಇನ್ನೂ ಮಳೆ ಬಾರದಿದ್ದರೆ ಪತ್ತನಾಜೆಗೆ 10 ಆಟಗಳಿವೆ. ನಮ್ಮ ಒಳಿತಿನಿಂದಾಗಿ ಅಲ್ಲಲ್ಲಿನ ಹತ್ತು ಆಟಗಳ ವೀಳ್ಯವನ್ನೂ ಪಡೆದಾಗಿತ್ತು. ಹೆಗ್ಗಡೆಯವರು ಕುಡಿದ ಮತ್ತಿನಲ್ಲಿ ಇಂದಿಗೆ ಇಲ್ಲಿ ನಿಮ್ಮ ನೀರು ಮುಗಿಯಿತೆಂದರೆ ದಿಢೀರನೆ ನಾವು ಮೇಳ ಬಿಟ್ಟೋಡಿದರೆ ಮೇಳಕ್ಕೆ ಅಪಖ್ಯಾತಿ

ಮಂಜುನಾಥೇಶ್ವರನಿಗೆ ದ್ರೋಹ ಬಗೆದಂತೆ. ಕಲಾಶಾರದೆಗೆ ಎರಡೆಣಿಸಿದಂತೆ. ನಾವು ವರ್ಷದ ಆದಿಯಲ್ಲಿ ಗೆಜ್ಜೆ ಕಟ್ಟುವಾಗ ಪ್ರಾರ್ಥಿಸಿಕೊಂಡಿಲ್ಲವೇ...? ಸ್ವಾಮಿ ಮಂಜುನಾಥ– ದೇವಿ– ಕಲಾ ಶಾರದೇ– ಈ ವರುಷ ನಮಗೆ ಯಾವ ಎಡರು ತೊಡರು ಕಾಯಿಲೆ ಕಸಾಲೆಯನ್ನು ತಡೆದು ಹಿಡಿದೆಯಾದರೆ ನಿನ್ನ ಸೇವೆಗಾಗಿ ಕಾಯಾವಾಚಾ ಮನಸಾ ದುಡಿಯುವೆವೆಂದು. ಅಂತೆಯೇ ಯಜಮಾನರು ಸಂಬಳ ಕೊಡಲಿ ಬಿಡಲಿ, ವಚನ ಬದ್ಧರಾದಂತೆ ಕದ್ರಿ ಮೇಳದಲ್ಲಿ ವರ್ಷಪೂರ್ತಿ ಮಾಡುವುದೆಂದು ತಂದೆ ಮಕ್ಕಳು ನಿಶ್ಚಯಕ್ಕೆ ಬಂದು ಮುಂದಿನ ದುಡಿಮೆಗೆ ಅಣಿಯಾದೆವು.

ಪತ್ತನಾಜೆಗೆ ಗೆಜ್ಜೆ ಬಿಚ್ಚಿದೆವು. ಸಂಬಳವನ್ನು ಕೇಳಿದಾಗ ಹೆಗ್ಗಡೆಯವರೆಂದರು "ರಾಮಯ್ಯನಿಗೆ ತೋಡಾ ತೊಡಿಸಿರುವೆವು. ಅದನ್ನು ಬಿಚ್ಚಿಟ್ಟು ಹೋಗಿ. ನಿಮ್ಮ ಸಂಬಳದ ಮೂರು ಕಾಸನ್ನು ಎಸೆಯುತ್ತೇನೆ" ಎಂದಾಗ ತುಳು ಗಾದೆಯಂತೆ 'ಸೂಳೆಗೂ ಪೋಪಿ ಅಂಗರಗ್ ದೆತ್ತಿಯೋ ದೇವಿಯೋ' ಎಂದಂತೆ ತಂದೆಯವರು ಹೆಗ್ಗಡೆಯವರ ಮೇಲೆ ನಿರ್ದಾಕ್ಷಿಣ್ಯವನ್ನು ತೋರೆದು "ನಾವು ಅತ್ತು ಕರೆದು ಮಗುವಿಗೆ ನಿಮ್ಮಿಂದ ತೋಡಾ ತೊಡಿಸಿಕೊಂಡುದಲ್ಲ. ನಿಮ್ಮ  ಘನ ಮನೆತನದವರು ಮೆಚ್ಚಿ ನೂರಾರು ಮಂದಿಯ ಇದಿರಿನಲ್ಲಿ  ಹಾಕಿದ್ದು. ಅದು ಮಗುವಿನ ಕೈಯ್ಯಲ್ಲಿ ಆ ನೂರಾರು ಜನರ ಪ್ರಸಾದವಾಗಿ ಇರಲಿ. ನೀವು ಮಾತ್ರ ನಾವು ಬೆವರು ಸುರಿಸಿ ದುಡಿದುದನ್ನು ತಿಂದು ಉದ್ಧಾರವಾಗಿ" ಎಂದಾಗ ಹೆಗ್ಗಡೆಯವರು ಕುಳಿತಲ್ಲಿಂದಲೇ ಗುರ್‍ರೆಂದರು. ತಂದೆಯವರು ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ನನ್ನೊಂದಿಗೆ ಬರಿಗೈಯ್ಯಲ್ಲಿ ಮನೆಗೆ ಹಿಂದಿರುಗ ಬೇಕಾಯಿತು. ಬಂದ ಹಾಗೆ ಹಿಂದಿರುಗು ಸುಬ್ಬರಾಯ.

ಮಳೆಗಾಲ. ಮನೆಯವರಿಗೆಲ್ಲಾ ನಮ್ಮ ಕುಲ ಕಸುಬು ಕೃಷಿ ಕೆಲಸ. ಅಪ್ಪನೂ ಇವರೊಂದಿಗೆ ದುಡಿಯಲು ಹಿಂಜರಿಯುವವರಲ್ಲ. ಆದರೆ ನಾನೂ ಈ ಹವ್ಯಾಸವನ್ನು ಎಳವೆಯಲ್ಲೇ ಬಿಟ್ಟವ. ಇದರೊಂದಿಗೆ ತಂದೆಯವರಿಗೆ ನಾನು ಯಕ್ಷಗಾನ ಕಲೆಯನ್ನು ಪರಿಪೂರ್ಣವಾಗಿ ಅರಿತ ಸರ್ವಾಂಗ ಸುಂದರ ಕಲಾಗಾರನಾಗಬೇಕೆಂಬ ಹೆಬ್ಬಯಕೆ. ನನ್ನ ಕಂಠವು ಮಧುರವಾದುದಲ್ಲವಾದರೂ, 'ಉಗುಳಿ ಉಗುಳಿ ರೋಗ ಬೊಗಳಿ ಬೊಗಳಿ ರಾಗ' ಎಂಬ ಗಾದೆಯಂತೆ ನಾನು ಯಕ್ಷಗಾನ ಹಾಡು ಕಲಿಯಲೇ ಬೇಕೆಂಬ ಒತ್ತಾಯ. ಹಾಡುವಿಕೆಗಲ್ಲವಾದರೂ ಪದ್ಯವನ್ನು ಅರ್ಥವತ್ತಾಗಿ ವಿಂಗಡಿಸಿ ಅರ್ಥ ಹೇಳುವುದಕ್ಕೆ ಅನುಕೂಲ. ತಾಳವರಿತರೆ ಶಾಸ್ತ್ರೀಯ ರೀತಿಯಲ್ಲಿ ಕುಣಿತಕ್ಕೆ ಎಡೆ. ಚಂಡೆ– ಮದ್ದಲೆಯರಿತರೆ ಕುಣಿತದ ಹೆಜ್ಜೆಗೆ ಗತ್ತು ಸಿಕ್ಕುವುದು. ಕುಣಿತದ ಮುಕ್ತಾಯದ ಗುಟ್ಟು ಅರಿತಂತೆ ಎಂಬುದರಿಂದ ನನ್ನನ್ನು ಆ ವರುಷ ಹಿರಿಯ ಭಾಗವತರೂ ಪೂಜ್ಯ ಗುರುಗಳೂ ಆದ ಮವ್ವಾರು ಭಾಗವತರಲ್ಲಿಗೆ ಭಾಗವತಿಕೆ ಕಲಿಯಲು ಕಳುಹಿಸಿಕೊಟ್ಟರು. ನನಗಾಗ ಪ್ರಾಯ ಸುಮಾರು 19–20. ಮವ್ವಾರು ಭಾಗವತರು ಆಗ ಕಟೀಲಿನ ನೆರೆಯ ಕೈಯ್ಯೂರು ಶ್ಯಾಮರಾಯರೆಂಬವರಲ್ಲಿ ಅವರ ಮಕ್ಕಳಿಗೆ ಯಕ್ಷಗಾನ ಹಾಡುಗಾರಿಕೆ ಚಂಡೆ ಮದ್ದಳೆ ಕಲಿಸಿಕೊಡಲು ಅಲ್ಲಿ ತಂಗಿದ್ದರು. ಶ್ಯಾಮರಾಯರ ಪತ್ನಿ ರಾಜಮ್ಮ ಎಂಬವರು ಮಾತೃ ಹೃದಯವೇ ಮೂರ್ತಿವೆತ್ತಂತಿದ್ದ ಸ್ಫುರದ್ರೂಪಿ ಮುತ್ತೈದೆ. ತುಂಬು ಸಂಸಾರ ಮಕ್ಕಳು ಮರಿಗಳಿಂದ ಕೂಡಿದರೂ ಮನೆಯಲ್ಲಿ ಈ ತಾಯಿ ಪ್ರತ್ಯಕ್ಷ ಅನ್ನಪೂರ್ಣೆ.

ಕರ್ಮಠ ಬ್ರಾಹ್ಮಣರ ಮನೆ. ನನ್ನ ತಂದೆಯವರನ್ನು ಅತಿಯಾಗಿ ಮೆಚ್ಚಿದ್ದ ಮನೆಯ ಯಜಮಾನ ಶ್ಯಾಮರಾಯರು ಶೂದ್ರನೆಂದು ಆ ಕಾಲದಲ್ಲಿ ಪರಿಗಣಿಸಲ್ಪಟ್ಟಿದ್ದ ನನ್ನನ್ನು ಅನಿವಾರ್ಯ ದಾಕ್ಷಿಣ್ಯದಿಂದ ಅವರ ಮನೆಯಲ್ಲಿ ಉಂಡು ಕಲಿಯಲು ಒಪ್ಪಿದ್ದರು. ಅನ್ನಪೂರ್ಣೆ ರಾಜಮ್ಮ ಶೂದ್ರ ಗೀದ್ರತನವನ್ನು ಗಣನೆಗೆ ತೆಗೆದುಕೊಳ್ಳದೆ ತನ್ನ ಹತ್ತು ಮಕ್ಕಳೊಡನೆ ಹನ್ನೊಂದನೆಯವ ಅದೇನು ಹೆಚ್ಚೆಂದು ನನ್ನನ್ನು ತುಂಬು ಹೃದಯದಿಂದ ಸ್ವಾಗತಿಸಿದ್ದರು. ಅವರ ಮನೆ ಮಕ್ಕಳಿಗಿಂತ ನನ್ನ ಬಾಯಿ ಚಲಾಕು, ಕೈ ಚಲಾಕು... ಈ ಎಲ್ಲ ವಿಷಯಗಳಲ್ಲಿ ನಾನೇ ಮಿಗಿಲು. ಮನೆ ಮಕ್ಕಳೆಲ್ಲಾ ನನಗಿಂತ ಕಿರಿಯರು. ಅವರಿಗೆಲ್ಲರಿಗೂ ನಾನು ಮೆಚ್ಚಿನ ರಾಮಣ್ಣ. ಗುರುಗಳು ಪಾಠ ಹೇಳಿ ಅಭ್ಯಾಸಕ್ಕೆ ಬಿಟ್ಟ ನಂತರ ಈ ಮಕ್ಕಳೆಲ್ಲಾ ನನಗೆ ಸುತ್ತುಹಾಕಿ ನನ್ನನ್ನು ದಿನಕ್ಕೆ ಎರಡು ಮೂರು ಘಂಟೆಯಾದರೂ ಕುಣಿಸದೇ ಬಿಡುತ್ತಿರಲಿಲ್ಲ. ಇದು ನನಗೆ ನನ್ನ ಹಾಡುಗಾರಿಕೆ ಕಲಿಕೆಯೊಂದಿಗೆ ತಾಲೀಮು ಕೂಡಾ. ಇದೆಲ್ಲವನ್ನೂ ಆ ತಾಯಿಯು ತನ್ನ ಬಿಡುವಿಲ್ಲದ ಕೆಲಸದೆಡೆಯಿಂದ ಮೆಚ್ಚಿ ನೋಡುವ ನೋಟ ನನಗೆ ಆಪ್ಯಾಯಮಾನ. ನಾನು ಈಗ ಈ ಮನೆಯಲ್ಲಿ ಶೂದ್ರನಲ್ಲ. ಮನೆಯವನೇ ಆದರೂ ತಂದೆಯವರು ನನ್ನನ್ನು ಅಲ್ಲಿಬಿಟ್ಟು ಹೋಗುವ ದಿನ ಉಂಡೆಡೆಯನ್ನು ಶುದ್ಧಿ ಮಾಡಬೇಕು. ಗೋಮಯ ಹಾಕಬೇಕು ಕೂತ ಮಣೆಯನ್ನು ಎತ್ತಿ ಇಡದೆ ಹೋಗಬಾರದು. ಅವರವರ ಎಂಜಲನ್ನು ಅವರವರೇ ಎತ್ತಬೇಕೆಂಬುದು ಶಾಸ್ತ್ರ. ಉಂಡವನ ಎಂಜಲನ್ನು ತೊಳೆಯುವ ಹಕ್ಕು ಹೆತ್ತ ತಾಯಿಗೆ ಒಡ ಹುಟ್ಟಿದ ಅಕ್ಕ ತಂಗಿಯರಿಗೆ ಮತ್ತೆ ಕೈ ಹಿಡಿದಾಕೆಗೆ ಹೊರತು ಇತರರಿಂದ ಅದನ್ನು ನಾವು ಮಾಡಿಸಿದೆವಾದರೆ ಪಾಪಕ್ಕೆ ಪಕ್ಕಾಗಬೇಕು. ಅತಿಥಿ ದೇವೋಭವ ಎಂಬ ವೇದವಾಕ್ಯದ ಅರ್ಥವೇನೆಂದರೆ ಯಾವಾತನೂ ಅತಿಥಿಯನ್ನು ದೇವರೆಂದು ಆಹ್ವಾನಿಸಿ ಸಮ್ಮಾನಿಸುವನೋ ಆತನ ಎಂಜಲನ್ನು ಪ್ರಸಾದವೆಂದು ಆತಿಥೇಯನು ಶುದ್ಧಿಗೊಳಿಸಬಹುದು ಎಂದು ಏನೇನೋ ಅವರ ಅಪಾರ ಅನುಭವಜನ್ಯ ಮಾತುಗಳನ್ನು ನನ್ನೊಡನೆ ಅಂದು ಹೇಳಿ ಹೋಗಿದ್ದಾರೆ. ಅಲ್ಲಿ ಉಂಡವ ಈ ನಿಯಮಕ್ಕೆ ಕಿಂಚಿತ್ತೂ ಊನ ಬರದಂತೆ ನಡೆದು ಆ ತಾಯಿಯ, ಮನೆಯವರ ಕೃಪೆ, ಮಮತೆಗೆ ಈಡಾಗಿದ್ದೆ.

ನಾನು ಕಲಿಯುವುದರಲ್ಲಿ ತುಂಬಾ ಚುರುಕಾಗಿದ್ದ ಕಾರಣ ಭಾಗವತರು ಹೇಳಿಕೊಟ್ಟಂತೆ ತೆರೆ ಪರ್ಪಾಟು, ತೆರೆಕಲಾಸು, ಒಡ್ಡೋಲಗ ಇದಕ್ಕೆ ಮೊದಲ ಬಾಲಗೋಪಾಲ ಸ್ತ್ರೀ ವೇಷ ಕುಣಿದು ಕುಣಿಸುವುದನ್ನು ಅರಿತು ಮುಂದಿನ ಒಂದೆರಡು ಪ್ರಸಂಗಗಳನ್ನು ತಾಳಲಯ ಬದ್ಧವಾಗಿ ಕಲಿತು ಇತರ ಪ್ರಚಾರದಲ್ಲಿದ್ದ ಪ್ರಸಂಗಗಳನ್ನು ಕಂಠಪಾಠ ಮಾಡಿ ಹಾಡು ಕಲಿತೆ. ಕಲಿಸಿದ ಗುರುಗಳಿಗೂ ತೃಪ್ತಿ ,ಅನ್ನವಿಟ್ಟು ನಾಲ್ಕು ತಿಂಗಳು ಮನೆ ಮಗನಂತೆ ನೋಡಿದ ಅನ್ನದಾತರಿಗೂ ತೃಪ್ತಿ.

ಇದರೆಡೆಯಲ್ಲಿ ನರಕಚತುರ್ದಶಿ. ನಮ್ಮ ತುಳುವರ ಪರ್ಬವೂ ಬಂತು. ನರಕ ಚತುದರ್ಶಿಯಂದು ಮೊದಲ ರಾತ್ರಿಯಂದು ಬಚ್ಚಲ ಕೊಟ್ಟಿಗೆಯನ್ನು ಒಪ್ಪ ಓರಣ ಮಾಡಿ ಬಿಸಿ ನೀರ ಹಂಡೆಯನ್ನು ಸಿಂಗರಿಸಿ ಹಂಡೆ ತುಂಬಾ ನೀರು ತುಂಬಿಸಿ ಉರಿಯಿಕ್ಕಿ ಕುದಿಯುವ ನೀರನ್ನು ಬೇರೆ ಮಂಡೆಗಿಕ್ಕಿ ಮೀಯುವ ಹದಕ್ಕಿಳಿಸಿ ಮನೆ ಮಂದಿಗೆ ಮಕ್ಕಳು ಎಷ್ಟೇ ದೊಡ್ಡವರಿರಲಿ ಮದುವೆಯಾಗುವವರೆಗೆ ತಾಯಿಯು

ಪಾಡತುಂಬಿ ಎಣ್ಣೆಯನ್ನು ತಲೆಗೆರೆದು ಮೈಗೆ ಪೂಸಿ ಹಬೆ ಏಳುವ ಬಿಸಿ ನೀರೆರೆದು ಮೈ ಕೆಂಪೇರುವತನಕ ನೀರೆರೆಯುವುದು ಪದ್ಧತಿ. ಗಂಡನಿಗೆ ಹೆಂಡತಿ ಈ ಉಪಚಾರ ಮಾಡಿದರೆ ಹೆಂಗಸರು ನಾದಿನಿ ಅತ್ತಿಗೆಯರೂ ಈ ಕರ್ಮಕ್ಕೆ ಕಿಂಚಿತ್ತೂ ಲೋಪ ಬರದೆ ನಡೆಯಬೇಕಾದುದು ಪದ್ಧತಿ, ರೂಢಿ.

ಈ ಮನೆ ಮಕ್ಕಳಿಗೆ ಇದಕ್ಕೆಲ್ಲಾ ಅವರ ಮನೆಯಲ್ಲಿ ತಕ್ಕ ಅನುಕೂಲವಿದೆ. ನನಗಾದರೆ ಇಲ್ಲೆಲ್ಲ ಹೆತ್ತು ಹೊತ್ತ ಅಪ್ಪ ಅಮ್ಮ ಇಲ್ಲವಲ್ಲ. ಅವರ ಈ ವೈಭವಯುತ ಸೌಭಾಗ್ಯವನ್ನು ಕಂಡು ನಾನು ಮನದಲ್ಲಿ ಬೆಂದು ಮ್ಲಾನವದನನಾಗಿದ್ದೆ. ಮನೆಯ ನೆನಪಾಗಿ ನನಗರಿವಿಲ್ಲದಂತೆ ಕಣ್ಣೀರು ತೊಟ್ಟಿಕ್ಕಿತು.

ಹಿಂದೆಯೆಲ್ಲ ಮನೆ ಮಕ್ಕಳಿಗಿಂತ ಉಲ್ಲಸಿತನಾಗಿ ತಿರುಗುತ್ತಿದ್ದ ನನ್ನ ಪೇಲವತೆಯನ್ನು ಕಂಡ ತಾಯಿ ಹೃದಯ ಈ ಸಾಕುಮಗನ ತಬ್ಬಲಿತನವನ್ನು ಅರ್ಥವಿಸಿಕೊಂಡಿತು. ಮಾತೃ ಹೃದಯ ಮಾತೃದೇವೋಭವ ಎಂದು ಇದನ್ನು ಕಂಡಲ್ಲವೇ ಶಾಸ್ತ್ರಗಳು ತಾಯಿ ದೇವರೆಂದು ವೇದ ಬಾಯ್‌ಬಿಟ್ಟು ಹೇಳುತಿಹುದು ಎಂದು ಹಾಡಿ ಹೊಗಳಿದುದು. ಇಬ್ಬರು ಮಕ್ಕಳ ಸ್ನಾನ ಮುಗಿದಿತ್ತು. ಆ ತಾಯಿ ಅವರಿಗೆ ಎರೆದು ಸುಸ್ತಾಗಿ ವಿಶ್ರಾಂತಿಗಾಗಿ ಎತ್ತಿಕಟ್ಟಿದ್ದ ಸೀರೆಯನ್ನು ಇಳಿಬಿಟ್ಟು ನನ್ನತ್ತ ನೋಡಿದವರು 'ರಾಮನೇನು ಸೂರು ನೋಡುವೆ ಜಳಕ ಮಾಡುವ ಯೋಚನೆಯಿಲ್ಲವೇ... ? ಇಲ್ಲಿ ಬಾ ಎಣ್ಣೆ ತಟ್ಟುವೆ. ಬಿಚ್ಚು ಅಂಗಿ, ಮುಂಡನ್ನು ಮೂಲೆಯಲ್ಲಿಡು' ಎಂದು ಎಣ್ಣೆಯ ಗಿನ್ನಕ್ಕೆ ಕೈ ಚಾಚುತ್ತಿದ್ದಾಗ ನಾನು ನಾಚಿ ನೀರು. ಇದನ್ನು ಕಂಡ ಅವರು ರೋಸಿ ನುಡಿದರು. ಏನು ಮೀಸೆ ಮೊಳೆತರೂ ದೇಶವನ್ನಾಳಿದರೂ ತಾಯಿಗೆ ಮಗನೇ ಹೊರತು ಬೇರೆಯಲ್ಲ. ಹುಂ ಬಟ್ಟೆ ಬಿಚ್ಚು ಈಗ ಎಣ್ಣೆಯಿಡುವೆ. ಇವರ ಸ್ನಾನವೆಲ್ಲಾ ಆದ ನಂತರ ಹಿರಿಯಣ್ಣ ನಿನ್ನ ಜಳಕ ಎಂದವರೇ ಅಂಗೈಗೆ ಅರೆಕುಡುತೆ ಎಣ್ಣೆ ಹಾಕಿ ಸ್ತ್ರೀ ವೇಷಕ್ಕೆ ಅಣಿ ಮಾಡಿದ ತಲೆ ಸೂಡಿಯನ್ನು ಬಿಚ್ಚಿ ಬೈತಲೆ ಬಗೆದು ಪದಪು ಮುಟ್ಟಿ ಮೂರುಸಲ ನನ್ನ ನೀಳ ಕೂದಲ ರಾಶಿಗೆ ಎಣ್ಣೆಯಿಟ್ಟು ತಟ್ಟಿ ತನ್ನ ಹೆತ್ತ ಮಕ್ಕಳಿಗೆ ಪೂಸಿ ಎರೆದಂತೆಯೇ ನನಗೂ ಎರೆದು ಒಣಗು ಬೈರಾಸಿನಲ್ಲಿ ನನ್ನ ಜಡೆಯ ಕೂದಲನ್ನು ತಿಕ್ಕಿ ಮಗಳಿಗೆ ಈ ಸೋಮ್ಮುಡಿಯಿರಬೇಕಿತ್ತೆಂದು ನನ್ನ ಕೂದಲ ರಾಶಿಯನ್ನು ಹೊರಳಿಸಿ, ಹೊರಳಿಸಿ ಉಜ್ಜಿದ ರಭಸಕ್ಕೆ ಮತ್ತು ಮಿಂದ ನೀರ ಬಿಸಿಗೆ ಮೈ ಬೆವರಿದಾಗ ಹೊಟ್ಟೆ ಚುರುಗುಟ್ಟ ತೊಡಗಿತು.

ಮಿಂದು ಬಂದಿದ್ದ ಹೆಣ್ಣುಮಕ್ಕಳಿಗೆ; ನಮಗೆ, ಕೊಟ್ಟಿಗೆ ಸಾಂಬಾರು ಸಿಹಿ ಹಾಲು ಬಡಿಸುವಂತೆ ಆದೇಶವಿತ್ತು ನಾವು ಇಹವನ್ನು ಮರೆತು ನಕ್ಕು ನಲಿದು ಫಲಾಹಾರದ ಮಧ್ಯೆ ಹುದುಗಿದ್ದಾಗ ಆ ಪೂಜ್ಯ ಮಾತಾ ಪಿತರು ಮೀಯಲಿಕ್ಕೆ ಇಳಿದವರಲ್ಲಿ ಹಿರಿಯರು ಹೆಂಡತಿಯೊಡನೆ ವಿಚಾರಿಸುವದು ಕೇಳಿತು. 'ರಾಮನ ಜಳಕವಾಯಿತೇ...?' ಎಂದಾಗ ಆ ತಾಯಿ ಅಂದರು – 'ಅವನ ಜಳಕವಾಗದೆ ಅವರು ಫಲಾರ ಕೊಡುವದೇನು... ? ಎಲ್ಲರೊಂದಿಗೆ ಅವನಿಗೂ ಎಣ್ಣೆ ಹಚ್ಚಿ ಬಿಸಿ ನೀರು ಎರೆದೆ. ಬಹುಶಃ ಅವರ ಮನೆಯಲ್ಲಿ ಇಷ್ಟು ಬಿಸಿ ನೀರು ಎರೆಯುತ್ತಿದ್ದಿಲ್ಲವೇನೋ, ಹುಡುಗ ಮಿಂದು ಮೇಲೆ ಬರುವಾಗ ಹದ ಕಾದ ನೀರುಳ್ಳಿಯಂತೆ ಕೆಂಪು ಕೆಂಪಾಗಿದ್ದ' ಎಂದುದನ್ನು ಕೇಳಿ ಆ ಮಾತೃ

ಹೃದಯಕ್ಕೆ ಹೃತ್ಪೂರ್ವಕ ನಮೋ ಎಂದೆ. ಇದನ್ನು ನೆನೆದು ಬಾಯಿಗೆ ಹೋಗಬೇಕಾದ ತುತ್ತು ಮೂಗಿಗೆ ತಾಗಿತ್ತು.

1939ರ ಆಟ ಪ್ರಾರಂಭಕ್ಕೆ ಕಲ್ಲಾಡಿ ಕೊರಗ ಶೆಟ್ಟರು ಮತ್ತು ಚೆರ್ಕಳ ದಾಸು ಮಾಡರು ಕಟೀಲು ಮೇಳವನ್ನು ವಹಿಸಿಕೊಂಡಾಗಿತ್ತು. ಅವರ ನೆವನದಿಂದಲೇ ನಮ್ಮನ್ನು ಶಂಭು ಹೆಗ್ಗಡೆಯವರು ಕದ್ರಿ ಮೇಳದಿಂದ ಬಿಟ್ಟುದೆಂಬ ವದಂತಿ ಶೆಟ್ಟರಿಗೆ ಮುಟ್ಟಿತ್ತು. ಸಾತ್ವಿಕ ಸ್ವಭಾವದ ವ್ಯವಹಾರ ತಜ್ಞ ಕೊರಗ ಶೆಟ್ಟರು ತಂದೆಯವರನ್ನು ಕರೆದು ಕದ್ರಿ ಮೇಳಕ್ಕೆ ನೀವು ಹೋಗುವುದಿಲ್ಲವಾದರೆ ಕಟೀಲು ಮೇಳದ ಬಾಗಿಲು ನಿಮಗೆ ಸದಾ ತೆರೆದಿದೆ. ಅಲ್ಲಿಗೆ ಹೋಗುವುದಿದ್ದರೆ ಆಕ್ಷೇಪವಿಲ್ಲ ಎಂದು ಉದಾರಾಂತಃಕರಣದ ಆಶ್ವಾಸನೆಗೆ ತಂದೆಯವರು ನಮಗೆ ಕದ್ರಿ ಮೇಳದಿಂದ ಗತ ವರ್ಷದ ಆರು ನೂರು ರೂಪಾಯಿಗೂ ಮಿಕ್ಕಿದ ದುಡಿತದ ಸಂಬಳ ಬರಲಿದೆ. ಅದನ್ನು ಕೊಡಲೇನು ಅಡ್ಡಿ ಹೇಳುವರೆಂದು ತಿಳಿದ ನಂತರ ನಿಮಗೆ ನಿಮ್ಮ ಮೇಳಕ್ಕೆ ಬರುವ ಬಿಡುವ ಆಶ್ವಾಸನೆ ಎಂದರು.

ಯಾರಿಂದಲೋ ಹೆಗ್ಗಡೆಯವರೊಂದಿಗೆ ನಮಗೆ ಬರುವ ಹಣದ ಪ್ರಸ್ತಾಪ ಮಾಡಿದಾಗ ಆತ ಕೊಡುವ ಮಾತು ಒತ್ತಟ್ಟಿಗಿರಲಿ, ರಾಮಯ್ಯನ ತೋಡವನ್ನು ಬಿಚ್ಚಿ ತರುವ ದಿನವನ್ನು ಕಾಯುತ್ತಿರಲಿ. ಅವರನ್ನು ಬೇರೆ ಮೇಳಕ್ಕೆ ಸೇರಿಸಿ ಆಟವಾಡಿಸುವ ಗಂಡುಯಾರೆಂದು ನೋಡುವೆ. ತೋಡವಿಟ್ಟ ರಾಮಯ್ಯನ ಕೈ ಕಡಿಯುವೆ. ಅವನಪ್ಪ ಮೋನು ಶೆಟ್ಟಿಯ ಸೊಂಟ ಮುರಿಸುವೆ. ಯಾರು ಅವರನ್ನು ಇನ್ನು ಮೇಳಕ್ಕೆ ಕರೆಯುವರು...? ಆ ಕಲ್ಲಾಡಿ ಕೊರಗ ಶೆಟ್ಟಿಯೇನು ದುರ್ಗಾಪರಮೇಶ್ವರಿಯ ಒಡೆಯನೇ...? ಅವನು ಕರೆಯಬೇಕು... ಈ... ಮಕ್ಕಳನ್ನು ವೇಷ ಹಾಕಿಸಬೇಕು. ಅವನ ದುರ್ಗಾಪರಮೇಶ್ವರಿಯನ್ನು ನನ್ನ ಮಂಜುನಾಥನಿಂದ ಹಿಡಿಸಿ ಸೀರೆ ಎಳೆಸಿ ಮಾರ್ಗ ಮಧ್ಯದಲ್ಲಿ ಬೋರು ಬೆತ್ತಲೆ ಮಾಡಿ ಓಡಿಸದಿದ್ದರೆ ನಾನು ಕೊಡಿಯಾಲಗುತ್ತಿನಲ್ಲಿ ಹುಟ್ಟಿದವನೇ ಅಲ್ಲವೆಂದು ಅಟ್ಟಹಾಸ ಕೊಟ್ಟಾಗ ನಾನು ಮೂಗನಾಗಿ ಪಕಮಕನೆ ಸೂರು ನೋಡಿದರೆ, ತಂದೆಯವರು ಕೊರಗ ಶೆಟ್ಟರೂ ಕುಡುಕನ ಮಾತು. ಹುಟ್ಟು ಗುಣವಾಗಿ ಬಂದ ಅಬ್ಬರ 'ಕರುವಿನ ಸೆಗಣಿ ಶುದ್ಧಕ್ಕೂ ಬೇಡ, ಮದ್ದಿಗೂ ಆಗದು' ಎಂದು ಗಹಗಹಿಸಿ ನಕ್ಕರು.

ನನಗೋ ತುಂಬಾ ಹೆದರಿಕೆ. ತಂದೆಯವರು ಇದಾವುದಕ್ಕೂ ಸೊಪ್ಪು ಹಾಕುವವರಲ್ಲ. ಇದರ ಜೊತೆಗೆ ಶೆಟ್ಟರ ಆಶ್ವಾಸನೆ 'ನನ್ನ ಮೇಳದಲ್ಲಿ ನಿರ್ಭೀತಿಯಿಂದ ವೇಷ ಮಾಡಿ ಯಾರಿಂದ ಏನು ಬರುವುದೆಂದು ನಾನು ನೋಡುವೆ. ನಿಮ್ಮ ರೋಮ ಕೊಂಕದಂತೆ ನೋಡುವ ಹೊಣೆ ನನಗೆ' ಎಂದಾಗ ತಂದೆಯವರಂತೆಯೇ ನಾನೂ ಧೈರ್ಯಗೊಂಡು ಶ್ರೀ ಕಲ್ಲಾಡಿ ಕೊರಗಪ್ಪ ಶೆಟ್ಟರ ಹಿರಿತನದಲ್ಲಿ ಪದದಪ್ಪಿದೊಡಂಕವಿ ತಾಂ ಪದಂಗೆಡದೆರಸದ ಸೋನೆಯಂ ಭಾಗವತರ್ ಪದನರಿದು ಕರೆದು ಸಭೆಗಂ ಸೊದೆಯೂಡಿದ ಬಿಲಿಪಿ ಬಲ್ಮೆಯ ಬಣ್ಣಿಪರಾಂಯೆಂದು. 1930ರ ಹೊತ್ತಿಗೆ ಜಿಲ್ಲಾ ವಿದ್ಯಾಧಿಕಾರಿಯಾದ ತ್ರಿಭಾಷಾ ಪಂಡಿತ ಆರ್. ತಾತಾಚಾರ್ಯರಿಂದ ಹೊಗಳಿಸಿಕೊಂಡು, ಅನ್ನಪೂರ್ಣೆ ಮಹಾತಾಯಿ ಕಟೀಲು ಶ್ರೀ ದುರ್ಗಾಪರಮೇಶ್ವರಿಯ ಕುಂಕುಮಪ್ರಸಾದ ಹಣ್ಣುಕಾಯಿ ಪಡೆದು

ಮಗದೊಮ್ಮೆ ಇಲ್ಲಿ ಶಾಶ್ವತ ವೇಷಧಾರಿಯಾಗಿ ಮೆರೆಯಲು ಪ್ರಸಾದ ಪಡೆದೆ.

ಇಲ್ಲಿ ಕೆಲವು ಬೈಲಾಟಗಳು ನಡೆದವು. ಕಟೀಲು ಮೇಳವು ಕೊರಗ ಶೆಟ್ಟರ ಆಡಳಿತಾಧಿಕಾರಕ್ಕೆ ಬಂದ ನಂತರ ಬೈಲಾಟದ ಸ್ವರೂಪವೇ ಬದಲಿ, ಬದಲೊಂದು ಘಟ್ಟಕ್ಕೆ ನಾಂದಿಯಿಕ್ಕಿತು. ಶೆಟ್ಟರು ಮೇಳದಲ್ಲಿ ದುಡಿಯುವವರಿಗೆ ಕಾಲ ಕಾಲಕ್ಕೆ ಸರಿಯಾಗಿ ಸಂಬಳ ಬಟವಾಡೆ ಮಾಡಿ ಮೇಳದಲ್ಲಿ ಅನೂಚಾನವಾಗಿ ಬಂದ ತುಷ್ಟಿಯನ್ನು ಮನ್ನಾ ಮಾಡಿ ಮೇಳದಲ್ಲಿ ಶಿಸ್ತಿಗೆ ಅಗ್ರಸ್ಥಾನವನ್ನು ನೀಡಿದರು. ಆದರೂ ಆಟಕ್ಕೆ ಒಂದೆಡೆಯಿಂದ ಮತ್ತೊಂದೆಡೆಗೆ ಹತ್ತು ಹದಿನಾರು ಮೈಲು ನಡೆದೇ ಹೋಗಬೇಕು. ಸಾಮಾನು ಸರಂಜಾಮು ಸಾಗಬೇಕು. ವೀಳ್ಯದಾಟಕ್ಕೆ ಯಾರೂ ಸಿಗದಿದ್ದಾಗ ಹೋದಲ್ಲಿ ಅತ್ತು ಕರೆದು ಕಾಡಿ ಬೇಡಿ ಎಂಬಂತೆ ದಮ್ಮಯ್ಯ ಗುಡ್ಡೆ ಹಾಕಿ ಅಂದಿನ ಆಟದ ಯೋಜನೆ ಮಾಡಬೇಕು.

ಈ ಕಾಲ ಬಯಲಾಟವು ಜನಪ್ರಿಯತೆ ಪಡೆದಿತ್ತು. ಸುಪ್ರಸಿದ್ಧ ವೇಷಧಾರಿಗಳು, ಅಪ್ರತಿಮ ಭಾಗವತರು, ನುರಿತ ಹಾಸ್ಯಗಾರ ಚಂಡೆಮದ್ದಳೆಯವರಿದ್ದರೆ ಆ ಆಟಕ್ಕೆ ಜನ ಸಂದಣಿ ಮುಕುರಿ ಬೀಳುತ್ತಿತ್ತು. ಇದನ್ನರಿತ ಕೊರಗ ಶೆಟ್ಟರು ತಂದೆಯವರ ಮುಂದೆ ಒಂದು ಯೋಜನೆಯನ್ನು ಇಟ್ಟರು. ಅದು ಈ ಕಾಡಿ ಬೇಡಿ ಅತ್ತು ಕರೆದು ವೀಳ್ಯ ಗಿಟ್ಟಿಸಿ ಆಡುವುದಕ್ಕಿಂತ ಟೆಂಟಾಟ ಮಾಡಿ ಟಿಕೇಟು ಇಟ್ಟು ಆಡಿದರೆ ಈ ಕಷ್ಟಕಾರ್ಪಣ್ಯದಿಂದ ದೂರವಾಗಬಹುದು. ಈ ಯೋಜನೆಯಲ್ಲಿ ನಾವು ಸೋಲೆವು. ತುಳುನಾಡ ದಕ್ಷಿಣ ಕನ್ನಡಿಗರು ನಮ್ಮನ್ನು ಬಿಟ್ಟು ಹಾಕರು ಎಂದಾಗ ತಂದೆಯವರೂ ಯೋಚಿಸಿ ಯೋಜನೆಗೆ ಅಸ್ತುಗೊಟ್ಟರು.

ಆದರೆ ಇದು ಎಣಿಸಿದಂತೆ ಆಗಲು ತುಂಬಾ ಮೂಲಧನ ಸುರಿಯಬೇಕು. ಡೇರೆಯಾಗಬೇಕು. ರಂಗ ಮಂಟಪ, ಆರಾಮ ಕುರ್ಚಿ, ಒರಗು ಕುರ್ಚಿ, ಬೆಂಚುಗಳು ಬೇಕೇ ಬೇಕು. ನಾಟಕದ ಮಾದರಿ. ಶೆಟ್ಟರೂ ಕುಬೇರನಲ್ಲ. ತನ್ನ ಹೈಲಿಗೆ ಮನೆ ಮಾರು ಮಡದಿ ಮಕ್ಕಳನ್ನು ಬೋರು ಮಾಡುವ ಅಬ್ಬರದ ಬಂಟರಲ್ಲ. ಹಿಡಿದ ಕೆಲಸವನ್ನು ಸಾಧಿಸಿ ಗೆಲ್ಲು ಎಂಬ ನಿಶಾನಿಗೆ ನೀರು ಹಾಕಿಯೇ ಸಿದ್ಧನೆಂಬಂತಹ ಹಠವಾದಿ. ಈ ಯೋಜನೆ ಅವರ ತಲೆಯಲ್ಲಿ ಸುತ್ತುತ್ತಿದ್ದಂತೆ ಕಟೀಲು ದುರ್ಗಾಪರಮೇಶ್ವರಿ ಮೇಳವು ಹಿಂದಿನಂತೆಯೇ ಬಯಲಾಟವಾಡುತ್ತಲೇ ಇತ್ತು. ನಾನೂ ತಂದೆಯವರೂ ಅಚ್ಚುಕಟ್ಟಾಗಿ ನಮ್ಮ ಪಾಲಿಗೆ ಬಂದ ಪಾತ್ರವನ್ನು ನಿಭಾಯಿಸಿ ಜನ ಮೆಚ್ಚುಗೆ ಪಡೆಯುವುದರೊಂದಿಗೆ, ಮೇಳವೆಂದರೆ ಕೊರಗ ಶೆಟ್ಟರ ಕಟೀಲು ಮೇಳವೆಂದು ಊರು ಪರವೂರು ಹಾಡಿ ಹೊಗಳುವುದನ್ನು ಕೇಳಿದ ಹೆಗ್ಗಡೆಯವರಿಗೆ ಇದು ಕಿವಿಗೆ ಕುದಿಯೆಣ್ಣೆ ಎರೆದಂತಾಗಿ ಘಂಟಾಘೋಷವಾಗಿ ಸಾರತೊಡಗಿದರು. ರಾಮಯ್ಯನ ಕೈ ಕಡಿದು ನಾಯಿಯ ಕತ್ತಿಗೆ ಕಟ್ಟಿಯೇ ಸಿದ್ಧವೆಂದು. ಇದನ್ನರಿತ ನನ್ನ ಹಿತಚಿಂತಕರೊಬ್ಬರು ನನಗರಿಯದಂತೆ ರಂಗ ಸ್ಥಳದಲ್ಲಾಗಲಿ, ದಾರಿ ನಡೆಯುವಾಗ ಆಗಲಿ ಐದಾರು ಮಂದಿ ಹೊಂತಕಾರಿ ಮೊಗವೀರ ಯುವಕರನ್ನು ನನ್ನ ಹಿಂದು ಮುಂದು ಇರುವಂತೆ ನಿಯೋಜಿಸಿದ್ದುದು ನನಗೆ ಆಗ ಅರಿವಿಗೆ ಬಂದಿರದಿದ್ದರೂ ಕ್ರಮೇಣ ತಿಳಿಯಿತು.

ಹೆಗ್ಗಡೆಯವರಿಗೆ ಅವರ ಯೋಜನೆಯು ಬಗೆಹರಿಯುವುದಿಲ್ಲ. ಕೊರಗ ಶೆಟ್ಟರು

ತನ್ನ ಈ ಬಾದಶಾಹಿ ಕಾರ್ಬಾರಿಗೆ ಸೊಪ್ಪು ಹಾಕುವವರಲ್ಲ ಎಂದರಿತು ಆಗಿನ ಬ್ರಿಟಿಷರ 'ವಿಭಜಿಸಿ ಆಳು' ಎಂಬ ನ್ಯಾಯವನ್ನು ಆಧರಿಸಿ ಭೇದೋಪಾಯಕ್ಕೆ ಅಣಿಯಾದರು.

ಅದೊಂದು ದಿನ ಜೋಕಟ್ಟೆಯಲ್ಲಿ ವೀಳ್ಯದ ಆಟ. ಭಾಗವತರು ಹಿರಿಯ ಬಲಿಪ ನಾರಾಯಣ ಭಾಗವತರೇ...! ಆಟದ ಹೊತ್ತಿಗೆ ಬರುವೆ, ಪೇಜಾವರ ಮಠಕ್ಕೆ ಹೋಗಬೇಕು ಎಂದು ಹೇಳಿ ಹೋದರು. ಕೇಳಿ–ಪೀಠಿಕೆ–ಬಾಲಗೋಪಾಲ–ಸ್ತ್ರೀ ವೇಷ –ನಿತ್ಯವೇಷ– ಕಟ್ಟು ವೇಷವೆಲ್ಲಾ ಮುಗಿದು ಪ್ರಸಂಗ ಪ್ರಾರಂಭವಾದರೂ ಭಾಗವತರು ಕಾಣೆ. ಅಲ್ಲಿ ಆಸುಪಾಸಿನಲ್ಲಿ ಎಷ್ಟು ಹುಡುಕಿದರೂ ಚಿಕ್ಕ ಪುಟ್ಟ ತಾಳಮದ್ದಳೆಗಳಲ್ಲಿ ಹಾಡುವ ಭಾಗವತರೂ ಸಿಗುವಂತಿಲ್ಲ. ಕೊರಗಶೆಟ್ಟರು ಮುಖಕ್ಕೆ ಕೈ ಹಿಡಿದು ಕುಳಿತರು. ಕಿಕ್ಕಿರಿದ ಜನ ಸಂದಣಿ– ಪ್ರಸಂಗದ ಮುನ್ನಡೆಯನ್ನು ಎದುರು ನೋಡುತ್ತಿದೆ.

ನನಗೀಗ ಎಲ್ಲಿಲ್ಲದ ಉತ್ಸಾಹ. ಅದು ಆ ಅನ್ನಪೂರ್ಣೆಯ ಆಶೀರ್ವಾದವಿರಬೇಕು. ಶೆಟ್ಟರೊಡನೆಂದೆ "ಅದೇಕೆ ಅಷ್ಟು ವ್ಯಸನ ಬಿಡಿ. ನಾನು ಹಾಡುವೆನೆಂದು ನಿಮಗೆ ಗೊತ್ತಿಲ್ಲವೇ...? ಮವ್ವಾರು ಭಾಗವತರು ನನ್ನ ಗುರುಗಳು. ಅವರ ಅಮೃತ ಹಸ್ತದ ಹರಕೆಯಿಂದ ಆ ದುರ್ಗಾಪರಮೇಶ್ವರಿಯ ಅಭಯ ಕರಕಮಲ ಆಶೀರ್ವಾದದಿಂದ ಇಂದಿನ ಪ್ರಸಂಗ ದ್ರೌಪದಿ ಪ್ರತಾಪವು ಯಾವ ಎಡರು ತೊಡರು ಇಲ್ಲದೆ ನಡೆಯುವುದು" ಎಂದಾಗ ಚಿಂತೆಯೇ ಮೂರ್ತಿವೆತ್ತು ಕುಳಿತ್ತಿದ್ದ ಶೆಟ್ಟರು, 'ಉಪವಾಸಕ್ಕಿಂತ ಅರೆ ರೊಟ್ಟಿ ಲೇಸು' – ಎಂಬ ಗಾದೆಯಂತೆ ನನ್ನನ್ನು ಭಾಗವತಿಕೆಗೆ ಹೋಗಲು ಹರಸಿ ಕಳುಹಿಸಿದರು. ಅಂದು ಮವ್ವಾರು ಭಾಗವತರಿಂದ ಕಲಿತ ಭಾಗವತಿಕೆಯ ಕಲಿಕೆ ಇಂದು ಮರ್ಯಾದೆ ಉಳಿಸಿತು. ಅಂದು ವೇಷಧಾರಿಗಳಿಗೆ ಎಲ್ಲೂ ಕುಣಿತ ಮಾತುಗಾರಿಕೆಯಲ್ಲಿ ನನ್ನ ಬಾಲಿಶ ಹಾಡುಗಾರಿಕೆಯಿಂದ ಎಡವದಂತೆ, ಬಾರದಿದ್ದ ಬಲಿಪರನ್ನು, ಸೇರಿದ ಜನಜಂಗುಳಿಯನ್ನು ಸ್ಮರಿಸದಂತೆ ಹಾಡಿ ದ್ರೌಪದೀ ಪ್ರತಾಪ ಪ್ರಸಂಗಕ್ಕೆ ವೀರೋಚಿತ ಪ್ರತಾಪಯುಕ್ತ ಮಂಗಳ ಹಾಡಿದೆ. ಇದು ನನ್ನ ವಿದ್ವತ್ ಪ್ರೌಢಿಮೆಯಲ್ಲ. ಆ ತಾಯಿ ದುರ್ಗಾಪರಮೇಶ್ವರಿಯ ದಯೆ. ಆಕೆಗಲ್ಲವೇ ಮೂಕನನ್ನು ವಾಚಾಳಿಯಾಗಿಸುವ, ಹೆಳವನನ್ನು ಗಿರಿಯೇರಿಸುವ ಅಘಟಿತ ಘಟನಾ ಶಕ್ತಿ ಇರುವುದು. ಈಗ ಶೆಟ್ಟರಿಗೆ ಯಕ್ಷಗಾನ ಕ್ಷೇತ್ರದಲ್ಲಿ ರಾಜ ಯೋಗ. ಅವರು ಮುಟ್ಟಿದ್ದು ಎಲ್ಲ ಹೊನ್ನು. ಈಗ ದೇವರು ಅವರನ್ನು ಜುಟ್ಟು ಹಿಡಿದು ಮೇಲೆತ್ತುವ ಕಾಲ. ಅವರಲ್ಲಿ ಮತ್ಸರಿಸಿದವನು ಕೆಳಗೆ ಜಗ್ಗುವ ಪ್ರಯತ್ನ ಮಾಡಿದರೆ ಅವನಿಗೆ ಸಿಗುವುದು– 'ಅವಸರದಲ್ಲಿ ಅರಂಟಿ ತೊಡೆ ಸಂದಿನ ರೋಮವೆಂಬಂತಾಯಿತು' – ಇಂದಿನ ಆಟವನ್ನು ಕೆಡಿಸಬೇಕೆಂದವರ ಪಾಡು. ಇದರಿಂದ ಶೆಟ್ಟರು ಮರೆಯದ ಪಾಠವನ್ನು ಕಲಿಯುವಂತಾಯಿತು. ಹೆಸರಾಂತ ಮೇಳದಲ್ಲಿ ಸರಿಸಮಾನರಾದ ಭಾಗವತರು ಇದ್ದೇ ತೀರಬೇಕೆಂದು. ಹಾಗಾದರೆ ಆ ಭಾಗವತರಾರು...? ನಾನೇ...? ಅಲ್ಲ. ನಾನು ಭಾಗವತಿಕೆಗಿಂತ ಉತ್ತಮ ವೇಷಧಾರಿಯೆಂದು ಜನ ಮನ್ನಣೆ ಗಳಿಸಿಯಾಗಿತ್ತು. ಅಂದೇನೋ ಆ ಮಹಾತಾಯಿಯ ಕೃಪಾಕಟಾಕ್ಷದಿಂದ– ಗುರು ಕೃಪೆಯಿಂದ ಅಮೋಘವಾಗಿ ಹಾಡಿದೆನೆಂದು ಜನ ಅಭಿಪ್ರಾಯ ಪಟ್ಟಿದ್ದರೆ ಒಳಗಿನ ಗುಟ್ಟು ಶಿವನೇ ಬಲ್ಲ ಎಂಬ ಗಾದೆಯಂತೆ ನಾನು ಮವ್ವಾರು ಭಾಗವತರಲ್ಲಿ ಹಾಡುಗಾರಿಕೆ ಅಭ್ಯಾಸಕ್ಕಾಗಿ ದ್ರೌಪದೀ ಪ್ರತಾಪ ಪ್ರಸಂಗವನ್ನೇ ಕಂಠಪಾಠ ಮಾಡಿ

ತಾಳ ಲಯ ಬದ್ಧವಾಗಿ ಪಠಿಸಿದ್ದು. ಅದನ್ನು ಅವರು ನನಗೆ ಶಾಸ್ತ್ರೀಯವಾಗಿ ಬಯಲಾಟಕ್ಕೆ ಬೇಕಾದಂತೆ ಪಾಠ ಮಾಡಿದ್ದರು. ಆ ಪಾಠವನ್ನು ಶ್ರೀದೇವಿಯ ಮುಂದೆ ಯಥಾವತ್ತಾಗಿ ಒಪ್ಪಿಸಿ ತೇರ್ಗಡೆಯಾಗಿದ್ದರೆ–ಈಗ ನಾನು ಭಾಗವತನಾಗಿ ಆಟ ಆಡಿಸಬಲ್ಲೆನೆಂದರೆ ವರಶಿಲ್ಪಿಯು– ಮಣ್ಣ ಮುದ್ದೆ ಎಸೆದು ಗಣಪತಿಯ ಮೂರ್ತಿಯನ್ನು ರೂಪಿಸಿದನೆಂದು, ನಿತ್ಯ ಆವೆ ಮಣ್ಣು ಗುದ್ದುವ ಕುಂಬಾರ ನಾನೇನು ಅವನಿಗಿಂತ ಕಡಿಮೆಯೆಂದು ಮೂರ್ತಿ ಮಾಡಹೋಗಿ ಗಣಪತಿಯ ಬದಲು ಆತನ ಅಪ್ಪನ ರೂಪು ನೀಳ ಲಿಂಗವನ್ನು ಮಾಡಿ ಗೇಲಿಗೀಡಾದ ಪಾಡು ನನ್ನದಾಗಬಹುದು.

ಇದಕ್ಕಾಗಿ ಕೊರಗಶೆಟ್ಟರು ಆರಿಸಿ ತೆಗೆದದ್ದು, ಭಾಗವತ ರತ್ನ ಬೊಳಿಂಜ ಮೈಂದಪ್ಪ ರೈಗಳು. ಅವರ ಹಾಡುಗಾರಿಕೆ– ನೇಮ ನಿಷ್ಠೆಯ ಕುರಿತು ಮುಂದೆ ತಿಳಿಸುವೆ. ಮರುದಿನ ಬಂದ ಬಲಿಪರು ತಮ್ಮ ತಂತ್ರವು ಫಲಿಸಿಲ್ಲವೆಂಬುದನ್ನು ತಿಳಿದೋ ಅವರು ಯತಾರ್ಥವಾಗಿಯೂ ಎಡವಟ್ಟಿಗೆ  ಈಡಾಗಿ ಬರದಿದ್ದು ದೋ ಅಂತೂ ಬಂದು ಕೊರಗ ಶೆಟ್ಟರಲ್ಲಿ ಬರಲಾಗದುದಕ್ಕೆ ಏನೇನೋ ಸಬೂಬು ಹೇಳಿ, ಬಾರಿ ಬಾರಿಗೂ ಕ್ಷಮೆ ಕೇಳಿ, ಮುಂದಿನ ಬಯಲಾಟಗಳನ್ನು ಮತ್ತೇನೂ ಅಡೆತಡೆಯಿಲ್ಲದಂತೆ ನಡೆಸಿಕೊಟ್ಟರು. ಶೆಟ್ಟರೂ, ಹಿರಿಯ ಭಾಗವತ ಜ್ಞಾನಿ ಪಂಡಿತನೆಂಬ ಗೌರವಕ್ಕಾಗಿ ತನಗಾದ ಮರೆಯದ ನೋವನ್ನು ಇವರ ಮುಂದೆ ತೋರಿಸದೆ ಗೌರವಯುತವಾಗಿಯೇ ನಡೆಸಿಕೊಂಡರೂ ಇಂಥ 'ಮಹಾನುಭಾವ ಭಾಗವತ'ರು ಎಂದಾದರೂ ಕೈ ಗೊಟ್ಟರಾದರೆ ನನ್ನ ಪಾಡು ತಾರಮ್ಮಯ್ಯ ಹಾಡು ಎಂಬಂತೆ – ಮರು ವರ್ಷ ಬೊಳಿಂಜ ಮೈಂದಪ್ಪ ರೈಗಳು ಮೇಳಕ್ಕೆ ಬರುವರು ಎಂದು ಪ್ರಚಾರ ಮಾಡಿಸಿದರು. ಈಗ ಬಲಿಪರ ಪಾಡು...! ಮೃಗರಾಜನೇಂ ಪಿಲಿ ಮದಕರಿಯ ದಂತಮಂ ಲೆಕ್ಕಿಪನೆ. ಆದರೆ, ನೂರಜುನು ಸಿಗಳಬರಿಯ ಕಿರಿಕಿರಿಗೆ ರೋಸಿದಪನಲ್ತೆ ಎಂಬ ಗಾದೆಯ ಮಾತಿಗೆ ಅನುಗುಣವಾಗಿ ಈ ಹುಡುಗು ಮುಂಡೆ ರಾಮಯ್ಯ ಮೈಂದಪ್ಪರಿಂದ ಜಾಗಟೆ ಪಡೆಯಬೇಕೇ ಎಂದು ಧೇನಿಸುವಂತಾಯಿತು. ಈ ಪ್ರಮೇಯವನ್ನು ಅವರಾಗಿಯೇ ಎಳೆದು ತಂದು ಮೈಮೇಲೆ ಹಾಕಿಕೊಂಡು ಉಂಡುದೆಂದು ಅರಿಯುವಷ್ಟು ವಿಶಾಲ ಹೃದಯಿಗಳು ಅವರಾಗಿರುತ್ತಿದ್ದರೆ ಇಂದಿನ ತೆಂಕುತಿಟ್ಟಿನ ಯಕ್ಷಗಾನವು ಸಾಟಿಯಿಲ್ಲದೆ ಮೆರೆಯುತ್ತಿತ್ತು. ಅವರು ಈ ನಿಟ್ಟಿನಲ್ಲಿ ಅಷ್ಟು ಪಳಗಿದ ಸರಿಸಾಟಿಯಿಲ್ಲದ ಸರ್ವಶಕ್ತ ಯಕ್ಷಗಾನ ಭಾಗವತ, ಪಂಡಿತ. ಆದರೆ, ಯಕ್ಷಗಾನದ ದುರ್ದೈವವಿದೆಂಬಂತೆ ಅವರು ಅರಿತುದನ್ನು ಬರೆದಿಡದೆ ಅವರ ಯಕ್ಷಗಾನ ಅನುಭಾವಮೃತವನ್ನು ಉಳಿಸದೆ, ತನ್ನೊಂದಿಗೆ ಕೊಂಡು ಹೋದರೂ ಅವರು ಮಾತ್ರ ಯಕ್ಷ ಕಲಾ ಕ್ಷೇತ್ರದ ಜನಮಾನಸದಲ್ಲಿ ಎಂದೆಂದಿಗೂ ಅಳಿಯದ ಧ್ರುವತಾರೆ.

ಅವರು ತಮ್ಮ ಅನುಭವ ಸಾರವನ್ನು ಯಾರಿಗಾದರೂ ಧಾರೆ ಎರೆಯುತ್ತಿದ್ದರೆ ಇಂದು ತೆಂಕುತಿಟ್ಟು ಬಡವು ಎಂದು ಬಡಗರಿಂದ ಸರ್ವಥಾ ಅನ್ನಿಸಿಕೊಳ್ಳುತ್ತಿರಲಿಲ್ಲ. ಇದಕ್ಕೆ ಈ ಕಲೆಯ ಹಿತಾಕಾಂಕ್ಷಿಗಳೇ ಕಾರಣ ಅನ್ನುವುದು, ಇದೊಂದು ಸತ್ಯಸ್ಯ ಸತ್ಯ ಎಂಬುದಕ್ಕೆ ನಾನೂ ಅಸ್ತುಗೊಡುವೆ. ಇದರಲ್ಲಿ ನನ್ನ ಪಾಲೂ ಇದ್ದೇ ಇದೆ ಎಂಬುದನ್ನೂ ಪ್ರಾಂಜಲವಾಗಿ ಒಪ್ಪಿಕೊಳ್ಳುವೆ.

ನನ್ನ ಮುತ್ತಜ್ಜ ಅಗರ್ಭ ಶ್ರೀಮಂತ ಮೋನು ರೈಗಳು. ಯಕ್ಷಗಾನ ಬಯಲಾಟಕ್ಕೆ ಬಂದರೆಂದರೆ ಅಂದಿನ ಯಾವ ಹಿರಿ ಮೇಳದ ಭಾಗವತನೇ ಇರಲಿ, ಜಾಗಟೆ ಕೆಳಗಿಟ್ಟು ರೈಗಳಿಗೆ ವಂದಿಸಿ ಕೊಂಚ ಹೊತ್ತು ಹಾಡಿ ಆಟ ಮುಂದುವರಿಸಬೇಕೆಂದು ಪ್ರಾರ್ಥಿಸುತ್ತಿದ್ದರೆ ಆ ಪರಂಪರೆಗೆ ಊನ ಬರದಂತೆ ಅವರು ಅವರ ಮಗ ನನ್ನ ಅಜ್ಜ ರಾಮಣ್ಣ ರೈಗಳನ್ನು ಈ ಕ್ಷೇತ್ರಕ್ಕೆ ಅರ್ಪಿಸಿ ಪುನೀತರಾದರು. ಅಜ್ಜನು ಈ ಪುಣ್ಯದ ಹೊರೆಯನ್ನು ನನ್ನಪ್ಪ ಮೋನು ರೈಗಳ ಹೆಗಲಿಗೇರಿಸಿದರು. ಅಪ್ಪನು ಆ ಹೊರೆಯನ್ನು ಅಚ್ಚುಕಟ್ಟಾಗಿ ಹೊತ್ತು ನಿಭಾಯಿಸಿ ನನ್ನ ಪಾಲಿಗೆ ಬಿಟ್ಟುಕೊಟ್ಟರು. ನಾನು ಬಣ್ಣ ಬಳಿದೆ. ವೇಷ ಹಾಕಿ ಕುಣಿದೆ, ದಣಿದೆ. ರಾಜ್ಯ ಪ್ರಶಸ್ತಿಯನ್ನೂ ಗಳಿಸಿದೆ. ಆದರೆ ನನ್ನ ನಂತರ ನನ್ನವರು ಪರಂಪರಾನುಗತವಾಗಿ, ನನಗೆ ರಕ್ತಗತವಾಗಿ ಬಂದುದೆಂದು ನಾನು ಹೆಗ್ಗಳ್ಕೆಯಿಂದ ಹೇಳುತ್ತಾ ಬರುವ ಈ ಪುಣ್ಯಪ್ರದ ಹೊರೆಯನ್ನು ಹೊರುವವರಾರು...? ಪ್ರಶ್ನೆ ಮುಂದೆ ಪ್ರಶ್ನಾ ಚಿಹ್ನೆಯಾಗಿಯೇ ಉಳಿದು ನನ್ನನ್ನು ಮೂದಲಿಸುತ್ತಿದೆ. ಇದೇ ತರ ಉಳಿದ ಹಿರಿಯ ಕಲಾಗಾರರ ಪಾಡು ಕೂಡಾ.

ಯಕ್ಷಗಾನ ತಾಳ ಮದ್ದಳೆಯ ಅತಿರಥ ಮಹಾರಥ-ಅಷ್ಟದಿಗ್ಗಜಗಳೆಂದು ಹೆಸರಾದವರು ಹೋಗುವಾಗ ಏನು ಬಿಟ್ಟು ಹೋದರು ಎಂಬ ಪ್ರಶ್ನೆಗೆ ಅವರ ಹೆಸರನ್ನಲ್ಲದೆ ಉತ್ತರಾಧಿಕಾರಿಗಳು ನಾಸ್ತಿ. ಅಂತೆಯೇ ಬಯಲಾಟದ ಪಾಡು ಕೂಡಾ. ಇಲ್ಲಿ ನನ್ನೊಡನಾಡಿದ ಭಾಗವತರು, ಚೆಂಡೆ ಮದ್ದಲೆಗಾರರು ಪುರುಷ ಬಣ್ಣ, ಸ್ತ್ರೀ ವೇಷಧಾರಿಗಳ ಹೆಸರನ್ನು ಮಾತ್ರ ಸೂಚಿಸುವೆ. ಅವರ ಪರಿಚಯವನ್ನು ವಿವರವಾಗಿ ಕೊಟ್ಟರೆ ಪ್ರಬಂಧವು ದೀರ್ಘವಾಗಬಹುದು.

ನಾನು 1927ನೆ ಇಸವಿಯಲ್ಲಿ ರಂಗ ಪ್ರವೇಶ ಮಾಡಿದೆನೆಂದೆನಲ್ಲವೇ...? ಆಗ ನನಗೆ ಶುಭ ಕೋರಿ ಗೆಜ್ಜೆ ಪ್ರದಾನ ಮಾಡಿದವರು ಮಹಾಭಾಗವತ ಮಾಂಬಾಡಿ ನಾರಾಯಣ ಭಾಗವತರು. ನನ್ನನ್ನು ಹಲವು ರಂಗ ಸ್ಥಳಗಳಲ್ಲಿ ಕುಣಿಸಿ, ಮಣಿಸಿದವರು ಮವ್ವಾರು ಕೃಷ್ಣ ಭಾಗವತರು. ಅವರೂ ಕಿಟ್ಟಣ್ಣ ಭಾಗವತರೆಂದೇ ಖ್ಯಾತನಾಮರು. ಬಲಿಪ ಬಲ್ಮೆಯ ಬಣ್ಣಿಪರಾರೆಂದು ಖ್ಯಾತಿಗೊಂಡ ಬಲಿಪ ನಾರಾಯಣ ಭಾಗವತರು. ಅಣ್ಣಿ ಭಾಗವತರು. ಪುತ್ತಿಗೆ ಜೋಯ್ಸರು – (ರಾಮಕೃಷ್ಣ ಜೋಯಿಸ ನಾಮಾಂಕಿತರು.) ಶ್ರೀ ಮೈಂದಪ್ಪ ರೈಗಳು ಯಕ್ಷಗಾನ ಹಾಡುಗಾರಿಕೆಗೆ ಶಾಸ್ತ್ರೀಯ ಸಂಗೀತದ ಮೆರುಗು ಕೊಟ್ಟು ನವರಸಭರಿತವಾಗಿ ಯಕ್ಷಗಾನ ತಾಳಮದ್ದಳೆ, ಬಯಲಾಟದಲ್ಲಿ ಹಾಡಿ ಜನಮೆಚ್ಚುಗೆ ಗಳಿಸಿದ ಯಕ್ಷ ರಂಗದ ಕಲಕಂಠನೆಂದು ಖ್ಯಾತರಾದವರು. ಇವರ ಜಾಡಿನಲ್ಲೇ ಅಷ್ಟೇ ವಿದ್ವತ್ಪೂರ್ಣ– ರಸವತ್ತಾಗಿ ಈ ಕ್ಷೇತ್ರದ ಮಿಕ್ಕುಳಿದ ಆಯಾಮ ನಾಟ್ಯಶಾಸ್ತ್ರ – ಬಣ್ಣಗಾರಿಕೆ, ವೇಷಭೂಷಣಗಳ ವಿವರವರಿತ ಬುದ್ಧಿವಂತ ದಾಮೋದರ ಮಂಡೆಚ್ಚರು. ಬಲಿಪ ನಾರಾಯಣ ಭಾಗವತರ ಮೊಮ್ಮಗ ನಾರಾಯಣ ಬಲಿಪ ಇವರೆಲ್ಲಾ ಅವರವರಾಗಿಯೇ ಮೆರೆದರಲ್ಲದೆ ಗತಿಸಿದವರು ತಮ್ಮ ಉತ್ತರಾಧಿಕಾರಿಗಳೆಂದು ಹೆಸರು ಎತ್ತಿ ಎದೆ ತಟ್ಟಿ ಹೇಳುವವರನ್ನು ಬಿಟ್ಟು ಹೋಗಿಲ್ಲ.

ಚೆಂಡೆ ಮದ್ದಳೆಗಾರರ ಅವ್ಯವಸ್ಥೆಯೂ ಇದಕ್ಕೆ ಹೊರತಲ್ಲ. ಆಗಿನ ಖ್ಯಾತನಾಮ ಮದ್ದಲೆಗಾರ ಪುತ್ತೂರು ಗೋಪಣ್ಣ ಮದ್ದಲೆಗಾರರು. ಇವರು ಪುತ್ತೂರಿನಲ್ಲಿ ಚೆಂಡೆ ಮದ್ದಳೆಯ

ಮಟ್ಟಿಗೆ ಈಡಿಲ್ಲದ ಕೈ. ಮದ್ದಳೆ ಬಾರಿಸುವುದು ವಂಶಪರಂಪರೆ, ಜಾತಿ ಕಸುಬಾಗಿ ಬಂದ ಹುಟ್ಟು ಗುಣ. ಆದರೆ ಗೋಪಣ್ಣನವರ ಮದ್ದಳೆಯ ಸ್ಥಾನವನ್ನು ಚೆಂಡೆಯ ಕೈ ಚಳಕವನ್ನು ಅವರ ಕುಟುಂಬಿಕರಾರೂ ಅವರಷ್ಟು ಪ್ರೌಢಿಮೆಯಿಂದ ಪ್ರದರ್ಶಿಸಿದವರಲ್ಲ.

ಅನಂತರ ಬಲಿಪ ಭಾಗವತರಿಗೆ ಸಾಟಿಯಾಗಿ, ಸವಾಲಾಗಿ ಚೆಂಡೆ ಮದ್ದಲೆಯಲ್ಲಿ ನುರಿತ ಮದ್ದಲೆಗಾರರು ಲಕ್ಷ್ಮಿ ನಾರ್ಣಪ್ಪಯ್ಯ. ಇವರ ಮೃದಂಗವಾದನವನ್ನು ಕೇಳಿದವರು ಅಮರ್ದು ಮದ್ದಳೆ ಎಂದು ಕೊಂಡಾಡಿ ಪುರಸ್ಕರಿಸಿದವರು ಎಷ್ಟೋ ಮಂದಿ. ಶಿವ ಮದ್ದಳೆಗಾರರು ಮಳೆಗಾಲದಲ್ಲಿ, ಪತ್ತನಾಜೆಯಂತಹ ಗುತ್ತಿನ ಮನೆಗಳಲ್ಲಿ ಹಲವಾರು ಯುವಕರಿಗೆ ಚೆಂಡೆ ಮದ್ದಳೆ ಕಲಿಸಿ ಗುರುವೆಂದು ಪೂಜಿಸಿಕೊಂಡರೂ ಅವರ ಶಿಷ್ಯರೆಂದು ಗುರುತಿಸಲ್ಪಟ್ಟವರು ಉತ್ತರಾಧಿಕಾರಿಯೆಂಬವರು ರಾಮಕೃಷ್ಣ ಮದ್ದಲೆಗಾರರು. ನಿಡ್ಲೆ ನರಸಿಂಹ ಭಟ್ಟರು ಬಯಲಾಟ ಜೋಡಾಟದಲ್ಲಿ ತುಂಬಾ ಪ್ರಸಿದ್ಧಿ ಪಡೆದು ಹೆಸರು ಗಳಿಸಿ ಉಳಿಸಿ ಹೋದರೂ ಅವರ ಹೆಸರು ಹೇಳಿ ಚೆಂಡೆ ಮದ್ದಳೆ ಬಾರಿಸುವವರನ್ನು ಬಿಟ್ಟು ಹೋದುದಿಲ್ಲ. ಪ್ರಸ್ತುತ ಧರ್ಮಸ್ಥಳ ಮೇಳದಲ್ಲಿ ನಿಡ್ಲೆ ನರಸಿಂಹ ಭಟ್ಟರು ಖ್ಯಾತನಾಮರು. ಇದಕ್ಕೆ ಅಪವಾದವಾಗಿ ಎದ್ದು ತೋರುವವರು ಕುಂಬಳೆ ದೇರಣ್ಣ ರೈ, ಬಾಬು ರೈಗಳು. ಪೆರವಾಯಿ ನಾರಾಯಣ ಭಟ್ಟರು, ಕಾಂಚನ ನಾರಾಯಣ ಭಟ್ಟರು, ದಿವಾಣ ಭೀಮ ಭಟ್ಟರು ಹೆಸರು ವಾಸಿಯಾದವರು.

ಖ್ಯಾತ ಹಾಸ್ಯಗಾರರ ಪಾಡೂ ಭಾಗವತ, ಮದ್ದಲೆಗಾರರ ಪಾಡಿಗಿಂತ ಬೇರೆಯಾಗಿಲ್ಲ. ಮದ್ದಲೆಗಾರರಿಗೆ ಇದು ಶಾಸ್ತ್ರವತ್ತಾಗಿ ಕಲಿತು ಬರುವ ವಿದ್ಯೆ. ಆದರೆ ಹಾಸ್ಯವು ಪ್ರಕೃತಿ ದತ್ತವಾಗಿ ವ್ಯಕ್ತಿಗತ ಉತ್ಪನ್ನ ಮತಿಯಿಂದ ಒಡಲಲ್ಲಿ ಪಡಿಮೂಡಿ ಬರುವ ವಿದ್ಯೆ. ಚೆಂಡೆ ಮದ್ದಳೆಯನ್ನು ಹಿಂದೆ ಹಿರಿಯರು ಬಾರಿಸಿದುದಕ್ಕೆ ಮಿಗಿಲಾಗಿ ಅರಿತು ಕಲಿತು ಬಾರಿಸುವವರು ಬೇರೆಯೇ ಸಿಗಬಹುದು. ಹಾಸ್ಯವು ಮಾತ್ರ ಆ ಹಾಸ್ಯಗಾರನೊಂದಿಗೆ ಅವನ ಹಾಸ್ಯವೂ ಮಂಗಮಾಯ. ನನ್ನ ಕಾಲದ ನೆನಪಿನಾಳದಲ್ಲಿ ಉಳಿದ ಹಾಸ್ಯಗಾರರು ಅಪ್ಪು ಹಾಸ್ಯಗಾರರು ರಂಗಕ್ಕೆ ಬಂದರೆಂದರೆ ಗಂಡಸರು, ಹೆಂಗಸರು, ಮಕ್ಕಳು, ಮರಿಗಳು ಇವರ ನಿಲುವು, ನೋಟ, ಮಾತು ನಾಟ್ಯದ ಹಾಸ್ಯ ಮೋಡಿಗೆ ಹುಚ್ಚುಗಟ್ಟಿ ನಕ್ಕು ಸುಸ್ತಾಗಿ ಪಕ್ಕೆ ಹಿಡಿದು ಅಯ್ಯೊಪ್ಪ ಉಳ್ಳೊಪ್ಪ ಎಂದವರು ಅದೆಷ್ಟೋ ಮಂದಿ. ಸುಬ್ರಾಯ ಹಾಸ್ಯಗಾರರೂ ಹಾಸ್ಯರಂಗದಲ್ಲಿ ತನ್ನ ಹೆಸರನ್ನು ಶಾಶ್ವತೀಕರಿಸಿದವರು. ಅವರು ವಿದ್ವತ್ ಸಭೆಯಲ್ಲಿ ವಿದ್ಯಾವಂತರು ಮೆಚ್ಚುವಂತೆ ಹಾಸ್ಯರಸದ ಹೊನಲು ಹರಿಸಿದರೆ, ಹಳ್ಳಿಗಳಲ್ಲಿ ಹಳ್ಳಿಯ ಜನಜಂಗುಳಿ ನೋಡಬೇಕು. ಸುಬ್ರಾಯ ಹಾಸ್ಯಗಾರ ವೇಷವನ್ನು ಅಣುಕು ವೇಷ ಮಾಡಿ ಮಕ್ಕಳು ಮರು ದಿನ ರಾತ್ರಿ ಮನೆ ಹೆಂಗಸರಿಗೆ ಅಡಿಗೆ ಮನೆಯಲ್ಲಿ ಕಾಣಿಸಿಕೊಂಡು ಕಳ್ಳನೆಂದೋ, ಕಿರಾತನೆಂದೋ ಪೆಟ್ಟು ತಿಂದವರು ಬಹು ಮಂದಿ. ಕೊಗ್ಗ ಹಾಸ್ಯಗಾರರು, ಕಿಟ್ಟಪ್ಪಿ, ಈಚಣ್ಣ ಇವರೂ ನುರಿತ ಹಾಸ್ಯ ಪಟುಗಳು. ಆದರೆ ಹಳ್ಳಿಗಳಲ್ಲಿ ಅಶ್ಲೀಲ ಮಾತು ಬಳಸುತ್ತಿದ್ದರೆಂಬ ಅಪವಾದವನ್ನೂ ಹೊತ್ತವರು. ಸದ್ಯ ಪ್ರಚಲಿತ ಮೇಳಗಳಲ್ಲಿ ದುಡಿಯುತ್ತಿರುವ ನನ್ನ ತುಂಬು ಅಭಿಮಾನಿಗಳು, ಯಕ್ಷಗಾನದ ಒಳಗು ಹೊರಗನ್ನು ಅರಿತು ಹಾಸ್ಯ ಮಾಡುವ – ಒಂದು ವೇಳೆ ಹಾಸ್ಯ ಹೊರತಾಗಿ ಇತರ ಧೀಮಂತ ಪಾತ್ರಗಳನ್ನು ಮಾಡಿದರೆ ಸೈ –ಭೇಷೆಂದು ಸಭಿಕರಿಂದ

ಮನ್ನಣೆಯ ಚಪ್ಪಾಳೆ ಗಿಟ್ಟಿಸಲು ಸಮರ್ಥರಾದ, ಯಕ್ಷಗಾನದ ದಿಗ್ದರ್ಶನವನ್ನು ಹಿಂದಿನ ಭಾಗವತರಂತೆಯೇ ನಿಭಾಯಿಸಬಲ್ಲ ಹಾಸ್ಯಗಾರ ಮಂಜಪ್ಪ ಮದವೂರು, ನಾರಾಯಣ ಮುಂಡೇರು, ಅಣ್ಣಪ್ಪ ಹಾಸ್ಯಗಾರರು, ವಿಟ್ಲ ಗೋಪಾಲಕೃಷ್ಣ ಜೋಯಿಸರವರು, ಬೆಟ್ಟಂಪಾಡಿ ಬಾಳಪ್ಪ ಶೆಟ್ಟರು ಇವರೊಡನೆ ಮುಂದಿನ ಯಕ್ಷಗಾನ ಪೀಳಿಗೆಗೆ ನಿಮ್ಮ ಕೊಡುಗೆ ಏನೆಂದು ಪ್ರಶ್ನಿಸಿದರೆ ಖಂಡಿತಾ ಇವರಿಂದ ಉತ್ತರ...

ಇಲ್ಲ....!

ವೇಷಧಾರಿಗಳೂ ಈ ಜಾಡನ್ನು ಬಿಟ್ಟು ಕೊಟ್ಟವರಲ್ಲ. ಬಣ್ಣದ ವೇಷದ ಸುಬ್ಬ ಕೋಲುಳಿ ಸುಬ್ಬನೆಂದೇ ಖ್ಯಾತ. ಇವನದು ಈಡು ಜೋಡಿಲ್ಲದ ಬಣ್ಣದ ವೇಷಗಾರಿಕೆ. ಅಪ್ರತಿಮ ವಾಗ್ವಾದ ನಿಪುಣ. ಇವನ ಮುಖದ ಚಿಟ್ಟಿ ಬಣ್ಣದ ವೇಷದ ಅಟ್ಟಹಾಸಕ್ಕೆ ಹೆದರಿ ಮೂರ್ಛೆ ಹೋದವರೂ ಲೆಕ್ಕವಿಲ್ಲದಷ್ಟು ಮಂದಿ. ಕೆಲವೆಡೆಗಳಲ್ಲಿ ಮಕ್ಕಳೂ ಹೆಂಗಸರೂ ಹೆದರಿಕೊಳ್ಳದಂತೆ ಸುಬ್ಬನ ವೇಷ ಬರುವುದೆಂದು ಮುನ್ನೆಚ್ಚರಿಕೆ ಕೊಡುವ ಸಂಪ್ರದಾಯವಿತ್ತು. ನನ್ನ ಜೀವಮಾನದಲ್ಲಿ ಇಂತಹ ಮನಸ್ಸಿನಿಂದ ಮಾಯದ ಬಣ್ಣದ ವೇಷವನ್ನು ನೋಡಿಲ್ಲವೆಂದು ಪ್ರಾಂಜಲವಾಗಿ ಹೇಳುವೆ.

ಅಂತೆಯೇ ರಾಜವೇಷದಲ್ಲಿ ಮುಂತಿಲ್ಲ– ಪಿಂತಿಲ್ಲವೆಂದು ಆಡಿ ಕುಣಿದ ಕುಂಬಳೆ ಗುಂಡಣ್ಣನ ವೇಷ ಕಣ್ಣು ಮುಚ್ಚಿ ಧ್ಯಾನಿಸಿ ಕುಳಿತರೆ ಪುನಃ ಮನ ಪಟಲದಲ್ಲಿ ಆ ಸುಂದರ ವೇಷ ಧೀಂ – ಕಿಟ – ತರಿಕಿಟ ಕುಣಿಯುವುದು ಕೇಳಿದರೆ ಆ ಸರಳ ಮಾತುಗಾರಿಕೆಗೆ ಮನ ಮಿಡಿದರೆ, ಆ ಹಾವ – ಭಾವ ಮನತುಂಬಿ ತನ್ನ ಕೆಯ್ಯ ಬಿಲ್ಲ ಸಿಂಜಿನಿಯೆಳೆದಾಗ ಅದರ ತುದಿಗೆ ಜೋಡಿಸಿದ ಕಿರು ಗಂಟೆಯ ಸದ್ದು ಟ್ರಿಂನ್ ಎಂದು ಶಬ್ಧಿಸುವುದು. ಕನಸಲ್ಲಿ ಗತಕಾಲದ ಸವಿನೆನಪು ಇಂದೀಗ ಜಾಗೃತಗೊಂಡುದು. ಆದರೆ ಈ ಕ್ಷೇತ್ರಕ್ಕೆ ಅಂಟಿದ ದುರ್ಗುಣ ಇವನನ್ನು ಬಲಿತೆಗೆದುಕೊಂಡು ದಾರುಣ ಮೃತ್ಯುವಿಗೆ ಈಡು ಮಾಡಿತು. ಅಂತೆಯೇ ಬಣ್ಣದ ವೇಷದಲ್ಲಿ ಒತ್ತೆ ಕೆಬಿ ಸುಬ್ಬನೂ ಹೆಸರಿಸತಕ್ಕವ. ಅಯ್ಯಪ್ಪನ ವೇಷವು ಮರೆಯದ ಬಣ್ಣದ ವೇಷ. ಇವನ ವರಾಹ– ಮಹಿಷ ವೇಷಗಳು ಯಕ್ಷಗಾನ ಚರಿತ್ರೆಯಲ್ಲಿ ಸ್ವರ್ಣಾಕ್ಷರದಿಂದ ಬರೆದಿಡಬೇಕಾದುದು. ಇವನ ಕಂಠ ಸ್ವರಕ್ಕೆ ಗರಳ ಕಂಠವೆಂದೇ ಹೆಸರು ಬಂದಿತ್ತು. ದಿ. ಕುಂಞಣ್ಣ ಅಡ್ಯಂತಾಯರೂ ತನ್ನದೇ ಆದ ವಿಶೇಷ ರೀತಿಯಿಂದ ಪುಂಡು ವೇಷದಲ್ಲಿ ಮೆರೆದ ಪುಣ್ಯವಂತರು. ರಾಜವೇಷದಲ್ಲಿ ನನ್ನ ತೀರ್ಥರೂಪ ಅಳಿಕೆ ಮೋನು ರೈಗಳನ್ನು ಎತ್ತಿ ತೋರಿಸಿದೆನೆಂದರೆ ತನ್ನವರ ತಾನೆ ಹೊಗಳ್ದೊಡೆ ಬಲವರಂ ಕಿರಿಯಗೆಂಬರ್, ಆದೊಡಂ ಗುಣಕೆ ಮಚ್ಚರವೇಕೆ...? ಎಂಬ ಕವಿವಾಣಿಗನುಗುಣವಾಗಿ ಹೇಳುವೆ. ಅನುಭವ, ನಾಟ್ಯ, ಮಾತುಗಾರಿಕೆ, ಬಣ್ಣಗಾರಿಕೆಯ ಯಕ್ಷಗಾನ ಕ್ಷೇತ್ರದಲ್ಲಿ ಸರ್ವಾಂಗ ಸುಂದರ ಪರಿಪೂರ್ಣತೆ ಪಡೆದ ವೇಷಧಾರಿಯೊಬ್ಬನಿದ್ದನೆಂದು ಯಕ್ಷಗಾನ ರಂಗವು ಬೆಟ್ಟೆತ್ತಿ ತೋರಿಸುವ ಶಕ್ತಿ ಅಳಿಕೆ ಮೋನು ರೈಗಳೆಂದು ತುಂಬಿದ ಸಭೆಯಲ್ಲಿ ದನಿಯೆತ್ತಿ ಹೇಳಿದ ದಿ. ಕವಿಭೂಷಣ, ಯಕ್ಷಗಾನ ಭಾಸ್ಕರ ಕೆ.ಪಿ. ವೆಂಕಪ್ಪ ಶೆಟ್ಟರ ಮಾತು. ಆ ಮಾತನ್ನು ಅಲ್ಲಗಳೆಯುವ ಎದೆ ಯಾವನಿಗಿದೆ...? ಅವರ ಕೊನೆಯ ದಿನಗಳ ತನಕ ಯಕ್ಷಗಾನದ ಸೀಮಾ ಪುರುಷನೆಂದೇ ಖ್ಯಾತರಾದವರು ಶೆಟ್ಟರು. ಯಕ್ಷಗಾನ ಕ್ಷೇತ್ರದಲ್ಲಿ

ಪರಿಪೂರ್ಣತೆಯನ್ನು ಪಡೆದವರು ಇಲ್ಲವೇ ಇಲ್ಲವೆಂದವರು ಅವರ ಮಾತಿಗೆ ಪ್ರತಿ ಹೇಳುವ ಎದೆಗಾರಿಕೆ ನನಗಿಲ್ಲದುದರಿಂದ ಅದಕ್ಕೆ ಅಸ್ತುಗೊಟ್ಟರೆ 'ನಾಗಪ್ಪನೊಂದಿಗೆ ನಾನೂ ಕಚ್ಚಿದೆ'ನೆಂಬಂತೆ.

ಆ ಕಾಲದ ಸ್ತ್ರೀ ವೇಷದಲ್ಲಿ ಹೆಸರಾಂತ ಹೆಸರು ಐತಪ್ಪ ಶೆಟ್ಟರು. ದೇರಣ್ಣ ಶೆಟ್ಟರು, ಪುರುಷೋತ್ತಮ ಭಟ್ಟರು. ನನ್ನ ಸಮಕಾಲೀನ ವಿಠಲ ಶಾಸ್ತ್ರಿಗಳು, ಸಂಜೀವ ಶೆಟ್ಟರು, ಸುಬ್ಬಯ್ಯ ಶೆಟ್ಟರು, ಬೋಳಾರ ನಾರಾಯಣ ಶೆಟ್ಟರು, ಕೋಳ್ಯೂರು ರಾಮಚಂದ್ರ ಇವರೆಲ್ಲಾ ಇಂದಿನವರು ಮೆಚ್ಚಿದ ಯಕ್ಷಗಾನ ವೇಷಧಾರಿಗಳು. ಈ ಎಡೆಯಲ್ಲಿ ಮರವೆಯ ಮೂಸೆಯಲ್ಲಿ ಸಿಕ್ಕು ಮರೆತು ಹೋದ ಅದೆಷ್ಟೋ ಉದ್ದಾಮ ನಟುವ ಶಿಖಾಮಣಿಗಳು ನನಗೆ ಗುರು ಸ್ಥಾನದಲ್ಲಿ ಮೆರೆದು ಹೋದವರು ತುಂಬಾ ತುಂಬಾ. ಆದರೆ ಅವರ ಪ್ರತಿನಿಧಿಗಳಾಗಿ ಈ ರಂಗಕ್ಕೆ ಬಂದವರು ಒಂದೋ ಎರಡೋ.

ದಿನ ಹೋದಂತೆ ನನ್ನ ಬಣ್ಣದ ಬದುಕೆಂದರೆ ತಿನ್ನುವ 'ಅವಿಲಿ'ನಂತೆ. ಕಹಿ – ಹುಳಿ – ಚೊಗರು, ಸಿಹಿ ಉಪ್ಪು – ಖಾರ. ದಿನದಿಂದ ದಿನಕ್ಕೆ ಶಿಸ್ತು ಶಿಥಿಲವಾಗಿ ಹಿರಿಯ ವೇಷಧಾರಿಗಳು ವಿಷಯ ಲೋಲುಪರಾಗಿ ಸ್ವಾರ್ಥ ಸಾಧಿಸಲು ಹೆಣಗತೊಡಗಿದಾಗ ಕೆಲವೊಮ್ಮೆ ದೇವರೇ ನನ್ನನ್ನೀ ಬದುಕಿಗೇಕೆ ನೂಕಿದೆ ಎಂದು ಪಶ್ಚಾತ್ತಾಪ ಪಟ್ಟು ಇಲ್ಲಿಂದ ಕಂಬಿ ಕೀಳೋಣ ಎಂದು ನಿರ್ಧರಿಸಿದಾಗ ಕೇಳಿದ ಕೇಳಿಯ ಹೊಡೆತ ಎತ್ತು ಮಾರಿ ಮತ್ತು ಗಂಜಿಯೆಂಬಂತೆ ಇದಕ್ಕೆ ಜೋತು ಬಿದ್ದವ ಕಂಬಳಿಯ ಗಂಟೆಂದು ಭ್ರಮಿಸಿ ಅಪ್ಪಿದ್ದು ಕರಡಿಯಾಗಿ ಹಿಡಿಯಿತೋ ಎಂದು ಎನಿಸಿದ ಕಾಲವಿತ್ತು. ಒಮ್ಮೊಮ್ಮೆ ಅಯ್ಯೋ ದೇವರೇ ಈ ಕೂಪದಿಂದ ನನ್ನನ್ನು ಉದ್ಧರಿಸೋ ಎಂದು ಪ್ರಾರ್ಥಿಸಿ ಹಿಂದಿರುಗಿ ನೋಡಿದಾಗ ರಣ ರಣಿಸುವ ಚೆಂಡೆ ಮದ್ದಳೆ ಜಾಗಂಟೆ ಚಕ್ರತಾಳಗಳ ನಿನಾದಕ್ಕೆ ಮಾರು ಹೋಗಿ ಚೆಂಡೆ ಮದ್ದಳೆಯವರ ಕೈ ಬಚ್ಚಿ ಅದು ನಿಂತರೂ ನನ್ನ ಕುಣಿಯುವ ಹುಮ್ಮಸ್ಸಿಗೆ ಬಿರಿ ಬಿದ್ದುದಿಲ್ಲ. ಆ ಕಾರಣದಿಂದಾಗಿ ಆ ಕೂಡಲೇ ನಾನೊಂದು ಸ್ವರ್ಗವನ್ನೇ ಕಂಡುದುಂಟು. ಇದರಿಂದಾಗಿ ನನ್ನ ಮೊಣಕಾಲ ಅಡಿಯಲ್ಲಿ ತಡೆಯಲಾಗದ ನೋವು ಉಂಟಾಗಿ ಮುಂಬೈಗೆ ತೆರಳಿ ಅಲ್ಲಿ ಎಕ್ಸ್‌ರೇ ಪರೀಕ್ಷೆಗೆ ನನ್ನನ್ನು ನನ್ನ ಅಭಿಮಾನಿಗಳು ಒಳಪಡಿಸಿದಾಗ ಎಕ್ಸ್‌ರೇ ತಜ್ಞ ವೈದ್ಯರು ಉದ್ಗರಿಸಿದ ಮಾತು "ಇವರೇನು ಸರ್ಕಸ್ ಆಟಗಾರರೇ...? ಇವರ ಮುಂಗಾಲ ಅಡಿಯಲ್ಲಿರಬೇಕಾದ ಅಂಟು ಪೂರಾ ಆರಿ ಹೋಗಿದೆ. ಇದು ಸರ್ಕಸ್ಸಿನಲ್ಲಿ ಸೈಕಲು ತುಳಿಯುವ, ರಿಂಗಣ ಕುಣಿಯುವವರಿಗೆ ಬರುವ ಕಾಯಿಲೆ" ಕಾಯಿಲೆ ಎಂದಾಗ ನಾನೂ ಒಂದುರೀತಿಯ ಸರ್ಕಸು ಕುಣಿತದವನೇ ಎಂದು ಮನದಲ್ಲಂದುಕೊಂಡಾಗ ನನ್ನನ್ನು ಅಲ್ಲಿಗೆ ಪರೀಕ್ಷಾರ್ಥ ಕರೆದೊಯ್ದ ಆ ಕಾಲದ ಮುಂಬೈಯ ಬಂಟರ ಯಾನೆ ನಾಡವರ ಸಂಘದ ಅಧ್ಯಕ್ಷರಾಗಿದ್ದ ಡಾ. ಬಾಲಕೃಷ್ಣ ಶೆಟ್ಟರೆಂದರು– ಇವರು ಯಕ್ಷಗಾನದಲ್ಲಿ ವೇಷ ಹಾಕಿ ಕುಣಿದುದರ ಫಲವಿದು ಎಂದಾಗ ಡಾಕ್ಟರ್ ನಿಡಿಯುಸಿರೆಳೆದು ಸೂಕ್ತ ಚಿಕಿತ್ಸೆ ನೀಡಿ ಆ ವೇದನೆಯನ್ನು ಗುಣಪಡಿಸಿದುದು, ನೆನಪಿನ ಎಡೆಯಲ್ಲಿ ಹಚ್ಚ ಹಸಿರು.

ಸಂಸರ್ಗಜಾ ದೋಷಗುಣಂ ಭವಂತಿ ಎಂಬಂತೆ ಗೆಜ್ಜೆ ಬಿಚ್ಚಿ ವೇಷ ಕಳಚಿ ಬಣ್ಣ ಅಳಿಸಿದೊಡನೆಯೇ ನನ್ನನ್ನು ಅಂಟಿದ್ದ ಜುಗಾರಾಟ ಒಡ್ಡಿನ ಹೋರಾಟ ಎಂದಿನಂತೆಯೇ

ದಿಢೀರ್ ಧನವಂತನಾಗಬೇಕೆಂಬ ಹುಚ್ಚು ಹಂಬಲದಿಂದ.

ಮೇಳದ ದುಡಿತ ನನ್ನ ಜುಗಾರಿ ದುಶ್ಚಟಗಳಿಗೆ ಸಾಕಾಗದೆ ಮಕ್ಕಳ ನಗ ನಟ್ಟು ಮಾರಿ ಆಡಿದುದಿದೆ. ಏಕೈಕ ಒಡಹುಟ್ಟಿನ ಆಪದ್ಧನ ಅಂದಿನ ರೂಪಾಯಿ ಎಂಟುನೂರನ್ನು ಮುಗಿಸಿ ಪತ್ತನಾಜೆಗೆ ಬರಿಗೈಯಿಂದ ಬಂದು ಅವರ ದುಡಿತದ ಅನ್ನ ಉಂಡು ಮಲಗಿದುದಿದೆ. ಇದನ್ನರಿತ ಮನೆ ಮಂದಿ ನನಗಾಗಿ ಅತ್ತು ಕರೆದಾಗ ನಾನೂ ಮರುಗಿದುದಿದೆ. ಮದುವೆಯ ತನಕ ಎಲ್ಲರಂತೆ ನಾನೂ ದುಶ್ಚಟಗಳ ಆರಾಧಕನಾಗಿದ್ದರೂ ಆನಂತರ ಪರಸ್ತ್ರೀ ಸಂಗ, ಕುಡಿತಕ್ಕೆ ಅಂಟಿದವನಲ್ಲ. ಜುಗಾರಿಯಲ್ಲಿ ಕಳೆದುದನ್ನು ಪಡೆಯಬೇಕೆಂಬ ಹಂಬಲ. ಒಂದು ದಿನ ನೂರು ಸೋತರೆ ಮರುದಿನ ನೂರಿಪ್ಪತ್ತೈದು ಸಂಪಾದನೆ. ಮೂರನೇ ದಿನ ಅಪ್ಪಪ್ಪ ನಿಧಿ ಸಿಕ್ಕಿತ್ತು ಎಲ್ಲಿ ಮಗನೇ ಎಂದಾಗ ಉಮ್ಮಪ್ಪ ಇದು ಜಾರಿಣಿಯ ಹಾಡು.

ಈ ಪರಿಸ್ಥಿತಿಯಲ್ಲಿ ನನ್ನ ಮಗಳ ಮದುವೆಯು ಸನ್ನಿಹಿತವಾಯಿತು. ಕಲಿತ ಮಗಳು ಸದ್ಗುಣಿ ವರ ಮದುವೆಯು ನಮ್ಮ ಸಮಾಜದ ರೂಢಿಯಂತೆ ವೈಭವಯುತವಾಗಿ ನಡೆಯಬೇಕು. ನನ್ನ ಈ ಮಗಳ ಮದುವೆಯನ್ನು ವ್ಯವಸಾಯ ಬಂಧುಗಳು ನನ್ನನ್ನು ಮೆಚ್ಚಿದ ಸಾಹಿತಿಗಳು, ಊರ ಪರವೂರ ಸ್ವಜಾತಿ ಪರಜಾತಿ ಸದ್ಗಹಸ್ಥರು ವೀಕ್ಷಿಸುತ್ತಲೇ ಇದ್ದರು. ನನ್ನದಾದರೋ ದವಲತ್ತು ನೋಡುವಾಗ ದಿವಾನಗಿರಿ, ಕಿಸೆ ನೋಡಿದರೆ ಖಾಲಿ ನೆರಿ ಎಂಬಂತಿತ್ತು. ಆ ಕಾಲದ ಜುಗಾರಿಯಾಟದ ನನ್ನ ಗುಣದಿಂದ ಸಂಬಳಕ್ಕೆ ನಿತ್ಯ ದುಡಿಯುವ ನನ್ನ ಪರಿಸ್ಥಿತಿಯೇ ಹೀಗಾದರೆ ನನ್ನಿಂದ ಯಾವ ಪ್ರಯೋಜನವನ್ನೂ ಪಡೆಯದ ಮನೆಯವರ ಪರಿಸ್ಥಿತಿ ಹೇಗಿರಬಹುದು...? ಇದು ನನ್ನ ಜೀವನ್ಮರಣದ ಪ್ರಶ್ನೆ. ನನ್ನ ಜುಗಾರಾಟದ ಗುಣವನ್ನು ಅರಿತ ನನ್ನ ಯಜಮಾನರೊಡನೆ ನನಗೆ ಸಹಾಯ ಮಾಡಿ ಎಂದು ಕೈಯೊಡ್ಡಲೇ...? ಯಾವ ಮುಖದಿಂದ ಕೇಳಲಿ...? ಅವರು ಕೊಡಬಹುದು. ಜುಗಾರಿ ಗುಣನಿಧಿಯಾದ ನಾನು ಅದನ್ನು ಅವರಿಗೆ ಹಿಂದಿರುಗಿಸುವ ನೆಂಬ ಭರವಸೆಯಾದರೂ ಏನು...?

ಮುಳುಗುವ ಮೊಸಳೆಯನ್ನು ತಬ್ಬುವ ಎಂಬ ಲೋಕೋಕ್ತಿಯಂತೆ ಕೊಟ್ಟರೆ ಕೊಡಲಿ ಬಿಟ್ಟರೆ ಬಿಡಲಿ ಎಂದು ಕೇಳಿಯೇ ಬಿಟ್ಟೆ. ಮಗಳ ಮದುವೆ ಕೈಯ್ಯಲ್ಲಿ ಕಾಸಿಲ್ಲ. ಸಾವಿರ ರೂಪಾಯಿ ಕೊಟ್ಟರೆ ಮದುವೆ. ಇಲ್ಲವಾದರೆ ಎಂದಾಗ ನನ್ನ ಮಗಳ ಮೇಲೆ ತನ್ನ ಮಗಳಷ್ಟೇ ಅಭಿಮಾನವಿದ್ದ ಶೆಟ್ಟರು ಒಮ್ಮೆ ನನ್ನ ಮೊಗ ನೋಡಿ "ಈಗಲಾದರೂ ಪರಿಸ್ಥಿತಿ ಅರಿವಿಗೆ ಬಂತೇ...? ಇದನ್ನು ಮರೆಯಬೇಡಿ. ರೂಪಾಯಿ ಒಂದು ಸಾವಿರವಲ್ಲ, ಬೇಕಾದಷ್ಟು ಕೊಡುವ ಮದುವೆ ಸೊಗಸಾಗಿ ಮಾಡಿ ಹುಡುಗ – ಹುಡುಗಿ ಖುಷಿ ಪಡೆಯುವಂತೆ ನಡೆಯಲಿ" ಎಂದಾಗ ನನ್ನ ಹಿಂದಿನ ಸ್ಥಿತಿ–ಗತಿಯನ್ನು ಸಿಂಹಾವಲೋಕನ ಮಾಡಿ ನನಗೊದಗಿದ ಗತಿಗೆ ಮರುಗಿ ಭೂಮಿತಾಯಿ ಬಾಯಿ ತೆರೆ ಎಂದು ಅತ್ತು ಯಜಮಾನರ ಕಾಲಿಗೆ ಬೀಳುವ ಪರಿಸ್ಥಿತಿ ನನ್ನದು.

ಮದುವೆಯು ಸಾಂಗವಾಗಿ ನೆರವೇರಿತು. ಅದರೊಂದಿಗೆ ನನ್ನ ಜುಗಾರಾಟದ ದುಶ್ಚಟವೂ ಮದುಮಕ್ಕಳಿಗೆರೆದ ಧಾರಾಜಲದೊಂದಿಗೆ ತೊಳೆದು ಹೋಯಿತು. ಕೆಟ್ಟ ಮೇಲೆ ಬುದ್ಧಿ ಬಂತು. ಅಟ್ಟ ಮೇಲೆ ಒಲೆ ಉರಿಯಿತು. ಕೋಳಿ ಕೆಲೆಯಿತು. ನಾನು

ಎಚ್ಚರಗೊಂಡಾಗ ಬೆಳ್ಳಂಬೆಳಗು.

ದೇವರೇ... ಇದೇಕೆ ಬರೆದೆ...? ಯಕ್ಷಗಾನ ಕ್ಷೇತ್ರದ ಹಿರಿ – ಕಿರಿಗಳೆಲ್ಲಾ ತಮ್ಮ ಜೀವನ ಚರಿತ್ರೆ, ದಿನಚರಿ, ಅನುಭವಗಳನ್ನು ಬರೆದು ತಮ್ಮ ಕಿರುಗೆಲಸವನ್ನು ಮೇರುವಾಗಿ ತೋರಿಸಿ ತಮ್ಮ ದುರ್ಗುಣಗಳನ್ನು ಗೌಪ್ಯವಾಗಿ ಬಚ್ಚಿಟ್ಟರು ಎಂಬುದನ್ನು ನೆನೆದಾಗ ಈ ಪದವು ನೆನಪಿಗೆ ಬಂದು ನನಗೆ ಸಮಾಧಾನ– 'ನಗೆಯು ಬರುತಿದೇ ಎನಗೆ ನಗೆಯು ಬರುತಿದೆ.....'

**(ಇದರ ನಂತರದ ವಿವರಗಳು ಲಭ್ಯವಿಲ್ಲ.... ಆದರೆ ಯಕ್ಷಗಾನದ ಕುರಿತಂತೆ ಅವರ ವಿಚಾರಗಳು ಇನ್ನು ಮುಂದಿನ ಪುಟಗಳಲ್ಲಿವೆ. ಅದನ್ನು ಈ ಆತ್ಮ ಕಥನದ ಮುಂದುವರಿದ ಭಾಗವಾಗಿ ಓದಿಕೊಳ್ಳಬಹುದು.... –ಸಂ.)**


* * *

... ತಂದೆಯವರೊಂದಿಗೆ ನಮಗೆ ಸಲುಗೆಗಿಂತ ಭಯ ಭಕ್ತಿಯೇ ಹೆಚ್ಚು. ಶೀಘ್ರ ಕೋಪಿ, ಮೃದುಹೃದಯಿ. ಸ್ವಚ್ಛತೆ, ಶಿಸ್ತು, ಅಚ್ಚುಕಟ್ಟುತನಗಳಿಗೆ ಬಹಳ ಮಹತ್ವ ನೀಡುವವರು. ನಾವು ಪ್ರಾಯ ಪ್ರಬುದ್ಧರಾದಾಗ, ಎಲ್ಲ ವಿಚಾರಗಳಲ್ಲಿ ನಮ್ಮ ಸಲಹೆ ಕೇಳಿ ಮುಂದುವರಿಯುತ್ತಿದ್ದರು. ಅವರು ಮನೆಯಲ್ಲಿ ನಡೆಸುತ್ತಿದ್ದ ಪುರಾಣ ಪ್ರವಚನ ಆನಂದದಾಯವಾಗಿತ್ತು. ಮಕ್ಕಳನ್ನು ಬೆಳೆಸಿ ನೆಲೆ ತಲಪಿಸಿದ್ದಾರೆ.. ಅವರ ನೆನಪು, ಕೀರ್ತಿ ನಮಗೆ ಸ್ಫೂರ್ತಿ.

**ದುರ್ಗಾಪ್ರಸಾದ ಆರ್. ರೈ**

ನಮ್ಮ ತಂದೆಯವರ ಅಜ್ಜ ರಾಮಣ್ಣ ರೈ ಭಾಗವತರು. ತಂದೆ ಮೋನಪ್ಪ ರೈ ದೊಡ್ಡ ಕಲಾವಿದರು. ಚಿಕ್ಕಪ್ಪ ದೂಮಣ್ಣ ರೈಗಳು ಅರ್ಥದಾರಿ. ತಂಗಿ ಭವಾನಿ ಒಳ್ಳೆಯ ಕಂಠವಿದ್ದ ಹಾಡುಗಾರ್ತಿ. ಅವಳ ವಾಚನಕ್ಕೆ ಮೋನಪ್ಪ ರೈಗಳೂ ರಾಮಯ್ಯ ರೈಗಳೂ ಅರ್ಥ ಹೇಳುತ್ತ, ಮನೆಯಲ್ಲಿ ಪ್ರವಚನ ನಡೆಯುತ್ತಿತ್ತು. ಈ ಪರಂಪರೆಯಿಂದ ಮಹಾನ್ ಕಲಾವಿದರಾಗಿ ಬೆಳಗಿದರು...

**ವೇದಾ ಜಿ. ಶೆಟ್ಟಿ**



# ನನ್ನ ಕಾಲದ ಯಕ್ಷಗಾನ

ನನ್ನ ಕೆಲಮಂದಿ ಮಿತ್ರರು ಯಕ್ಷಗಾನ ಕಲೆಯ ಕುರಿತು ಲೇಖನವನ್ನು ಕೊಡಬೇಕೆಂದು ಕೇಳಿಕೊಂಡ ಪ್ರಕಾರ ಈ ಬರಹವನ್ನಾರಂಭಿಸಿದ್ದೇನೆ. ಯಕ್ಷಗಾನದ ಪೂರ್ವರೂಪವನ್ನು ತಿಳಿದುಕೊಳ್ಳಲು 'ನಾನೆಷ್ಟರವನು', 'ಶತಾಯುಷಿ' ಏನೂ ಅಲ್ಲ. ರಂಗದಲ್ಲಿ '45' ವರ್ಷಗಳಿಂದ ದುಡಿಯುತ್ತಾ ಇದ್ದೇನೆ, ಅಷ್ಟೆ. ಆದರೆ, ನನ್ನ ತೀರ್ಥರೂಪರು ಮನೆಯಲ್ಲಿದ್ದಾರೆ. ವರ್ಷ '90' ಮೊನ್ನೆಗೆ ದಾಟಿತಂತೆ. ಯಕ್ಷಗಾನ ಕಲಾಮಾತೆಯ ಸೇವೆಯನ್ನು 1895ರಿಂದ ಆರಂಭಿಸಿ 1952ರ ತನಕ ಮುಂದುವರಿಸಿದ ವಯೋವೃದ್ಧರು. ಅವರಿಂದ ನಾನು ತಿಳಿದುದನ್ನು, ಅಲ್ಲದೆ ನನ್ನ ಜೀವನದ ಅನುಭವಗಳನ್ನು ತಿಳಿಸುತ್ತೇನೆ. ಯಕ್ಷಗಾನದ ಪ್ರಾಚೀನತೆಯನ್ನು ಹೇಳತೊಡಗಿ ಕೆಲವರ ಬಾಯಿಂದ ಕೆಲವು ದಂತಕಥೆಗಳನ್ನೂ ಕೇಳಿದ್ದೇನೆ. ಅವರು ಇದನ್ನು ರಾಮಾಯಣಕ್ಕಿಂತಲೂ ಹಿಂದೊಯ್ದಿದ್ದಾರೆ. ದಕ್ಷಿಣದ ಲಂಕೆಯಲ್ಲಿ ಕುಬೇರನ ಜೊತೆಯಲ್ಲಿದ್ದ ಯಕ್ಷರೆಲ್ಲಾ ಲಂಕೆಯನ್ನು ರಾವಣನಿಗೆ ಬಿಟ್ಟುಕೊಟ್ಟ ಉತ್ತರದ ಅಳಕಾವತಿಗೆ ಈ ದಾರಿಯಿಂದ ಹೋಗುವಾಗ ಅಲ್ಲಲ್ಲಿ ಮನರಂಜನೆಗಾಗಿ ಆಡುತ್ತಿದ್ದ ಆಟವನ್ನು ಆಯಾ ಪ್ರಾಂತೀಯರು ಅವರವರ ಅಭಿರುಚಿಗೆ, ಸಂಸ್ಕೃತಿಗೆ ಸರಿಯಾಗಿ ತಿಳಿದುಕೊಂಡು ಆಟವಾಡತೊಡಗಿದರಂತೆ. ಇದರಲ್ಲೆಷ್ಟು ಸತ್ಯಾಂಶವಿದೆಯೋ, ದೇವರಿಗೆ ಗೊತ್ತು. ಭಾಗವತದಲ್ಲೊಂದು ಕಥೆಯಿದೆ.

ವಜ್ರನಾಭನ ಮಗಳು ಪ್ರಭಾವತಿಯನ್ನು ಮದುವೆಯಾಗಲು ಮನ್ಮಥನು, ಯಾದವರೊಂದಿಗೆ ದಶಾವತಾರ ಮೇಳ ಕಟ್ಟಿಕೊಂಡು ಹೋಗಿ ಆಟವಾಡಿ ಪ್ರಭಾವತಿಯನ್ನು ಮದುವೆಯಾದನೆಂದು ಈ ಕಥೆಯನ್ನು ನಾನೂ ಆಡಿದ್ದೇನೆ. ಹಾಗೆಯೇ ನಾನಾ ಅಭಿಪ್ರಾಯವಿದೆ.

ಅದು ಹೇಗೂ ಇರಲಿ. ನನ್ನ ಅಭಿಪ್ರಾಯದಂತೆ ಒಂದೆರಡು ಶತಮಾನಕ್ಕಿಂತ ಹಿಂದಿನಿಂದ ಈ ಕಲೆ ಬೆಳಕನ್ನು ಕಂಡಿರಬೇಕು. ಯಾವನೋ ಒಬ್ಬ ಮಹಾನುಭಾವನು ಇದನ್ನು ಆರಂಭಿಸಿರಬೇಕು. ಅವನ ಕಾಲವನ್ನು ತಿಳಿಯುವ ಶಕ್ತಿ ನನ್ನ ಅಲ್ಪ ಮತಿಗಿಲ್ಲ. ಅದು ಸಂಶೋಧಕರ ಪಾಲಿಗಿರಲಿ. 'ಯಕ್ಷಗಾನ', 'ಆಟ' ಈ ಶಬ್ಧ ಕೇಳಿದೊಡನೆಯೇ ಹಳ್ಳಿಯಲ್ಲಿ ವಾಸಿಸುವ, ಮಕ್ಕಳಾದಿಯಾಗಿ ಊರುಗೋಲಿನ ಮುದುಕರೂ ಕಿವಿ ನಿಗುರಿಸುತ್ತಾರೆ. ಮಾತ್ರವಲ್ಲ, ರಾತ್ರಿ ಎಡವಿ ಕಡವಿಯಾದರೂ ಬಂದು ಆಟ ನೋಡುತ್ತಾರೆ. ಒಂದೆರಡು ತಿಂಗಳಿನ ಚಿಕ್ಕ ಮಕ್ಕಳನ್ನೆತ್ತಿಕೊಂಡು ಹೆಂಗಸರು, ಆ ಹಿಮದ ಪೆಟ್ಟನ್ನು ತಿನ್ನುತ್ತಾರೆ. ಇದು ನನ್ನ ಪ್ರತ್ಯಕ್ಷಾನುಭವ. ಹಾಗಿದ್ದರೆ ಅದು ಎಂತಹ ಆಕರ್ಷಣೀಯವಾದ ಕಲೆಯೆಂದು ಪ್ರತಿಯೊಬ್ಬನೂ ತಿಳಿಯಬಹುದಾಗಿದೆ. ಹೌದು, ಇದು ತ್ರಿವಾರ ಸತ್ಯ. ಈ ಕಲೆಯು ಬರೇ ಮನರಂಜನೆಗಾಗಿರದೆ, ಮಾನವನ ನೈತಿಕ ಮಟ್ಟವನ್ನು ತಿದ್ದಿಕೊಳ್ಳಲು,

ಬುದ್ಧಿವಿಕಾಸ ಹೊಂದಲು ಅನುಕೂಲವಾಗುವಂತಹ, ಭವ್ಯವಾದ ಕಲೆ. ನವ್ಯವಾದ ಕಲೆಯೆಂದು ನಾನು ಎದೆತಟ್ಟಿ ಹೇಳಬಲ್ಲೆ. ಇದರಿಂದಾಗಿ ವಿಚಾರಶೀಲರು, ಸಮಾಜದ ಭದ್ರತೆಯನ್ನು ಕಾಪಾಡಿಕೊಳ್ಳಬಹುದು. ತಮ್ಮ ಕುಂದು ಕೊರತೆಯನ್ನು ನಿವಾರಿಸಿಕೊಳ್ಳ ಬಹುದು. ಅಂಥ ಶ್ರೇಷ್ಠವಾದ ಕಲೆ. ನಮ್ಮ ದಕ್ಷಿಣೋತ್ತರ ಕನ್ನಡ ನಾಡಿನಲ್ಲಿ ನಮ್ಮ ಜೀವನದುಸಿರಿನಂತೆ ವ್ಯಾಪಕವಾಗಿರುವುದರಿಂದ ನಾವು ಹೆಮ್ಮೆ ಪಡಬೇಕಾಗಿದೆ. ಈ ಕಲೆಯನ್ನು ಉಳಿಸುವ ಪ್ರಯತ್ನವನ್ನು, ವಿದ್ವಾಂಸರು, ಶ್ರೀಮಂತರು ಎಲ್ಲಾ ಕೂಡಿ ಮಾಡಲೇಬೇಕಾಗಿದೆ. ಈ ಕಲಾ ಮಾತೆಯ ಸೇವೆಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟು, ದುಡಿದ ನನ್ನ ತೀರ್ಥರೂಪರೊಂದಿಗೆ ನಾನು 1927ನೇ ಜನವರಿಯಲ್ಲಿ, ಇಚ್ಲಂಪಾಡಿ ಮೇಳಕ್ಕೆ ಹೋದೆ. ಆಗ ನನ್ನ ಪ್ರಾಯ 11 ತುಂಬುತ್ತಿತ್ತು. ಆದರೂ ರಕ್ತಗತವಾಗಿ ಬಂದ ಗುಣವೆಂಬಂತೆ ಇದರ ರೂಪರೇಷೆಗಳನ್ನು ಮನದಟ್ಟು ಮಾಡುತ್ತಾ ಇದ್ದೆ. ಜೊತೆಯಲ್ಲಿ ಅಪ್ಪು ಹಾಸ್ಯಗಾರರಿಂದ, ಕೆ. ಗುಂಡಣ್ಣನವರಿಂದ, ನನ್ನ ತಂದೆಯವರಿಂದ ಈ ಕಲೆಯ ಕುರಿತಾಗಿ ಅನುಭವ ಮಾಡಿಕೊಳ್ಳುತ್ತಾ ಬಂದೆ. ಯಕ್ಷಗಾನದಲ್ಲಿ ಆಂಗಿಕ, ಆಹಾರ್ಯ, ವಾಚಿಕ, ಸಾತ್ವಿಕವೆಂದು ಹೇಳಲ್ಪಡುವ ನಾಲ್ಕು ಅಂಗಗಳೂ ಇವೆ. ಇತ್ತೀಚೆಗೆ ಆಂಗಿಕಾಭಿನಯದ ಕಡೆ ನಟರ ಲಕ್ಷ ಕಡಿಮೆಯಾಗಿದೆ ಎಂದು ಅವರಾಡಿಕೊಳ್ಳುತ್ತಿದ್ದರು. ನಾನು ಕಂಡಂತೆ, ಕೆ. ಗುಂಡಣ್ಣನವರ ಆಂಗಿಕಾಭಿನಯ ಮೆಚ್ಚತಕ್ಕದ್ದಿದೆ. ಅಪ್ಪು ಹಾಸ್ಯಗಾರರಲ್ಲಿಯೂ ನಾಟ್ಯ, ಅಭಿನಯವಿತ್ತು. ಅವರಲ್ಲಿ ಕಡಿಮೆಯಾಗಿದ್ದ ಪುರಾಣಗಳ ಅನುಭವದ ಮಾತು ತಂದೆಯವರಲ್ಲಿತ್ತು. ಮಾತಿನ ಸರಣಿ, ಕೋಳುಳಿ ಸುಬ್ಬಣ್ಣ ಎಂಬ ಬಣ್ಣದ ವೇಷಧಾರಿಯಲ್ಲಿತ್ತು. ಹೀಗೆಯೇ ಒಬ್ಬೊಬ್ಬರಲ್ಲಿ ಒಂದೊಂದು ರೀತಿಯ ಗುಣವಿದ್ದರೂ ಈ ಕಲೆಯ ಕ್ರಮ ಹೇಗಿತ್ತೆಂಬುದು ಮುಖ್ಯ ವಿಷಯ.

ಆಂಗ್ಲ ಭಾಷೆಯಲ್ಲಿ (ಗ್ರೀನ್ ರೂಮ್) ಎಂದೂ, ದೇವಭಾಷೆಯಲ್ಲಿ (ನೇಪಥ್ಯ) ವೆಂದೂ ಕರೆಯುವುದನ್ನೇ ಆಟದಲ್ಲಿ 'ಚೌಕಿ' ಎಂದು ಕರೆಯುವ ವಾಡಿಕೆ. ಅಲ್ಲಿ ಗಣಪತಿ ಪ್ರಾರ್ಥನೆ, 'ಗಜಮುಖದವಗೆ ಗಣಪಗೆ' ಎಂಬ ಸೊಲ್ಲಿನಿಂದ ಆರಂಭವಾಗುತ್ತದೆ. ಆಗ ಇಬ್ಬರು ಕೋಡಂಗಿ ವೇಷವೆಂದು ಹೆಸರು, ಮುಖಕ್ಕೆ ನಾಲ್ಕು ಜೇಡಿಯಿಂದ ಗೆರೆ ಎಳೆದು, ತಲೆಗೆ ಕೆಂಬಣ್ಣದ ರುಮಾಲು ಸುತ್ತಿ ಅದರ ಎಡೆಗೆ ಮಾವಿನ ಸೊಪ್ಪನ್ನು ತುರುಕಿಸಿಕೊಂಡು ದೇವರಿಗೆ ಕೈಮುಗಿದು ನಿಂತಿರುತ್ತಾರೆ. ಇದು ನನ್ನ ಮೊದಲಿನ ವೇಷ. ನಾನು ಕೋಡಂಗಿಯಲ್ಲೇ ನಾಟ್ಯವಾಡುತ್ತಾ ಬಂದವ. ಈ ಗಣಪತಿ ಪ್ರಾರ್ಥನೆ ಕಳೆದು ಆರತಿ ಸ್ವೀಕಾರವಾದೊಡನೆ ಕೋಡಂಗಿ ಹಾಕಿದವ ರಂಗಸ್ಥಳಕ್ಕೆ ಅಪ್ಪಣೆ ಕೇಳಿ ಆಯಾ ಮೇಳದ ದೇವರ ಹೆಸರಿನಿಂದ 'ಗೋವಿಂದ' ಹಾಕುತ್ತಾ ರಂಗ ಪ್ರವೇಶಕ್ಕೆ ಬರುತ್ತಾರೆ. ಆಮೇಲೆ ಸಭಾ ಲಕ್ಷಣದ ಪದ್ಯಗಳು ಕ್ರಮದಂತೆ. ಇಷ್ಟು ಕ್ರಮ ಸಾಧಾರಣ ಈಗಲೂ ಬಯಲಾಟದಲ್ಲಿ ಇದೆ. ಸ್ಟೇಜು ಕಟ್ಟಿ ಆಡುವ ಆಟದಲ್ಲಿಲ್ಲ. ಆಮೇಲೆ ನಿತ್ಯವೇಷ. ಆ ಪದ್ಯಗಳೂ ಸಭಾಲಕ್ಷಣದ ಪುಸ್ತಕದಲ್ಲಿದೆಯೆಂದು ಕಾಣುತ್ತದೆ. ಆ ಪದ್ಯಗಳಿಗೆ ಸರಿಯಾಗಿ ಮುದ್ರೆಗಳನ್ನು ತೋರಿಸಿ ವೈವಿಧ್ಯಪೂರ್ಣವಾದ ನಾಟ್ಯದಿಂದ ಜನರಿಗೆ ಸಂತೋಷವನ್ನೊದಗಿಸುತ್ತಿದ್ದರು. ಇದು ನನ್ನ ಎರಡನೆ ಹಂತದ ಸೇವೆ. ಆಮೇಲೆ ಗಣಪತಿ ಪೂಜೆ ರಂಗದಲ್ಲೇ ಆಗಬೇಕಾಗಿದೆ. ಆ ಗಣಪತಿ ಪೂಜೆಯ ಕೊನೆಯ

ಅಂಗದಲ್ಲಿ ಗಣಪತಿ ಕೌತುಕವೆಂದು ಹೇಳಲ್ಪಡುವ ನಾಟ್ಯದ ಪದ್ಧತಿ ಇದೆ. ನಾನು ತಿಳಿದಂತೆ ಆ ಬಾಯಿ ತಾಳ ಹೀಗಿದೆ. ಏಕತಾಳ ನಿಧಾನಗತಿ. "ಕ್‌ಡ್ತ್‌ಕ್‌ತ್ಯೈ... ತಿತ್ತಿತ್ತೈ... ಕಾಂಕ್‌ಡ್ತ್‌ಕ್ ತತ್ತರಿ ತತ್ತೋಂ ಕಿಟತಕ ಅರುದಿನ ಮರುಮಗ ಯನಕಿಟ ಅರಳಿಯ ದೇವರ ಗಣಪತಿ ಝೇಂ, ಝೇಂ, ಝುಕ್ಕಿಟ ಮುದರಿಗಿಣಾಂ ಝೇಂ ಝೇಂ ಝುಕಗ್ಗಿಟ ಮದರಿಗಿಣಾಂ, ದಿನ್ನಾಂ, ದಿನ್ನಾಂ ತರಿಕ್ಕುದಿರಿಕ್ಕು, ಆನೆಮೊಗತ್ತವ, ಯತ್ತೋರ್ವಿನಯಾಂ, ಅಕ್ರುತಾಂ, ದಿಕ್ರುತಾಂ ತಕ್ಕು, ದಿಕ್ಕು, ದಿತ್ತಳಾಂಗೊ ದದಿಗಿಣತೊ ದಿದ್ಧಿಂ, ತ್ತಳಾಂಗೋ ದದಿಗಿಣಕೊ, ದಿದ್ಧಿಂತ್ತಳಾಂಗೊ ದದಿಗಿಣತೋ" ಇಲ್ಲಿಂದ ಏ ದೇವ ದೇವದೇವರ ದೇವ ಎಂದು ಕುಣಿಸಿದಲ್ಲಿಗೆ ನಿತ್ಯ ವೇಷದ ಕೆಲಸ ಮುಗಿಯಿತು. ಆಮೇಲೆ ಷಣ್ಮುಖ ವೇಷವೆಂದಿತ್ತು. ಆಗ ತಾನೇ ನಿತ್ಯವ ವೇಷ ಮಾಡಿ ಕುಣಿದ ಹುಡುಗರ ಪೈಕಿ ಒಬ್ಬ ತಲೆಗೆ ಸಣ್ಣ ಕಿರೀಟವಿಟ್ಟುಕೊಂಡು ತೆರೆಯಲ್ಲಿ ಕುಣಿಯುವ ಪದ್ಧತಿ.

ಪದ॥ ಏಕತಾಳದಲ್ಲಿ, ಕುಂಡಲಾಮಣಿಭೂಷಣಿ ಹೀಗೆ ಬೇರೆ ಬೇರೆ ಪದ್ಯಗಳಿಂದ ಕುಣಿಸಿ, ಈ ಮೊದಲು ಕೋಡಂಗಿ ಮಾಡಿದವನನ್ನು ಮಾತನಾಡಿಸಿ ಹಿಂದೆ ಹೋಗುವ ಕ್ರಮ. ಆಮೇಲೆ ಅರ್ಧನಾರಿ ಎಂಬ ಒಂದು ವೇಷವಿತ್ತು. ನಾನು ಕೇಳಿ ತಿಳಿದಂತೆ ಅರ್ಧನಾರಿ ವೇಷದ ಮುಖದ ಬಣ್ಣದಲ್ಲಿಯೂ ವೈವಿಧ್ಯವಿತ್ತಂತೆ. ಅಂದರೆ ಬಲಭಾಗಕ್ಕೆ ಮೀಸೆ ಬರೆದು, ಗಂಡಿನಂತೆಯೂ ಅರ್ಧಭಾಗಕ್ಕೆ ಸ್ತ್ರೀ ವೇಷದಂತೆಯೂ ಬರೆದು ಒಂದು ಪ್ರವೇಶದಲ್ಲಿ ಒಂದು ಭಾಗವನ್ನು ಮತ್ತೊಂದು ಪ್ರವೇಶದಲ್ಲಿ ಇನ್ನೊಂದು ಭಾಗವನ್ನು ತೋರಿಸಿ ಬೇರೆ ಬೇರೆ ರೀತಿಯಲ್ಲಿ ಕುಣಿದು ಕೋಡಂಗಿ ಮಾಡಿದವನನ್ನು ಮಾತನಾಡಿಸಿ ಮೂರನೆಯ ಸರದಿ ಮುಖಪೂರ್ಣತೋರಿಸಿ ಕುಣಿದು ನೇಪಥ್ಯ ಯಾ ಚೌಕಿ ಸೇರುವ ಕ್ರಮವಿತ್ತು. (ನಾನು ಅರ್ಧನಾರಿ ವೇಷವನ್ನು ನೋಡಿದ ರೀತಿಯಲ್ಲಿ ಸ್ತ್ರೀ ವೇಷ ಮಾಡಿ ಕಚ್ಚೆಕಟ್ಟಿ ಬರುತ್ತಿದ್ದರು). ಆಮೇಲೆ ಚಪ್ಪರ ಮಂಚವೆಂಬ ಒಂದು ಭಾಗವಿತ್ತೆಂದು ತಂದೆಯವರು ಹೇಳುತ್ತಾರೆ. ಸೊಂಟದಿಂದ ಮೇಲೆ ಸೀ ವೇಷ ಮಾಡಿ ಸೊಂಟಕ್ಕೊಂದು ಮಂಚದ ಹಾಗೆ ಎಡಬಲದಲ್ಲಿ ಕಾಣುವಂತಹ ತುಂಡು ರಟ್ಟನ್ನು ಕಟ್ಟಿ ಅದನ್ನು ವಸದಲ್ಲಿ ಮುಚ್ಚಿಕೊಂಡು. ಈ ವೇಷ ಮಾಡಿದವನು ಸೊಂಟದ ಮೇಲಿಂದ ಬಾಗಿ ಮಲಗಿಕೊಳ್ಳುವುದು ಸೊಂಟದಿಂದ ಕೆಳಗೆ ಗಂಡಿನ ಹಾಗೆ ಉಡುಪು ಧರಿಸಿ ಕಾಲಿಗೆ ಗೆಜ್ಜೆ ಕಟ್ಟಿ ಕುಣಿದು (ಭಾಗವತರು ಹಾಡುವ ಪದ್ಯಕ್ಕೆ, ತಾಳಕ್ಕೆ ಸರಿಯಾಗಿ) ಮುಂದೋ ಹೋಗುವಾಗ ಪ್ರೇಕ್ಷಕರಿಗೆ, ಒಬ್ಬಾಕೆ ಹೆಣ್ಣು ನಿದ್ದೆ ಮಾಡುತ್ತಿದ್ದವಳನ್ನು ಹೊತ್ತುಕೊಂಡು ಒಬ್ಬ ಮನುಷ್ಯ ಹೋಗುತ್ತಿದ್ದ ಚಿತ್ರ ಕಾಣುತ್ತಿತ್ತಂತೆ ಎಂದು ತಂದೆಯವರು ಹೇಳಿದ ಅನುಭವ. ನಾನು ನೋಡಿಲ್ಲ. ಇದು ಸಾಮಾನ್ಯರಿಂದ ಸಾಧ್ಯವಾಗುವಂಥಾದ್ದಲ್ಲ. ಇದಕ್ಕೆ ತುಂಬಾ ಅಭ್ಯಾಸಬೇಕೆನ್ನುತ್ತಿದ್ದರು. ಇದನ್ನು ನನ್ನ ತಂದೆಯವರ ಗುರುಗಳಾದ ಮುತ್ತಯ್ಯ ಶೆಟ್ಟರು ಮಾಡುತ್ತಿದ್ದರಂತೆ. ಈಗ ಆ ಪದ್ಧತಿ ಗೊತ್ತಿದ್ದವರು ಯಾರೂ ಇಲ್ಲ. ಆದ್ದರಿಂದ ಆ ವಿಷಯವಾಗಿ ಅನುಭವ ಕೊಡುವವರು ನನಗೆ ಸಿಕ್ಕಿಲ್ಲ.

ಆಮೇಲೆ "ಕಟ್ಟುಹಾಸ್ಯ" ಹಾಸ್ಯಗಾರನಿಗೆ ತಿಳಿದ ರೀತಿಯಲ್ಲಿ ಬೇರೆ ಬೇರೆ. ನಂತರ, ಮುಖ್ಯ ಸ್ತ್ರೀವೇಷ. ಇದರಲ್ಲಿ, ನಾಟ್ಯದ ವೈವಿಧ್ಯತೆ ಇತ್ತು. ಭಾವಪೂರ್ಣವಾಗಿ

ಕುಣಿಯುತ್ತಿದ್ದರು. ನಾನು ಕಂಡ ಸ್ತ್ರೀವೇಷಧಾರಿಗಳ ಪೈಕಿ ಐತಪ್ಪ ಶೆಟ್ಟರ ನಾಟ್ಯ ಮೋಹಕವಾಗಿತ್ತು. ಆ ಮೇಲೆ ಪೀಠಿಕೆ. ಪೀಠಿಕೆಯಲ್ಲಿ ಮದ್ದೆಗಾರರು ತನ್ನ ಚುರುಕಾದ ಕೈಚಮತ್ಕೃತಿಯಿಂದ ಚೆಂಡೆಯಲ್ಲಿ ಕೆಲಸ ಮಾಡಿ ಮುಕ್ತಾಯ ಮಾಡಿದಾಗ,

ಅಂದಿನ ಕಥೆ ಭಾರತ ಯಾ ಭಾಗವತದ್ದಾದರೆ, ಈ ಕೆಳಗಿನ ಶ್ಲೋಕ,

ಹರಸುತ ಗಜವಕ್ತ್ರಂ, ವಿಘ್ನಜೀಮೂತವಾಯು, ದಿನಮಣಿ
ಶತತೇಜಂ, ಪ್ರಣತಭಕ್ತೇಸ್ಮಿತಾರ್ಥಂ, ತಮದನುಜವಿನಾಶಂ,
ಭೂಧರಂ, ರಾಜೀವಾಕ್ಷಂ, ಕಮಲಜಸುರಸ್ತೋತ್ರಂ, ವೇದವೇದ್ಯಂ ನಮಾಮಿ
ಧಿತ್ತ –ಚೆಂಡೆ ಬಾರಿಸುವಿಕೆ.

ರಾಮಾಯಣದ ಕಥೆಯಾದರೆ,

ಮದಗಜ ವದನಾಂತಾಂ, ವಿಘ್ನ ವಿಚ್ಛೇದದಕ್ಷಾಸರ ಸಿಜಭವಜಾಯಾ
ಭಾರತೀ ಸೋಮಾವೇಶಂ, ನಿಶಿಚರಕುಲಕಾಲಂ, ರಾಘವಂ, ಜಾನಕೀಶಂ,
ಪ್ರತಿದಿನ ಮಪಿಭಕ್ತ್ಯಾ ಮೌನಿವಾಲ್ಮೀಕಿ ವರ್ಯಾವಂಚಿಷ್ವಾವರ ವೀರ
ಕೇದಳ ವಿಭುಃ ರಾಜೀಕತಃ ಸೂನುನಾಂ ಶಿಷ್ಯೇಣ ಪ್ರವರೇಣ ಶಂಕರ
ಕವಿಃ ರಾಮಾಯಣಂ ವರ್ಧತೇ–

ಇನ್ನು ಮುಂದೆ ಬಾಯಿ ತಾಳ (ಇದು ನನ್ನ ಪೂಜ್ಯ ಗುರುಗಳಾದ ಮವ್ವಾರು ಕೃಷ್ಣ ಭಾಗವತರಿಂದ ಕಲಿತ ರೀತಿಯಿಂದ ಬರೆಯುತ್ತಿದ್ದೇನೆ).

ರಾಗ ನಾಟಿ ಏಕತಾಳದಲ್ಲಿ –

ಧಿಮಿತಕಿಟದಿಂದತ್ತಾಂ, ತಾಹಕದಿಂದತ್ತಾತದ್ಧಿಮಿತ ಕಿಟದಿಂದತ್ತೇ ತಾರುತ ಧಿಮಿತದಿಂದತ್ತೇ, ಇದನ್ನೇ ಗತಿಯೇರಿಸಿ ಬಾರಿ ಬಾರಿಗೂ ಲಯಗತಿಯನ್ನು ಮುಂದರಿಸಿ ಮುಕ್ತಾಯ ಮಾಡಿ ತಾನನಾಂತನ ದಿರಿನಾ ಎಂದು ಹೇಳಿ ಪುನ: ಮುಕ್ತಾಯ ಮಾಡಿ ನಿಲ್ಲಿಸುತ್ತಿದ್ದರು.

ಮುಂದೆ ರಾಗ– ಅಭೇರಿ, ತಾಳ ಏಕದಲ್ಲಿ

ಹರಿಹರಾ ಕೃತುಹರಾ ಅಮರ ಪೂಜಿತುರೇ ॥ ಪಲ್ಲ ॥
ವಾಮನ ರೂಪ ಏಕದಂತ ಚತುರಾನನ ಪೂಜಿತ ಲಂಬೋದರ ಹರೇ ॥
ಹರಿಹರಾ ॥1॥
ವಾರಣ ಆನನನಾಗಾಭರಣಾ। ಕಾಮಿತಫಲದಾಯಕಾ, ಗಣನಾಯಕಾ । ಹರಿಹರಾ॥2॥

ರಾಗನಾಟಿ ಝಂಪೆ ತಾಳದಲ್ಲಿ (ನಿಧಾನ)

ಪರಿಪಾಹಿಮಾಂ ರಾಮ, ಪರಿಪಂಕ್ತಿ ಜನಭೀಮ, ಪರಿಣಮಿತಗುಣಧಾಮ,
ಪ್ರಣಕಮಭಿಶ್ಯಾಮಾ । ಜಯ ಜಯತು ಜಯತೂ
ಸುರರಾಜನು ಕುಪಾದ । ಸುಮುಖಿಜನಾವ್ಯಕಮೋದ । ನರಕ ಭವಭಯ ದೂರ
ನರಮೃಗ ಶರೀರಾ । ಜಯತು ಜಯ ಜಯತು

ರಾಗ– ನಾಟಿ ಓಡಿಝಂಪೆಯಲ್ಲಿ

ವರದರ ಫಲಿಕುಲಪಾಲ । ವಾರಣಧ್ವಂಸಹರ, ವಾಂಛಿಕ ವೀರಕೇದಳ ವಿನುತ
ಶುಭದಾ॥ ಜಯತುಜಯ ಜಯತು ॥1॥

ಮಾರ್ಕಾಂಡಕರಿಗಮನಮಾನಸವಿಮೋಚನ
ಶ್ರೀ ರಾಮ ರಘುವೀರ ಜಯತು ಜಯ ಜಯತು ॥2॥
ಇಲ್ಲಿಂದ.. ರಾಗ– ಶಂಕರಾಭರಣ, ಮಟ್ಟೆತಾಳದಲ್ಲಿ
ಪಂಪಾರ್ಬಲ, ಎಯಮಾಂಫಲ, ಪಂಮಾರ್ಬಲಯಶಿಯಂ ಅಂಪೇರಳ,
ಶುಭಕೇದಳವಿನುತಂ, ಅಂಬುರುಹಂ, ಕಾರ್ಯಂಬಂ, ಪೊರೆದೆಮ್ಮೆಂ, ವಂದ್ಯಜನಂ,
ಜಯತು ಜಯ ಜಯತೂ ॥ 1 ॥

ರಾಗ– ಸೌರಾಷ್ಟ್ರ, ಅಷ್ಟತಾಳದಲ್ಲಿ
ಶೂಲಿಕಪಾಲಿ, ಮಾಲಿನಿ, ಸಿಂಹವಾಹಿನೀ, ಮಹಿಷಮರ್ಧಿನಿ, ಜಯಜಯ ಜಯತೂ ॥ 1 ॥

ಅಂಬುಜದಳಲೋಚನೆ ಅಂಬರನೀರ ಚಕೋರೆ, ಅಂಬಮಹಾಂ, ಪಾರ್ವತಿ ಜಗದಾಂಬಿಕೆ, ದುರ್ಗಾಂಬಿಕೆ, ಜಯ ಜಯ ಜಯತೂ ॥ 2 ॥ (ಪರಿವರ್ಧಿನಿವೃತ್ತ)
ಉಡುಪತಿ ನಗುತಿರೆ ಕಡುಮುಳಿದಾತಗೆ, ಬಿಡದೆ ಶಾಪವನಿತ್ತಮೃಡ
ಸುತಭಳಿರೇ ಪೊಡವಿಗುತ್ತಮವಾದ ವುಡುಪುಂಜ ಪುರದೊಳು
ದೃಢವಾಗಿ ನೆಲೆಸಿಹ ವೊಡೆಯ ವಿಘ್ನೇಶಾ ॥ 1 ॥ (ಚೆಂಡೆಯ ಕೆಲಸ)

ಇನ್ನು ಮುಂದೆ ಭಾಮಿನಿ (ಯ) ವಾರ್ಧಿಕ್ಯ. ದೇವರಸ್ತುತಿಯಿಂದ ಕೂಡಿದ್ದನ್ನು ಹೇಳುವ ವಾಡಿಕೆ. ಆಯಾ ದಿನದ ಪ್ರಸಂಗದ್ದೇ ಆದರೆ ಉತ್ತಮ. ಅಲ್ಲಿಂದ ಅತೀ ಪುರಾತನ ಪದ್ಧತಿಯಂತೆ ಅಂದಿನ ಪ್ರಸಂಗದ ಕಥೆ ಯಾರಿಂದ ಯಾರಿಗೆ ಹೇಳಲ್ಪಟ್ಟಿದೆ ಎಂಬುದನ್ನು ಸೂಚಿಸುವ ವಿಷಯವನ್ನು ರಾಗ ಸೌರಾಷ್ಟ್ರ ತ್ರಿವುಡೆಯಲ್ಲಿ ಹೇಳಿ ಮುಂದೆ ಕಥಾನುಸಾರವನ್ನು ಮುಗಿಸಿದ್ದಲ್ಲಿಗೆ ಪೀಠಿಕೆಯ ಭಾಗ ಮುಗಿಯುತ್ತದೆ.

ಆಮೇಲೆ ತೆರೆಯಲ್ಲಿ ವೇಷ. ತೆರೆ ಕೆಲಸ ಮುಗಿಸಿ ಮುಕ್ತಾಯವಾದೊಡನೆ
ರಾಗ– ನಾದನಾಮಕ್ರಿಯೆ ಆದಿತಾಳದಲ್ಲಿ
ಓ ದೇವ ದೇವಾ ದೇವರ ದೇವಾ । ಭಾವಿಪೆನಾ ಮುದದಿಂದ ॥ ಓದೇವಾ ॥ 1 ॥
ಮುರಮಥನಾ ಸಿರಿಯರಸಾ, ಪೊರೆಯೊ ಯೆನ್ನಾ ಗುರುರನ್ನಾ ॥ 2 ॥
(ಹೀಗೂ ಕ್ರಮವಿದೆ)
ಮಣಿಮಕುಟಾ ಧೃತಹರಾ, ದಶರಥನ ಸುಕುಮಾರಾ, ಧುರಧೀರಾ ಅಮಿತಧೀರ,
ಪರಿಪಾಹಿಮಾಂ ಪಾಹಿ ॥ 3 ॥

ಮೇಲಿನ ಪದ್ಯವನ್ನು ಆಯಾಯ ದಿನದಲ್ಲಿ, ರಾಮನಾದರೆ ಮೇಲಿನಂತೆಯೂ, ಪಾಂಡವರಾದರೆ ಪಾಂಡುವಿನ ಸುಕುಮಾರ ಎಂದೂ "ದೇವೇಂದ್ರನಾದರೆ" ಕಶ್ಯಪನ ಸುಕುಮಾರಾ ಎಂದೂ ತಿರುಗಿಸಿಕೊಳ್ಳುವ ಕ್ರಮವಿದೆ. ಕೆಲವು ಭಾಗವತರುಗಳು ಹೀಗೆ ಹಾಡುವುದನ್ನು ಕೇಳಿದ್ದೇನೆ.

ರಾಗ ಮಾರವಿ, ಏಕತಾಳದಲ್ಲಿ,
ಏನಮಥಾ ವಿಮಥಾವೇಲಾ ತ್ರಿಕುಟಮಕುಟ ಲೋಲಾ ॥4॥
ಇಲ್ಲಿಂದ ವೇಷ ಹೊರಗೆ ಬಂದು ಧಿಂಗಿಣದಲ್ಲಿ ಪ್ರವೇಶ. ಅದಾದ ಮೇಲೆ ಒಂದು ಬಾಯಿ ತಾಳದಲ್ಲಿ ಒಮ್ಮೆ ಪ್ರವೇಶಿಸಿ ಹೊರಗೆ ಬಂದ ಮೇಲೆ

ರಾಗ ನಾದ ನಾಮಕ್ರಿಯೆ ಏಕತಾಳದಲ್ಲಿ
ಕುಂದರದನಾ, ಆನಂದಶರಧೀ, ಚಂದ್ರಕೋಟೀಸುಂದರಾಂಗ ॥1॥
ಇಂದೀವರಾಕ್ಷ ದೇವ ಇಂದ್ರಾದಿರಾಕ್ಷಾ, ವಂದಿಸುವೆನೊ ಗೋವಿಂದಾ ರಕ್ಷಿಸೋ॥2॥

ಇದನ್ನು ತಿತ್ತಿತೈಗೆ ತಿರುಗಿಸಿ ಗತಿಯೇರಿಸಿ ಕುಣಿದು ಮುಕ್ತಾಯ. ಅಲ್ಲಿಂದ ಧಿಂಗಿಣ. ಪೀಠಿಕೆ ವೇಷಕ್ಕೆ ಸಭಾಕಳಾಸ ಇತ್ಯಾದಿ.

ಶ್ರೀರಾಮನ ಪ್ರವೇಶವಾದರೆ ರಾಗ, ಭೈರವಿ, ತ್ರಿವುಟತಾಳದಲ್ಲಿ
ರಾಮಂ ಪಾಲಯಂಮಾಂ ॥ ಪಲ್ಲ ॥
ಸೀತಾಪತೇರಾಮಂ, ಪಾಲಯತ್ತೂ ॥ಅನುಪಲ್ಲ ॥
ರಾಮರವಿಕುಲಸೋಮ ಜಗದಭಿರಾಮ, ನಾರದ ಶ್ಯಾಮ
ದಶರಥ ರಾಮಂ ಪಾಲಯಂಮಾಂ ॥ 1 ॥
ವಿಕಸಿತಾಂಬುಜದಳಲೋಚನಾ ಪಾಪ ವಿಮೋಚನಾ
ಸಕಲಲೋಕಾಧೀಶ ಜಾನಕೀನಾಥಾ, ರಾಮಾಂಪಾಲಯಮಾಂ ಪಾಹಿ ॥2॥

ಪುತ್ರಕಾಮೇಷ್ಠಿಯ ಅಥವಾ ಕುಶಲವರ ಕಾಳಗದ ರಾಮನಿಗಾದರೆ ಬೇರೆ ರೀತಿ–
ರಾಗ ಪಂತುವರಾಳಿ, ಏಕತಾಳದಲ್ಲಿ
ಆಡುತ್ತಾಡುತ್ತಾಬಂದ ರಾಮ ॥ಪಲ್ಲ ॥
ಸಂತೋಷದಿಂದ ಆಡುತ್ತಾಡುತ್ತಾ ಬಂದ ರಾಮ ॥ಅನುಪಲ್ಲ ॥
ನೋಡುವರಿಗೆ ಸುಖಗೂಡಿಪನೃಪತಿ, ಕೊಂಡಾಡಿದವರಿಗೆ ಕೈಯೊಳ್ ನೀಡುತ ವರವಾ ॥1॥
ಆಡುತ್ತಾ ಮೆಲ್ಲಗೆ ಹೂವಿನಂಥ ಮೈಯ, ಪರಿಮಳಿಸುವ ಫುಲ್ಲಲೋಚನ ಸ್ಮರನೈಯ್ಯ
ಕಲ್ಲಾಗಿ ಮಲಗಿದಹಲ್ಯೆಯಕಾದ ಶ್ರೀ ಕಲ್ಯಾಣಾಂಗ ಭೂವಲ್ಲಭ ರಾಮಾ ॥2॥
ಆಡುತ್ತಾಡುತ್ತಾ ಬಂದ ರಾಮ

ಹಾಗೆಯೇ ಕೃಷ್ಣ ಒಡ್ಡೋಲಗದ ಕ್ರಮವೊಂದಿತ್ತು . ಅದು ಮುಂದಿನ ಪದ್ಯವನ್ನು ಹೊಂದಿಕೊಂಡು.

ಶಾರ್ದೂಲ ವಿಕ್ರೀಡಿತವೃತ್ತ
ಕಸ್ತೂರೀತಿಲಕೇ ಲಲಾಟಫಲಕೇ ವಕ್ಷಸ್ಥಳೇ ಕೌಸ್ತುಭಂ,
ನಾಸಾಗ್ರೇ ನವಮೌಕ್ತಿಕಂ ಕರತಳೇ ವೇಣುಂಕರೇ
ಕಂಕಣಂ ಸರ್ವಾಂಗೇ ಹರಿಚಂದನಂ ಸುಲಲಿತಂ,
ಕಠೇಚ ಮುಕ್ತಾವಳೀ ಗೋಪಸ್ತ್ರಿ ಪರಿವೇಷ್ಠಿತೋ
ವಿಜಯತೇ ಗೋಪಾಲ ಚೂಡಾಮಣಿ

ರಾಗ– ಕೇದಾರಗೌಳ ಏಕತಾಳದಲ್ಲಿ
ಗೋವಿಂದಾನಂದ ಕಂದ ಮುಂಕುಂದಾ । ಪಾಹಿದೇವಾ ॥ಪಲ್ಲ॥
ಗೋವರ್ಧನಧರ ಗೋಪಕುಮಾರ, ಗೋಪೀಜನಮಾನ ಮೋಹಿಕಾ ॥1॥
ನಗವೃಂದಾವನ, ಮುಖಪರಿಪಾಲನಾ, ಅಗಣಿತಗುಣ ಗಣಭೂಷಿತಾ ॥2॥
ರುಕ್ಮಿಣಿ ಕೇಳೇ ಮದನಗೋಪಾಲೇ, ಮದನ ಗೋಪಾಲೇ ಚದುರೆ ಸುಶೀಲೇ॥

ಈ ಪದ್ಯದಲ್ಲಿ ವೈವಿಧ್ಯ ಇರಬೇಕು. ನಟರಿಗೆ ಕುಣಿಯಲು ಅನುಕೂಲವಿರಬೇಕು. ಕಡೆಗೆ ಗತಿಯೇರಿಸಿ ಮುಕ್ತಾಯ. ಅಲ್ಲಿಂದ ರಂಗದಲ್ಲಿ ಸ್ತ್ರೀ ವೇಷವಿದ್ದಷ್ಟು ಬೇರೆ ಬೇರೆ ಹೆಸರಿನಿಂದ ಕರೆದು ಕಡೆಗೆ ಸತ್ಯಭಾಮೆ ಕೇಳೇ ಮದನ ಗೋಪಾಲೇ ಮದನ ಗೋಪಾಲೇ ಚದುರೆ ಸುಶೀಲೇ ಎಂದುಹೇಳಿ ಮುಗಿಸಿದ್ದಲ್ಲಿಗೆ ಈ ಭಾಗ ಮುಗಿಯಿತು. ಅಷ್ಟಾಗುವಾಗ, ಈ ಗೋಪಿಕೆಯರ ಮಧ್ಯೆ ಹಾಸ್ಯಗಾರನ ಪ್ರವೇಶವಿತ್ತು. ಹಾಸ್ಯದಲ್ಲಿ ಹಿಂದಿನ ಕಾಲ ತುಂಬಾ ಅಶ್ಲೀಲ ಮಾತುಗಳಿದ್ದವು. ಅದನ್ನು ಬಿಟ್ಟಿದ್ದು ಶ್ಲಾಘ್ಯವೇ ಆದರೂ ಕೃಷ್ಣ ವೊಡ್ಡೋಲಗ ಬಿಡತಕ್ಕದ್ದಲ್ಲ.

ಯಕ್ಷಗಾನದಲ್ಲಿ ಕಿರಾತಕನ ಪ್ರವೇಶ ಆಕರ್ಷಣೀಯವಾಗಿತ್ತು. ತನ್ನ ನಾಟ್ಯ ಕುಶಲತೆ ಯನ್ನು ನಾನಾ ರೂಪವಾಗಿ ತೋರಿಸಿ ಪ್ರೇಕ್ಷಕರಿಗೆ ಸಂತೋಷವುಂಟು ಮಾಡುತ್ತಿದ್ದರು. ಆಗ ಜೊತೆಯಲ್ಲಿ ಹೋಗುವ ಮಕ್ಕಳು ಚುರುಕಾಗಿದ್ದರೆ ವಿವಿಧ ಭಂಗಿಯಿಂದ ಕೂಡಿದ ನಾಟ್ಯವನ್ನು ಅಭ್ಯಾಸ ಮಾಡಿಕೊಳ್ಳಲು ಅನುಕೂಲವಿದೆ. ಹಾಗೆಯೇ ಹನುಮಂತನ ಪ್ರವೇಶ. ಅಲ್ಲಿ ತೆರೆಯೊಳಗಿನ ಕೆಲಸ ಆಮೇಲೆ ಮಟ್ಟೆ ತಾಳದಲ್ಲಿ ಕುಣಿ ಕುಣಿದು ಬರುವ ರೂಪಭೇದ ಸಾಮಾನ್ಯ ಶಾಸ್ತ್ರೀಯವಲ್ಲದಿದ್ದರೂ ದಶಾವತಾರದ ಮುದ್ರೆಗಳು, ಪರ್ವತ ಕೀಳುವುದು, ಕಿತ್ತ ಪರ್ವತವನ್ನೆಸೆಯುವುದು, ಇತ್ಯಾದಿಗಳ ಜೊತೆಯಲ್ಲಿ ಕಪಿಚೇಷ್ಟೆ ಇದನ್ನೆಲ್ಲಾ ನಟನು ತೋರಿಸುವಾಗ ಮರಿಮಂಗಗಳಾಗಿ ಗಡ್ಡಕಟ್ಟಿಕೊಂಡ ಹುಡುಗರಿಗೆ ಕಲಿತುಕೊಳ್ಳಲು ಅವಕಾಶವಿತ್ತು. ಈ ಸದವಕಾಶದಲ್ಲಿ ನಾನು ನನ್ನ ನಾಟ್ಯವನ್ನೂ ಈ ಕ್ರಮದಲ್ಲೇ ತಿದ್ದಿಕೊಂಡೆ. ರಾಕ್ಷಸ ವೇಷದ ಪ್ರವೇಶ ಕಾಲದಲ್ಲಿ ತೆರೆಯ ಕೆಲಸ. ಇದರಲ್ಲಿ ರಾವಣನಿಗಾದರೆ ಬೇರೆ, ಬೇರೆ ಕೆಲವು ಕಾಡು ರಕ್ಕಸರಿಗಾದರೆ ಬೇರೆ. ಅವರ ಮುಖವರ್ಣಿಕೆಯಲ್ಲೂ ವ್ಯತ್ಯಾಸವಿತ್ತು. ಈಗೀಗ ಈ ಅಭ್ಯಾಸವುಳ್ಳವರು, ತೀರಾ ಕಡಿಮೆ ಯೆಂಬುದು ವಿಷಾದದಿಂದ ಹೇಳಬೇಕಾಗಿದೆ. ಇದರಂತೆಯೇ "ಹೆಣ್ಣು ಬಣ್ಣ" ಅಂದರೆ ಶೂರ್ಪನಖಿ ಅಜಮುಖಿ, ನಕ್ರಮುಖಿ ಮೊದಲಾದ ರಾಕ್ಷಸ ಸ್ತ್ರೀಯರ ಪ್ರವೇಶದ ಕ್ರಮ, ತೆರೆಯೊಳಗಿನ ಕೆಲಸ, ಭಾವಪೂರ್ಣವಾಗಿ ಪ್ರದರ್ಶಿಸಲ್ಪಡುತ್ತಿತ್ತು. ಇದರಲ್ಲಿ ಕೆಲವರು ಅಶ್ಲೀಲತೆಯನ್ನು ರಂಗದಲ್ಲಿ ಪ್ರವೇಶಿಸುತ್ತಲೂ ಇದ್ದುದುಂಟು. ಆ ಭಾಗವನ್ನು ಬಿಡುವುದರ ಜೊತೆಯಲ್ಲಿ ಈಗೀಗ ಎಲ್ಲವನ್ನೂ ಬಿಟ್ಟು ಬರೇ ಅಟ್ಟಹಾಸದ ಜೊತೆಯಲ್ಲಿ ಧಿಂಗಿಣವನ್ನೇ ಬಾರಿಸಿ ಪ್ರವೇಶ ಮಾಡುವ ಕ್ರಮ ಬಳಕೆಗೆ ಬಂದಿದೆ. ಹಾಗೆಯೇ ಸ್ತ್ರೀ ವೇಷದ ಜೊತೆಯಲ್ಲಿ ರಾಜವೇಷವಿದ್ದು ಜಲಕ್ರೀಡೆ. ಈ ಜಲಕ್ರೀಡೆ ಈಗಲೂ ಇದೆ. ಇದನ್ನು ಮಾತ್ರ ನೋಡುವಾಗ ವಾಕರಿಕೆ ಬರುತ್ತದೆ. ಕಾರಣ ನಟರು ನಾಟ್ಯ ಚತುರರಲ್ಲ. ಗಣಪತಿಯ ವಿಗ್ರಹ ಮಾಡಲು ಹೊರಟ ಶಿಲ್ಪಿಯ ಅಚಾತುರ್ಯದಿಂದ ಮರ್ಕಟನ ಮುಖವಾಯಿತು ಎಂಬ ಗಾದೆಯಂತೆ ಏಕತಾಳಕ್ಕೆ ತಿತ್ತಿತ್ತೈಗೆ, ಕುಣಿಯುವಾಗ, ನಾನು ಮೊದಲು ನೋಡಿದ ನಟರ ನಟನಾ ಸಾಮರ್ಥ್ಯ ಹೇಗಿತ್ತು. ಈಗ ಈ ಕಲೆ ಯಾವ ದುರವಸ್ಥೆಗಿಳಿಯಿತು ಎಂದು ಪರಿತಪಿಸುತ್ತೇನೆ. ನರ್ತನದಲ್ಲಿ ನೃತ್ಯ, ನಾಟ್ಯ, ಈ ವಿಭಾಗ ಬೇರೆ ಬೇರೆ ರೀತಿಯಿದೆ ಎಂದು ನಾಟ್ಯಶಾಸ್ತ್ರಗಾರರು ಬರೆದುದನ್ನು ಓದಿದಾಗ ತಿಳಿದುಕೊಳ್ಳಬಹುದು. ಆ ವಿಭಾಗ ಬೇರೆ ಗ್ರಂಥದಲ್ಲಿ ಸಿಗುವ ಕಾರಣ, ಆ ವಿವರಣೆಯ ಗೋಜಿಗೆ ಹೋಗುವುದಿಲ್ಲ. ನಮ್ಮದು ನಾಟ್ಯ ಪದ್ಧತಿ. ನಾಟ್ಯವನ್ನು ಶ್ರದ್ಧೆಯಿಂದ ಕಲಿಯದೆ,

ಬೇರೆ ವಾಚಿಕ ಕಲೆಯಲ್ಲಿ ಪರಿಣಿತರಾದವರೂ ಮುಂದೆ ಬಂದಾಗ, ಭಾವಪೂರ್ಣವಾದ ಈ ನಾಟ್ಯ ಕಲೆಗೆ ಪೂರ್ಣ ವಿರಾಮವನ್ನು ಹಾಕಿದ ಹಾಗೆ ಕಾಣುತ್ತದೆ. ಅದಕ್ಕೂ ಕಾರಣವಿದೆ. ಜನತೆ ಈ ಕಲೆಯನ್ನು ಇದರಲ್ಲಿ ವ್ಯವಸಾಯ ಮಾಡುವ ಕಲೆಗಾರರನ್ನು ಅಷ್ಟು ಅಸಡ್ಡೆಯಿಂದ, ತಾತ್ಸಾರದಿಂದ ಕಾಣುತ್ತಿತ್ತು. ಶ್ರೀ ದೇವಿಯ ಅನುಗ್ರಹದಿಂದ, ಹಿರಿಯರ ಆಶೀರ್ವಾದದಿಂದ ಆತ್ಮೀಯರ ಪ್ರೋತ್ಸಾಹದಿಂದ ನಾನು ಜನಾದರಣೆಗೆ ಪಾತ್ರವೆನಿಸಿದರೂ, ಆಟದವ ನೀಚ ಎಂದು ಜನರು ನನ್ನನ್ನು ತಿಳಿಯುತ್ತಾ ಇದ್ದಾರೆ ಎಂದು ಗೊತ್ತಾದಾಗ ನನ್ನಷ್ಟಕ್ಕೆ ನಾನು ಕಣ್ಣೀರುಗರೆದು ದೇವಿಯನ್ನು ಮನಸ್ಸಿನಿಂದಲೇ ಪ್ರಾರ್ಥನೆ ಮಾಡಿಕೊಂಡದ್ದು ಇದೆ. ಅದು ಏತರಿಂದ ಹಾಗಾಯಿತು? ಆ ಕಾಲದಲ್ಲಿ ವಿದ್ಯಾವಂತರ ದೃಷ್ಟಿ ಈ ಕಡೆಗೆ ಬರಲಿಲ್ಲ. ಈಗೀಗ ವಿದ್ಯಾವಂತರ ನೋಟ ಬಿದ್ದಿದೆ. ಈ ಕಲೆಯನ್ನು ಬೆಳಕಿಗೆ ತರಬೇಕೆಂಬ ಪ್ರಯತ್ನ ನಡೆಯುತ್ತಿದೆ. ಆದರೆ, ಮಾಡಲೇನು. "ಊರು ಸೂರೆಯಾದ ಮೇಲೆ ಜನರಿಗೆ ಎಚ್ಚರಿಕೆಯಾದಂತಾಯಿತು" ಎಂಬ ಗಾದೆಯಂತಾಯಿತು. ನಾಟ್ಯ ಕಲೆಯಲ್ಲಿ ಪರಿಣಿತರಾಗಿದ್ದ ಕೆ. ಗುಂಡ, ಅಪ್ಪುಹಾಸ್ಯಗಾರ, ಕೆ. ನರಸಿಂಹ, ಕಾವು ಕಣ್ಣ, ಕುಂಞಣ್ಣ ಅಡ್ಯಂತಾಯ, ಬಣ್ಣದಲ್ಲಿ ಕೋಲುಳಿ ಸುಬ್ಬ ಅಯ್ಯಪ್ಪ ಮೊದಲಾದವರು, ದಿವಂಗತರಾದರು. ಐತಪ್ಪ ಶೆಟ್ಟರು, ಸ್ತ್ರೀ ವೇಷದ ಮವ್ವಾನವರು, ದೊಡ್ಡ ತಿಮ್ಮಪ್ಪನವರು ಈಗಲೂ ಇದ್ದಾರೆ. ಇದ್ದರೂ ಅವರನ್ನು ವಿಚಾರಿಸುವವರಿಲ್ಲ. ಈಗಲೂ ವಿಚಾರಿಸಿದರೂ ವೃದ್ಧಾಪ್ಯದಿಂದ ಅವರು ಏನೂ ಮಾಡಲಾರರು. ಕೆಲವು ನಾಟ್ಯ ಪದ್ಧತಿ ಅವರಿಂದ ಇನ್ನೂ ಪ್ರಕಾಶ ಹೊಂದಲು ಸಾಧ್ಯವಿದೆ. ಇದೇ ರೀತಿ ಆ ನಾಟ್ಯವನ್ನು ನಟರು ಕುಣಿದರೆ ಸಾಕೇ. ಅದಕ್ಕೆ ಸರಿಯಾದ ಹಿಮ್ಮೇಳ ಬೇಕು. ಆ ನಾಟ್ಯಕ್ಕೆ ಸರಿಯಾಗಿ ಬಾರಿಸುವವರು ಬೇಕು. ಅಂಥ ಮುಖಂಡರಾದ ಮದ್ದಳೆಗಾರರು ಕೆಲವರು ಪರಲೋಕ ಯಾತ್ರೆ ಮಾಡಿದರು. ಈಗ ಸದ್ಯಕ್ಕೆ ಒಬ್ಬಿಬ್ಬರು ಅಲ್ಲ ನಾಲ್ಕು ಮಂದಿ ಈ ಕೆಲಸ ಮಾಡಲು ಶಕ್ತರಿದ್ದಾರೆ. ಅದಾದರೂ ನಮ್ಮ ಪುಣ್ಯವೆಂದು ಭಾವಿಸುತ್ತೇನೆ. ಅವರ ಹೆಸರು ಮಾತ್ರ ಹೇಳುವುದಿಲ್ಲ ಕ್ಷಮಿಸಬೇಕು. ಯಾಕೆಂದರೆ ಮಿಕ್ಕುಳಿದವರು, ಹಾಗಿದ್ದರೆ ನಮಗೇನೂ ಗೊತ್ತಿಲ್ಲವೇ? ಎಂದು ನನ್ನಲ್ಲಿ ಕೇಳಬಹುದು. ಅಷ್ಟರಿಂದಲೇ ತಿಳಿದುಕೊಳ್ಳಬಹುದು. ಇಂಥಾ ಪರಮ ಪವಿತ್ರವಾದ ಸತ್ಯ, ಧರ್ಮ, ನೀತಿ, ನ್ಯಾಯ ಮೊದಲಾದವುಗಳ ರಸಕಲ್ಪದಂತೆ ಮೆರೆಯುವ ಕಲೆಯಲ್ಲಿ ವ್ಯವಸಾಯ ಮಾಡುತ್ತಿದ್ದ ಕಲಾಗಾರರಿಗೆ ಆಶ್ರಯದಾತರಾಗಿ ಶ್ರೀ ಕಲ್ಲಾಡಿ ಕೊರಗ ಶೆಟ್ಟರು ಮುಂದೆ ಬಂದು ಕಟೀಲು ಶ್ರೀ ದುರ್ಗಾ ಪರಮೇಶ್ವರಿ ಕೃಪಾಪೋಷಿತ ಯಕ್ಷಗಾನ ಮೇಳವನ್ನು ವಹಿಸಿಕೊಂಡಂದಿನಿಂದ ಕಲೋಪಾಸಕರಿಗೆ ಭಾಗ್ಯೋದಯವಾಗಿದೆ. ಆಮೇಲೆ ಆಟದವರು ಎಂಬ ತಾತ್ಸಾರ ಮಾಯವಾಗಿದೆ. ವಿದ್ವಾಂಸರ ದೃಷ್ಟಿಯೂ ಈ ಕಡೆಗೆ ಬಂದಿದೆ. ಈ ಕಲಾಗಾರರಲ್ಲಿಯೂ ಮನುಷ್ಯತ್ವವಿದೆ ಎಂದು ಜನತೆ ತಿಳಿಯುವಂತಾಗಿದೆ. ಆಮೇಲೆ ಅವರ ಚಿರಂಜೀವಿಗಳಾದ ವಿಠಲ ಶೆಟ್ಟರು ನಡೆಸಿಕೊಂಡು ಬರುತ್ತಾರೆ. ಅವರ ವಿಷಯವಾಗಿ ನಾನು ಏನನ್ನೂ ಬರೆಯಲು ಇಚ್ಛಿಸುವುದಿಲ್ಲ. ಅವರ ಮೇಳದಲ್ಲೇ ನಾನಿರುವುದರಿಂದ ಬರೆಯುವುದು ಅಪರಾಧವೆಂದೇ ನನ್ನ ಭಾವನೆ. ಅವರ ಕುರಿತು ಊರವರ ಅಭಿಪ್ರಾಯವೇ ಸಾಕು. ಆದರೆ ಆ ತಂದೆ ಮಕ್ಕಳ ಆಡಳಿತದ ಕಾಲದಲ್ಲಿ ಈ ಕಲೆಯ

ವೇಷಭೂಷಣಗಳಲ್ಲಿ ಸ್ವಲ್ಪ ವ್ಯತ್ಯಾಸವಾಗತೊಡಗಿತು. ಕೆಲವರು ಶ್ರೀ ಶೆಟ್ಟರನ್ನೂ, ಹಣ ಮಡುವುದಕ್ಕಾಗಿ ಕಲೆಯ ಕುಲಗೆಡಿಸಿದರೆಂಬ ಗುಲ್ಲೆಬ್ಬಿಸಿದರು. ನಿಜವಾಗಿ ಇದು ಸತ್ಯಕ್ಕೆ ಬಹುದೂರದ ಮಾತು. ಆದರೆ ಹಣ ಬೇಡವೇ...? ಹಣವಿಲ್ಲದೆ ಏನನ್ನು ಮಾಡಲು ಸಾಧ್ಯವಿದೆ...? ಕಲೆಗಾರರನ್ನು ಬದುಕಿಸುವುದಕ್ಕೆ ಅಲ್ಲದೆ ಕಲೆಗಾರರಿಗೂ ಚಿಕ್ಕ ಸಂಸಾರವಿದೆ ಯಲ್ಲಾ ಆ ಸಂಸಾರ ಪೋಷಣೆಗೆ ಬೇಕಾಗುವಷ್ಟು ಹಣ ಸಂಗ್ರಹ ಮಾಡಿಕೊಳ್ಳುವುದು ಅವರಿಗೆ ಅಗತ್ಯವೂ ಇತ್ತು. ಆದ್ದರಿಂದ ಜನರ ಮೆಚ್ಚುಗೆಗಾಗಿ ಈ ದಾರಿ ಹಿಡಿದದ್ದು ನಿಜ. ಕೆಲವೊಂದು ತುಳು ನಾಡ ಕಥೆಯನ್ನು ತುಳುವಿನಲ್ಲಿ ಆಡಿದ್ದೂ ಉಂಟು. ಅದಕ್ಕೆ ಯಜ್ಞಕುಂಡದಲ್ಲಿ ಗೆಣಸು ಸುಟ್ಟಂತೆ ರಂಗಭೂಮಿಯಲ್ಲಿ ಭೂತದ ಕೋಲ, ಪ್ರೇತದ ಕಥೆ ನಾನಾ ಟೀಕೆಗಳು ಬಂದಿತ್ತು. ಇನ್ನೊಂದು ಕಡೆ ಯಕ್ಷಗಾನ ಸಂರಕ್ಷಣಾ ಸಮಿತಿ ಹೊರಟಿತ್ತು. ಈ ವಿಷಯಗಳನ್ನೆಲ್ಲಾ ಕೇಳಿ ಬೇಸತ್ತ ನಾನು, ಕೆಲವರು, ನನ್ನ ಆತ್ಮೀಯರಾದವರಲ್ಲಿ ಸ್ಪಷ್ಟ ತಿಳಿಸಿದ್ದೇನೆ. ನೀವ್ಯಾರೂ ಗುಲ್ಲೆಬ್ಬಿಸಬೇಡಿ. ಇದೊಂದು ಚಕ್ರದ ಉರುಳಾಟದಂತಿದೆ. ಈಗ ಯಾವುದನ್ನು ನೀವು ಪತನ ಅನ್ನುತ್ತೀರೋ ಅದುವೇ ಇನ್ನೊಂದು ಸುತ್ತುತ್ತಿರುವಾಗ ಮೇಲ್ಮೊಗವಾಗುತ್ತದೆ. ಮನೆಯಿಂದ ಅಂಗಳಕ್ಕಿಳಿದು ಪುಟ್ಟ ಮಗು ಹೊಯಿಗೆಯಲ್ಲಿ ಆಡುವುದನ್ನು ತಾಯಿ ನೋಡಿ ಮೊದಲು ಸುಮ್ಮನಿದ್ದರೂ ಆ ಮಗುವಿನ ಕೈ ಕಾಲು ತೊಳೆದು ಮುದ್ದಾಡಿ ಒಳಗೆ ತರುವಂತೆ, ಈ ಕಲೆಯು ಪೂರ್ವರೂಪಕ್ಕೆ ಬರಲು ದೂರವಿಲ್ಲ ,ನಿಮ್ಮಲ್ಲಿ ಸೈರಣೆಯಿರಲಿ. ನಾವು ಬಾಯಲ್ಲಿ ಸಕ್ಕರೆ ಸಕ್ಕರೆಯೆಂದು ಹೇಳಿದರೆ ಸಿಹಿಯಾಗುವುದೇ...? ಸಕ್ಕರೆ ತಿಂದೇ ರುಚಿ ತಿಳಿಯಬೇಕು. ಹಾಗೆಯೇ ಕಲೆಯ ಉದ್ಧಾರವೆಂದು ಬಾಯಲ್ಲಿ ಬೊಬ್ಬಿಟ್ಟು ಪ್ರಯೋಜನವೇನು...? ಅದಕ್ಕೆ ಸಾಕಷ್ಟು ಧನಸಂಗ್ರಹವಾಗಬೇಕು. ಅದು ಯಾರಿಂದ ಸಾಧ್ಯ...? ಯಾರು ತಯಾರಿದ್ದೀರಿ ಈ ಪ್ರಶ್ನೆಗೆ ಉತ್ತರವಿಲ್ಲ. ಈ ಕಲೆಯ ಕುರಿತು ಶ್ರೀ ವಿಠ್ಠಲಶೆಟ್ಟರು ತುಂಬಾ ಅಲೋಚಿಸಿದರು. ಇದೇ ರೀತಿ ನರ್ತನ ಕಲೆಯನ್ನು ಕಡೆಗಣಿಸಿ ಮಾತನ್ನೇ ಬೆಳೆಸುತ್ತಾ ಹೋದರೆ ಒಂದು ಕಥೆಯನ್ನು ಒಂದು ರಾತ್ರಿಯಲ್ಲಿ ಮುಗಿಸಲು ಸಾಧ್ಯವಿಲ್ಲ. ಅದಕ್ಕಾಗಿ ಅರ್ಥಪೂರ್ಣವಾದ ಮಿತವಾದ ಮಾತು ಅಗತ್ಯ. 'ಕಿರಿದರೊಳ್ ಪಿರದರ್ಥವ ನರಿಪಲ್ ತಿಳಿವಾತ' ಎಂಬಂತಿರಬೇಕು. ಇದಕ್ಕಾಗಿ ವಿಠಲ ಶೆಟ್ಟರು ಕೆಲ ಮಕ್ಕಳಿಗೆ ನಾಟ್ಯ ಅಭ್ಯಾಸವುಳ್ಳವರಿಗೂ ಕಲೆಯ ಶಿಸ್ತುಬದ್ಧ ಅಭ್ಯಾಸ ಮಾಡಿಸುತ್ತಾ ಬಂದರು.

**(ಈ ಲೇಖನದ ಉಳಿದ ಭಾಗ ನಷ್ಟವಾಗಿದೆ. – ಸಂ.)**

* * *

ಅಳಿಕೆಯವರು ನನ್ನ ಮಾರ್ಗದರ್ಶಕ, ಜತೆಗಾರರು.. ಮರೆಯಲಾಗದ ಕಲಾವಿದರವರು.

**ಪಡ್ರೆ ಚಂದು** (ದಿವಂಗತರು)



# ಯಕ್ಷಗಾನ ವಿಮರ್ಶೆಯೆಂಬ ವ್ಯಸನ

ಇತ್ತೀಚೆಗೆ ನಮ್ಮ ಕನ್ನಡ ನಾಡಿನ ಜೀವಂತ ಕಲೆಯಾದ ಯಕ್ಷಗಾನದ ವಿಚಾರದಲ್ಲಿ ನಾನಾ ಕಡೆಗಳಿಂದ ನಾನಾ ರೀತಿಯಾಗಿ ಪೂರಿತ ಲೇಖನಗಳು ಬರುತ್ತಾ ಇವೆ. ಇದರಲ್ಲಿ ಈಗಿನ ಸುಧಾರಣೆಯ ಸೋಗಿನಿಂದ ಕಲೆಯ ಕೊಲೆಗೈಯುತ್ತಾರೆಂಬುದೇ ಹೆಚ್ಚು ಸಂತೋಷ, ನಮ್ಮ ನಾಡಿನ ಜೀವಾಳವೆನಿಸಿರುವ ಯಕ್ಷಗಾನ ಕಲೆಯಲ್ಲಿ ಅಭಿಮಾನವಿರುವ ಪ್ರತಿಯೊಬ್ಬನೂ ತಪ್ಪೊಪ್ಪುಗಳನ್ನು ವಿಮರ್ಶಿಸಬಹುದು. ಅಲ್ಲಿ ಕಲಾಗಾರನಿಗೂ ತನ್ನ ಕುಂದನ್ನು ತಿದ್ದಿಕೊಳ್ಳುವ ಅವಕಾಶ ಬರುತ್ತಿದೆ. ಆ ವಿಮರ್ಶೆ ಮಾತ್ರ ನಿರ್ದುಷ್ಟವಿರಬೇಕು. ನಿಷ್ಪಕ್ಷಪಾತ ದೃಷ್ಟಿಯಿಂದ ಕೂಡಿರಬೇಕು. ಯಾವನೋ ಒಬ್ಬ ತನ್ನ ವೈಯಕ್ತಿಕವಾದ ಅಭಿಪ್ರಾಯವನ್ನು ವ್ಯಕ್ತಿ ದ್ವೇಷದಿಂದಲೋ ಅಥವಾ ಇನ್ನಿತರ ಕಾರಣಗಳಿಂದ ದೂಷಿಸ ತೊಡಗಿದ್ದನ್ನು ಓದಿ, ಇತರರೂ ಅಂಧಾನುಕರಣ ಪದ್ಧತಿಯಿಂದ ಮುಂದುವರಿಯುವುದು ನ್ಯಾಯವಲ್ಲ. ಆ ಲೇಖನದಲ್ಲೆಷ್ಟು ಸತ್ಯಾಂಶವಿದೆಯೆಂದು ವಿಚಾರಿಸುವುದು ಮಾನವತ್ವ ಗುಣ. ಈ ವಿಮರ್ಶಕರು ಉಡುವ ವಸನ, ತೊಡುವ ಆಭರಣ, ಮುಖಕ್ಕೆ ಬಳಿಯುವ ಬಣ್ಣ, ನೃತ್ಯ, ಮಾತು, ಹಾಡುಗಾರಿಕೆ ಇಷ್ಟನ್ನೂ ಟೀಕಿಸಿ ತೃಪ್ತಿಗೊಳ್ಳದೆ ಆಡುವ ಕಥೆಗಳಲ್ಲಿ ಕೆಲವಕ್ಕೆ ಪ್ರೇತಕಥೆಗಳೆಂದು ಹೆಸರು ಕೊಟ್ಟು ಕರೆದರು. ಇದನ್ನು ಓದಿ ಓದಿ ಬೇಸರಗೊಂಡ ನಾನು ಈ ಲೇಖನ ಬರೆಯಬೇಕಾಯಿತು. ನನ್ನ ಅಭಿಪ್ರಾಯವನ್ನು ತಿಳಿಸುವ ಉದ್ದೇಶ ಮಾತ್ರ ನನ್ನದು.

ಇದು ಯಾರನ್ನಾದರೂ ಟೀಕಿಸಬೇಕೆಂದು ನಾನು ಬರೆಯ ಹೊರಟಿಲ್ಲ. ಹಾಗೆ ಯಾರೂ ತಪ್ಪು ತಿಳಿಯಬಾರದು. ಇವರಿಗೆಲ್ಲಾ ವಿಮರ್ಶಿಸುವ ಹಕ್ಕಿದ್ದರೆ, ಅವರ ವಿಮರ್ಶೆಯಲ್ಲಿ ತ್ಯಾಜ್ಯವೆಷ್ಟಿದೆಯೆಂಬುದನ್ನು ವಿಚಾರಿಸುವ ಹಕ್ಕು ಕಲಾಗಾರನಿಗೂ ಇರಬಹುದಷ್ಟೆ. ನಾನೂ ಯಕ್ಷಗಾನದಲ್ಲಿ ಸ್ವಲ್ಪ ದುಡಿದ ಒಬ್ಬ ಕಲಾಗಾರನಿದ್ದೇನೆ.

ನನ್ನ ತೀರ್ಥರೂಪರ (ಅಳಿಕೆ ಮೋನಪ್ಪರೈ) ಜತೆಯಲ್ಲಿ ನನ್ನ ಹನ್ನೊಂದನೆಯ ವಯಸ್ಸಿನಲ್ಲಿ 1926ನೇ ಇಸವಿಯಲ್ಲಿ ಈ ರಂಗಕ್ಕೆ ಕಾಲಿಟ್ಟೆ. ಆ ಬಳಿಕ ಮೂವತ್ತಾರು ವರ್ಷಗಳ ತನಕ ಇದರಲ್ಲಿ ದುಡಿದು ಈ ಕಲೆಯಲ್ಲುಂಟಾದ ವ್ಯತ್ಯಾಸವನ್ನು ಜೀರ್ಣಿಸಿಕೊಂಡಿರುತ್ತೇನೆ. ನನ್ನ ಪ್ರಥಮ ರಂಗ ಪ್ರವೇಶದ ಕಾಲದಲ್ಲಿ ನನ್ನ ತಂದೆಯವರೆಂದ ಮಾತು "ಮೊದಲಿಗಿಂತ ಈಗ ವೇಷಭೂಷಣಗಳು ಮುಖಕ್ಕೆ ಹಾಕುವ ಬಣ್ಣ ಎಲ್ಲಾ ಬೇರೆಯಾಗಿದೆ" ಎನ್ನುತ್ತಿದ್ದರು. ಅದಕ್ಕೆ ಮೊದಲು ಅದು ಯಾವ ರೂಪದಲ್ಲಿತ್ತೆಂದು ನನಗೆ ಗೊತ್ತಿಲ್ಲ. ಹೀಗಿರುವಾಗ ಈ ಪರಂಪರೆಯೆಂದು ಬೊಬ್ಬಿಡುವ ಜನರು ಅದನ್ನು ತೋರಿಸಲಾದರೇ ಪ್ರಯಾಸವಾದೀತು. ಆ ಕಾಲದಿಂದ ಇಂದಿನ ತನಕ 'ಸನಾತನೋ

ನಿತ್ಯ ನೂತನ:' ಎಂಬ ಆರ್ಯೋಕ್ತಿಯೆಂಬಂತೆಯೂ ಹೊಸತಾಗಿ ಚಿಗುರದೆ ಇದ್ದ ಮರ ಬದುಕಲಾರದೆಂಬ ನ್ಯಾಯದಂತೆಯೂ ಇದು ಪರಿವರ್ತನೆಯಾಗುತ್ತಾ ಬಂದದೆ ಸತ್ಯ. ಪ್ರಪಂಚದ ಪ್ರತಿಯೊಂದು ಕಲೆ, ಸಾಹಿತ್ಯ, ಛಂದಸ್ಸು ನಿತ್ಯದ ವ್ಯವಹಾರದಲ್ಲಿ ಕೂಡಾ ವ್ಯತ್ಯಾಸವನ್ನು ಕಾಣುವುದಿಲ್ಲವೇ? ಹೀಗಿರುವಾಗ ನಾವು ಇದೊಂದು ಮಾತ್ರ ಅಜ್ಜ ನೆಟ್ಟ ಆಲದ ಮರವೆಂದು ಹಗ್ಗ ತೆಗೆದುಕೊಳ್ಳುವ ಸಂಪ್ರದಾಯ ಬದ್ಧವಾಗಿರ ಬೇಕೆಂದಿದೆಯೇ? ಉರುಳುತ್ತಾ ಹೋಗುವ ಚಕ್ರದಂತಿದೆ ಈ ನ್ಯಾಯ. ತಿಳಿದ ವಿದ್ವಾಂಸರು ಪ್ರಗತಿಯೆಂದರೆ ಮೂಲ ಸಂಶೋಧನೆ ಎಂದು ಅರ್ಥ ಮಾಡಿದ್ದಾರೆ. ಅನ್ನುವಾಗ ಅದು ಮೊದಲಿನ ಸ್ಥಿತಿ ಬರಲಾರದೆಂಬ ನಿರ್ಣಯವಿಲ್ಲ. ಬರಬಾರದೆಂಬ ಖಡ್ಡಾಯವೂ ಇಲ್ಲ. ನಾನು ಓದಿದ ಲೇಖನಗಳಲ್ಲಿ ಕೆಲವಂಶ ಸತ್ಯವಿರಲೂಬಹುದು. ಆದರೆ ನಮ್ಮ ಧರ್ಮಶಾಸ್ತ್ರ ಏನನ್ನು ಬೋಧಿಸುತ್ತದೆ. ಇತರರ ಮನಸ್ಸಿಗೆ ನೋವನ್ನುಂಟು ಮಾಡುವ ವಿಷಯ ಸತ್ಯವಾದರೂ ಅದನ್ನು ಹೇಳಬೇಡೆಂದಲ್ಲವೇ. ಹೇಳುವುದಿದ್ದರೂ 'ಕಾಂತಾ ಸಂಮಿತ ತಯೋಪದೇಶಯುಜೇ' ಎಂಬಂತಿರಬೇಕೇ ವಿನ: ಪ್ರಭುಸಂಹಿತೆಯಾಗಿರ ಬಾರದು. ಕಲಾಗಾರನು ಯಾವಾಗಲೂ ಭಾವನಾಜೀವಿ. ಅವನ ಮನಸ್ಸು ಹೂವಿನಷ್ಟು ಕೋಮಲ. ಅವನು ರಂಗ ಪ್ರವೇಶಮಾಡಿದ ಮೇಲೆ ಎಷ್ಟು ಸಂಸಾರ ತಾಪತ್ರಯಗಳಿದ್ದರೂ ರಂಗದಿಂದ ಹೊರಬಂದ ಮೇಲೆ ಎಂತಹ ದುರಂತಗಳಿಗೆ ಎದೆಯೊಡ್ಡುವ ಪ್ರಸಂಗ ವಿದ್ದರೂ ಎಲ್ಲಾ ಮರೆತು ತನ್ನ ಕಲಾ ಸಂಪತ್ತಿನಿಂದ ಪ್ರೇಕ್ಷಕ ಶ್ರಾವಕರನ್ನು ಯಾವುದೋ ಒಂದು ಕಲ್ಪನಾ ಲೋಕಕ್ಕೆ ಕೊಂಡೊಯ್ಯಬಲ್ಲ. ಅಂತಹ ಕಲಾಗಾರನಿಗೆ ನಾಲ್ಕೆಂಟು ಜನರ ಪ್ರೋತ್ಸಾಹದ ಮಾತೇ ಸ್ವರ್ಗೀಯ ಸುಖ. ಇದನ್ನು ಜನರು ಅರ್ಥಮಾಡಿಕೊಳ್ಳದೆ ಸಿಕ್ಕಾಬಟ್ಟೆಯಾಗಿ ತಾಯ್ನುಡಿಯಲ್ಲಿ ಬರೆದಂತೆ ಬರೆಯಬಾರದು. ಹಾಗಾದರೆ ತಪ್ಪನ್ನು ಎತ್ತಿ ಬರೆಯಬಾರದೇ ಎಂದು ಕೇಳಬಹುದು. ಈ ವಿಷಯ ಅಷ್ಟು ಸುಲಭವಲ್ಲ. ನನ್ನ ಬಾಲ್ಯದಿಂದ ಇತ್ತೀಚಿನವರೆಗೆ ವನವಾಸದ ರಾಮಲಕ್ಷ್ಮಣರು ರಾಜ ಮಹಾರಾಜರಂತೆ ಕಿರೀಟವಿಟ್ಟು ಬರುತ್ತಿದ್ದರು.

ಜಮದಗ್ನಿ ಪುತ್ರ ಪರಶುರಾಮ ಶುದ್ಧ ಬ್ರಾಹ್ಮಣನಾಗಿದ್ದು ಕಾರ್ತವೀರ್ಯನಂತೆ ಕಿರೀಟವಿಟ್ಟುಕೊಂಡು ಬರುತ್ತಿದ್ದ. ಏಕೆ ನಾನೇ ಆ ರೂಪದಲ್ಲಿ ಮಾಡಿದ್ದೇನೆ. ಈ ಸಂಪ್ರದಾಯ ಶರಣರು ಇದನ್ನು ಮೆಚ್ಚುತ್ತಾರೆಯೇ ಇಲ್ಲ. ಇಲ್ಲಿಗಾಗುವಾಗ 'ಅರ್ಧ ಜರಯತೀ ನ್ಯಾಯ' ಇವರದಾಗಿದೆ. ಮೊದಲು ಈ ರಂಗದಲ್ಲಿ ನಡೆಯುತ್ತಿದ್ದ ಹೊಲಸು ಮಾತುಗಳನ್ನು ಇಲ್ಲಿ ಬರೆಯಲು ನನಗೆ ನಾಚಿಕೆಯಾಗುತ್ತದೆ. ಆಗ ನನಗೆ ಈ ವ್ಯವಸಾಯವೇ ಬೇಡವೆಂಬ ವೈರಾಗ್ಯವೂ ಬಂದಿತ್ತು. ಇಲ್ಲಿ ಕಲಾಗಾರನಿಗೆ ಯಾವ ಸ್ವಾತಂತ್ರವೂ ಇಲ್ಲ. ಆಟ ಆಡಿಸುವವ ಕುಣಿ ಎಂದರೆ ಕುಣಿಯಬೇಕು. ರಂಗಕ್ಕೆ ಬಾ ಅಂದರೆ ಬರಬೇಕು. ಹೋಗೆಂದರೆ ಹೊರಡಬೇಕು. ಈ ಪುಣ್ಯಾತ್ಮರು ನಿಜವಾದ ಕಲೆಯೆಂದು ಹೆಸರಿಡುವುದು ಅದಕ್ಕಾದರೆ ನನ್ನ ವಾದವಿಲ್ಲ. ವೇಷಭೂಷಣಗಳಲ್ಲಿಯೂ ಅಷ್ಟೇ. ನಿರಕ್ಷರಕುಕ್ಷಿಗಳ ಕಾಲದಲ್ಲಿ ಬರೇ ಚಿತ್ರವನ್ನು ಕಂಡು ರಾಮ ರಾವಣ ಎಂದುದನ್ನು

ಗುರುತಿಸಿಕೊಳ್ಳಲೆಂದು ಒಂದು ರೂಪವನ್ನು ಒಬ್ಬನು ಕೊಟ್ಟಿರಬಹುದು. ಅದನ್ನೇ ಆಧಾರವಾಗಿಟ್ಟುಕೊಂಡು ತಾಯ್ನುಡಿಯ ಲೇಖನದಲ್ಲಿ ನಮಗೆ ಮುಖದಲ್ಲಿ ರೋಮ ವಿರುವ ರಾವಣನೇ ಬೇಕು. ಮಾತು ಬಾರದಿದ್ದರೂ ಚಿಂತಿಲ್ಲ ಎಂದಿದ್ದಾರೆ ಆ ಪುಣ್ಯಾತ್ಮರು. ಆ ರಾವಣನನ್ನು ತಮ್ಮ ಅಂತರಂಗದ ಕೋಣೆಯಲ್ಲೇ ಕಾಣಬೇಕಾದೀತು. ಈಗ ಮಾತು ಬಾರದಿದ್ದವನೇಕೆ ನ.ಣ.ಲ.ಳ. ಈ ಅಕ್ಷರಗಳಲ್ಲಿ ವ್ಯತ್ಯಾಸವಾದರೆ ಗೇಲಿ ಮಾಡುವ ಕಾಲ ಎಂಬುದನ್ನು ಅವರು ಮರೆತಿರಬೇಕು. ಈ ವೇಷವನ್ನು ಕಂಡು ಗೇಲಿ ಮಾಡುವವರ ಕಿರುಕುಳವನ್ನು ಬಯಲಾಟದಲ್ಲಿ ಅನುಭವಿಸಿದ ಹೃದಯ ನನ್ನದು. ಹಾಗೆಂದು ಅದನ್ನೇ ಸರಿಯೆಂದೂ ಈಗಿನ ಕ್ರಮ ತಪ್ಪೆಂದೂ ಅಥವಾ ಇದು ಸರಿ. ಮೊದಲಿನ ಕ್ರಮ ತಪ್ಪೆಂದೂ ನಾನು ಹೇಳುವಂತಿಲ್ಲ. ಕಾಲಾನುಕ್ರಮವಾಗಿ ಬದಲಾವಣೆಯಾಗುತ್ತಾ ಹೋಗುವುದು ಸೂಕ್ತ ಎಂದು ನನ್ನ ಅಭಿಪ್ರಾಯ ಈ ವಿಷಯದಲ್ಲಿ ಕಲಾಗಾರನು ಯಾವಾಗಲೂ ಪರಾಶ್ರಯ ಜೀವಿಯಾಗುತ್ತಾ ಸ್ವಾತಂತ್ರವಿಲ್ಲದೆ ನರಳುವುದನ್ನು ನೋಡಿ ಮರುಕಗೊಂಡ ಶ್ರೀ ಕಲ್ಲಾಡಿ ಕೊರಗ ಶೆಟ್ಟ್ರು ಕಲಾಗಾರನಿಗೂ ಸ್ವಾತಂತ್ರ ಜೀವನವನ್ನು ಸಾಗಿಸಬೇಕಾದರೆ ಇದಕ್ಕೊಂದು ಹೊಸ ರೂಪ ಕೊಟ್ಟು ಯಕ್ಷಗಾನ ಬಯಲಾಟ ವೆಂದಿದ್ದದ್ದನ್ನು ಯಕ್ಷಗಾನ ನಾಟಕ ಎಂದು ಹೆಸರು ಕೊಟ್ಟು ಡೇರೆಯೊಳಗೆ ಟಿಕೇಟು ಇಟ್ಟು ಆಡತೊಡಗಿದ ಮೇಲೆ ನಮಗೆಲ್ಲಾ ಮನುಷ್ಯರಾಗಿ ಬದುಕಲು ಸಾಧ್ಯವಾಗಿದೆ. ಕೆ. ಕೊರಗ ಶೆಟ್ಟ್ರು ಅವರ ಚಿರಂಜೀವಿ ಕೆ. ವಿಠ್ಠಲ ಶೆಟ್ಟ್ರು ಮೊದಲಾಗಿ ಈ ದಾರಿಯಲ್ಲಿ ಹೊರಟಿದ್ದನ್ನು ನೋಡಿದ ಇತರ ಸಂಸ್ಥೆಗಳಲ್ಲಿ ಕೆಲವರು ಈ ರೂಪದಲ್ಲಿ ದುಡಿಯುತ್ತಾ ಬರುತ್ತಾರೆ. ಪ್ರಯೋಜನವನ್ನೂ ಪಡೆದಿದ್ದಾರೆ. ಈ ಎಡೆಯಲ್ಲಿ ಕೆಲವು ಕಡೆ ಮಾತು ಬಲ್ಲ ವಾಗ್ಮಿಗಳನ್ನು ರಂಗಕ್ಕೆ ತಂದು ಅವರ ವಿದ್ವತ್ಪೂರ್ಣವಾದ ಮಾತಿನ ಮೂಲಕ ಜನರನ್ನು ಮಂತ್ರಮುಗ್ಧರನ್ನಾಗಿ ಮಾಡಿದ್ದಾರೆ. ಅವರು ಸಂದರ್ಭೋಚಿತರಾಗಿ ಸಾಹಿತ್ಯ ಪೂರ್ಣವಾದ ಮಾತನ್ನಾಡಿದರೆ ತಾಯ್ನುಡಿಯ ಲೇಖನದಲ್ಲಿ ಋತುಪರ್ಣನಲ್ಲಿ ಲೈಬ್ರೆರಿಗಳೆಷ್ಟಿದ್ದವು. ಮುದ್ರಣಾಲಯವೆಷ್ಟಿತ್ತು. ಅವನಿಗೆ ಓದಿದ ನೆನಪು ಅಲ್ಲಿ ಏಕೆ ಬಂತು ಎಂದು ಟೀಕಿಸುವವರಿಗೆ ಏನೆನ್ನಬೇಕೋ ವಾಚಕರೇ ಊಹಿಸಿಕೊಳ್ಳಲಿ.

ನೃತ್ಯವಿಲ್ಲದ ಮಾತುಗಾರಿಕೆಯಿಂದ ಕಲೆಯು ಪೂರ್ಣತ್ವ ಪಡೆಯಲಾರದು. ಇದನ್ನು ನಾನೂ ಒಪ್ಪುತ್ತೇನೆ. ಆದರೆ ಕೆಲವರು ನಾಳೆ ಮಾತೇ ಇಲ್ಲದೆ, ಕೇವಲ ಅಭಿನಯ ಮುದ್ರೆಗಳಿಂದಲೇ ಜನಾದರಣೆಯನ್ನು ಹೊಂದಲೆತ್ನಿಸುವ ಶ್ರೀ ಶಿವರಾಮ ಕಾರಂತರ ಪ್ರಯತ್ನಕ್ಕೆ ಯಶಸ್ಸನ್ನು ಕೋರುವರೇ. ಕೆಲವರು ಅದು ನಿಜವಾದ ಕಲೆ ಎಂಬ ಮುದ್ರೆಯನ್ನೂ ಒತ್ತಿದ್ದಾರೆ. ಇದಕ್ಕೇನೆನ್ನಬೇಕು. ದೊಡ್ಡವರ ಮಾತಿಗೆ ತಲೆಯಲ್ಲಾಡಿಸುವವರೇ ಹೆಚ್ಚೆಂದು ತಿಳಿಯಲೇ ನಾನು.

ಜನರ ಮೂಢ ಕಲ್ಪನೆಗೆ ಹೀಗೆ ಬರೆದೆನೇ ವಿನ: ಕಾರಂತರನ್ನು ಟೀಕಿಸುವ ಯೋಗ್ಯತೆ ನನ್ನದಲ್ಲ. ಅವರ ಸಾಹಸ ಸ್ತುತ್ಯ. ಅವರ ಪ್ರಯತ್ನದಿಂದ ಬಡಗುತಿಟ್ಟಿನಲ್ಲಿ ಕೆಲಸ ಮಾಡುವ ಕೆಲವರಿಗಾದರೂ ಸರಕಾರದಿಂದ ವೇತನ ಸಿಕ್ಕುವಂತಾಗಿದೆ. ಬಡಗು

ತೆಂಕು ಎಂದಿದ್ದರೂ ಯಕ್ಷಗಾನವೆಂದ ಮೇಲೆ ಅದರಲ್ಲಿ ವ್ಯವಸಾಯ ಮಾಡುವವರೆಲ್ಲರೂ ನನ್ನ ಸಹೋದರರೇ ಇದ್ದಾರೆ. ಅವರಿಗಾದರೂ ಕಾರಂತರಿಂದ ಪ್ರಯೋಜನ ಸಿಕ್ಕಿದ್ದರಿಂದ ಕಾರಂತರಿಗೆ ನನ್ನ ಹೃತ್ಪೂರ್ವಕ ವಂದನೆಗಳು. ಆದರೆ ಅವರಂಥ ಸಾಹಿತಿಗಳಿಗೆ ದೇಶದಾದ್ಯಂತ ಸಾಹಿತ್ಯದಲ್ಲಿ, ವಿಜ್ಞಾನ ಮೊದಲಾದವುಗಳಲ್ಲಿ ಜಯಭೇರಿ ಮೊಳಗಿಸಿದವರಿಗೆ ಕನ್ನಡ ನಾಡಿನ ಯಕ್ಷಗಾನದ ತೆಂಕು ಬಡಗು ಎಂಬ ವ್ಯತ್ಯಾಸವನ್ನಳಿಸಿ ಇದರಲ್ಲಿರುವ ಕುಂದು ಕೊರತೆಗಳನ್ನು ತಿದ್ದಿ ಒಕ್ಕೂಟದಲ್ಲಿ ನಿಲ್ಲಿಸಬಹುದಿತ್ತು. ಅವರು ಮಾತ್ರ ಒಂದೇ ಪಂಗಡವನ್ನು ಎತ್ತಿ ಕಟ್ಟಿದರೇಕೆ ಎಂದು ವಿಚಾರಿಸುವಾಗ ನಮ್ಮ ತೆಂಕು ತಿಟ್ಟಿನವರ ದುರ್ದೈವವೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಯಕ್ಷಗಾನ ಕಲೆಯೆಂದರೆ ಮಾತು, ನೃತ್ಯ, ವೇಷ ಭೂಷಣ, ಭಾವಭಂಗಿ ಮೊದಲಾದ ಪೂರ್ಣಾಂಗದಿಂದ ಶೋಭಿಸುತ್ತಿರಬೇಕು. ಇದರಲ್ಲಿ ಒಂದಕ್ಕೆ ಕೊರತೆಯುಂಟಾದಾಗ ಕಲೆಯ ಕೊಲೆಯಾಗಬಹುದು. ಬಿಡೋಣ, 'ಮಧುಪುರ' ಎಂಬ ಗ್ರಂಥದಲ್ಲಿ ಮೈಸೂರು ಸೋದರರಿಂದ ಬಂದ ವಿಮರ್ಶೆ ನ್ಯಾಯ ವಾದದ್ದು. ಅದರಲ್ಲಿ ಶ್ರೀದೇಶಮಂಗಲ ಕಾರಂತರ ಲೇಖನ ಓದಿ ತುಂಬಾ ಬೇಸರವಾಯಿತು. ನಾನು ಕೇಳಿದಂತೆ ಆ ಪುಣ್ಯಾತ್ಮರು ಇದೇ ಯಕ್ಷಗಾನದ ಇನ್ನೊಂದು ರೂಪವಾದ ತಾಳ ಮದ್ದಳೆಯಲ್ಲಿ ಅರ್ಥ ಹೇಳುವ ಅಭ್ಯಾಸವಿದ್ದರೆಂದು ಕಾಣುತ್ತದೆ. ಅವರು ಕೋಟಿ ಚೆನ್ನಯ, ದೇವು ಪೂಂಜ ಮೊದಲಾದ ಪ್ರೇತ ಕಥೆಯೆಂದು ಸ್ಪಷ್ಟ ತಿಳಿಸಿದ್ದಾರೆ. ನಾಚಿಕೆ...! ಈಗಿನ ಸ್ವಾತಂತ್ರ ಕಾಲದಲ್ಲಿ ನಮ್ಮ ನಾಡಿನಲ್ಲಿ ಹುಟ್ಟಿದ ವೀರರನ್ನು ಪ್ರೇತಗಳು ಎಂದು ಜಾತೀಯತೆಯ ಮತ್ಸರದಿಂದ ಕರೆದರೋ, ಅಥವಾ ಸಂಕುಚಿತ ಬುದ್ಧಿಯ ಗುಣವೋ ಗೊತ್ತಿಲ್ಲ. ಶ್ರೀಕಾರಂತರು ಮೈಸೂರು ಪ್ರಾಂತದಿಂದ ನಮ್ಮೂರಿಗೆ ಬಂದ ನಾಟಕ ನೋಡಿರಲಾರರು. ಇದ್ದರೆ ಅವರು ಅಭಿನಯಿಸುವ, ಟಿಪ್ಪು ಸುಲ್ತಾನ, ಬಸವೇಶ್ವರ, ಎಚ್ಚಮ್ಮ ನಾಯಕ, ಕಿತ್ತೂರು ಚೆನ್ನಮ್ಮ ಮೊದಲಾದವುಗಳಿಗೆ ಭೂತಗಳ ಕಥೆಯೆಂದು ಹೆಸರು ಕೊಡುತ್ತಿದ್ದರು. ಆಗ ನಮ್ಮೂರವರ ಮೆದುಳು ಬಹಳ ಚುರುಕೆಂಬ ಬಿರುದು ಮೈಸೂರು ಪ್ರಾಂತದಿಂದ ಬಂದೇ ಬರುತ್ತಿತ್ತು. ಕೋಟಿ ಚೆನ್ನಯ ಎಂಬ ಕಥೆಯನ್ನು ಪಂಜೆ ಮಂಗೇಶರಾಯರು ಪಡುಮಲೆ, ಪಂಜ, ಎಣ್ಮೂರು ಮೊದಲಾದ ಕಡೆ ಸುತ್ತಿ ಕೆಲವರಿಂದ ಕೇಳಿ ತಿಳಿದು ಪ್ರಚಾರಕ್ಕೆ ತಂದರು. ಅದನ್ನು ಉಡುಪಿ ಪ್ರಾಂತದವರು ಪ್ರಸಂಗ ಬರೆದು ಅಭಿನಯಿಸಲು ಅನುಕೂಲ ಮಾಡಿದರು. ದೇವುಪೂಂಜ ಕಥೆಯೂ ಹಳ್ಳಿಯಲ್ಲಿ ಪಾಡ್ದನದ ರೂಪದಲ್ಲಿತ್ತು. ಅದನ್ನು ಅಮುಣಿಂಜೆ ಗುತ್ತು ಶೀನಪ್ಪ ಹೆಗ್ಗಡೆಯವರು ಕೆಲವು ಶಾಸನಗಳ ಆಧಾರದಿಂದ ಕಥೆ ಸಂಗ್ರಹಿಸಿದರು. ಆ ಕಥೆಯ ಆಧಾರದ ಮೇಲೆ ಶ್ರೀ ವಿಠಲ ಶೆಟ್ರ ಸಲಹೆಯಂತೆ, ಅಜಿಲ ಸುಬ್ಬಯ್ಯ ಶೆಟ್ಟರು, ಪ್ರಸಂಗ ಬರೆದು ರಂಗದಲ್ಲಿ ಅಭಿನಯಿಸಲು ಅನುಕೂಲ ಮಾಡಿದರು. ಇದೇರೀತಿಯಲ್ಲಿ ದಿ. ಕೆ.ಪಿ. ವೆಂಕಪ್ಪ ಶೆಟ್ಟರು ಬರೆದ ರಾಣಾ ರಾಜಾಸಿಂಹ, ಕಿರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರು ಬರೆದ ಗೃಹಕಲಹ ಮೊದಲಾದವುಗಳಿಗೆ ಯಾವ ಹೆಸರು ಕೊಡುತ್ತಾರೋ ಗೊತ್ತಾಗುವುದಿಲ್ಲ. ನಮ್ಮ ಮಕ್ಕಳಿಗೆ ರಾಮಾಯಣ, ಮಹಾಭಾರತ, ಭಾಗವತ, ಚರಿತ್ರೆ

ಮೊದಲಾದ ಪಾಠ ಶಾಲೆಯಲ್ಲಾದರೂ ಕಲಿಸುತ್ತಾರೆ. ತುಳುನಾಡಿನ ಚರಿತ್ರೆ ಮಾತ್ರ ಗೊತ್ತಿರುವುದು ಕಡಿಮೆ. ಮಕ್ಕಳಲ್ಲಿ ಹಿಮಾಲಯದ ಎತ್ತರವೆಷ್ಟು ಎಂದು ಕೇಳಿದರೆ ಗೊತ್ತಿರುತ್ತದೆ. ನಮಗೆ ಗೋಡೆಯ ಎತ್ತರವೆಷ್ಟೆಂದು ಕೇಳಿದರೆ ಗೊತ್ತಿರುವುದಿಲ್ಲ. ಹೀಗೆಯೇ ಪುರಾಣದ ಕಥೆ ತಿಳಿದ ಮನಗೆ ನಮ್ಮ ನಾಡಿನ ವೀರ ಪುರುಷರ ಜೀವನ ತಿಳಿದಿರಲೆಂದು ಬರೆದಾಗ ಅದಕ್ಕೆ ಈ ಹೆಸರೇ ಆದ್ದರಿಂದ ಇನ್ನು ಮುಂದಕ್ಕಾದರೂ ಕಾರಂತರು ಇದನ್ನು ತಿದ್ದಿ ಕೊಳ್ಳುವುದು ಉತ್ತಮ.

ಒಟ್ಟಿನ ಮೇಲೆ ಈ ವಿಮರ್ಶಕರಿಗೆ ಯಕ್ಷಗಾನ ಕಲಾಮಾತೆಯ ಸೇವೆ ಮಾಡುವ ಆಲೋಚನೆ ಇದ್ದರೆ ಈ ಲೇಖನಗಳಿಂದ ಕಲಾಗಾರನಿಗೆ ನಿರುತ್ಸಾಹ ಬರಬಹುದು. ಹೊರತಾಗಿ ಸೇರುವವನಿಗೆ ದಿಗಿಲಾಗಬಹುದು. ಆದ್ದರಿಂದ ಎಲ್ಲರೂ ಒಟ್ಟಾಗಿ ಸೇರಿ ಸಂಘ ಸಂಸ್ಥೆಗಳನ್ನು ತೆರೆದು ಕಾರಂತರೆಸಗಿದಂತೆ ಸರಕಾರದಿಂದ ಸಾಕಷ್ಟು ಸಹಕಾರ ಸಿಗುವಂತೆ ಮಾಡಿದರೆ ಕಲಾರಾಧನೆಯೂ ಕಲಾ ಮಾತೆಯ ಸೇವೆಯೂ ಆಗಿ ಕಲಾಗಾರನಿಗೆ ಪ್ರಯೋಜನ ಬರಬಹುದು. ಆದ್ದರಿಂದ ಪ್ರತಿಯೊಬ್ಬ ಯಕ್ಷಗಾನ ಅಭಿಮಾನಿ ಮುಂದೆ ಬಂದು ಈ ಕಲೆಯನ್ನು ಉಳಿಸುವ ಪ್ರಯತ್ನ ಮಾಡುವರೆಂದು ನಂಬುತ್ತೇನೆ.

* * *

... ಕಿರಿಯ ಕಲಾವಿದರಿಗೆಲ್ಲ ಅವರು ಅಜ್ಜ. ಅವರ ಜತೆ ನಾನು ಇದ್ದೆ ಎಂಬುದು ಧನ್ಯತೆ.

**ಮುಂಡಾಜೆ ಬಾಲಕೃಷ್ಣ ಶೆಟ್ಟಿ**

ಯಕ್ಷಗಾನದ ಅವಧೂತ... ಮಾರ್ಗದರ್ಶಿ... ದಾಖಲೆ ನಿರ್ಮಿಸಿದ ಕಲಾವಿದ... ಅಚ್ಚುಕಟ್ಟುತನ, ಪ್ರೌಢಿಮೆಗಳಿಂದ ಜನ ಮನ ಗೆದ್ದವರು, ಆದರ್ಶ ಪ್ರಾಯರು,

**ಮುಂಡಾಜೆ ಸದಾಶಿವ ಶೆಟ್ಟಿ**

.... ನನಗವರು ಭಾವಿಸಿದ ಗುರು. ಒಡನಾಟಗಳಿಗೆಲ್ಲ ಅವರು ಸ್ಫೂರ್ತಿ. ಸದಾ ಗಂಭೀರ... ಜತೆಗಾರರಿಗೆ ಬೆಳವಣಿಗೆಗೆ ಅವರು ಸ್ಫೂರ್ತಿ. ಎತ್ತರ ಸಿದ್ಧಿ ಹೊಂದಿದ್ದ ಕಲಾವಿದ.


**ವೆಂಕಟರಾಮ ಭಟ್ಟ, ಸುಳ್ಯ**

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು

## ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಬೆಂಗಳೂರು

ಸಂಯುಕ್ತ ಆಶ್ರಯದಲ್ಲಿ



# ತೆಂಕುತಿಟ್ಟು ಯಕ್ಷಗಾನದ ಅಗ್ರಮಾನ್ಯ ಕಲಾವಿದ ಅಳಿಕೆ ರಾಮಯ್ಯ ರೈಯವರ ಜನ್ಮಶತಮಾನೋತ್ಸವ ಆಚರಣೆ

ದಿನಾಂಕ : 22-8-2017, ಮಂಗಳವಾರ

ಸ್ಥಳ : ಮಹತೋಭಾರ ಶ್ರೀ ಮಂಗಳಾದೇವಿ ದೇವಸ್ಥಾನದ ರಂಗಮಂಟಪ, ಮಂಗಳೂರು

ಆತ್ಮೀಯ ಸ್ವಾಗತ ಬಯಸುವ

**ನಾಡೋಜ ಬೆಳಗಲ್ಲು ವೀರಣ್ಣ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

**ಎಸ್. ಹೆಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

**ಪಿ. ಕಿಶನ್ ಹೆಗ್ಡೆ**
ಸದಸ್ಯ ಸಂಚಾಲಕರು
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ

**ಚಂದ್ರಹಾಸ ರೈ ಬಿ.**
ಸಹಾಯಕ ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ದ. ಕ. ಜಿಲ್ಲೆ.

**ಹಾಗೂ ಸರ್ವ ಸದಸ್ಯರು**
ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

ಕರ್ನಾಟಕ ಸರ್ಕಾರ

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು
## ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ ಬೆಂಗಳೂರು

ಸಂಯುಕ್ತ ಆಶ್ರಯದಲ್ಲಿ

# ತೆಂಕುತಿಟ್ಟು ಯಕ್ಷಗಾನದ ಅಗ್ರಮಾನ್ಯ ಕಲಾವಿದ ಅಳಿಕೆ ರಾಮಯ್ಯ ರೈಯವರ ಜನ್ಮಶತಮಾನೋತ್ಸವ ಆಚರಣೆ

ದಿನಾಂಕ : 22-8-2017, ಮಂಗಳವಾರ

ಸ್ಥಳ : ಮಹತೋಭಾರ ಶ್ರೀ ಮಂಗಳಾದೇವಿ ದೇವಸ್ಥಾನದ ರಂಗಮಂಟಪ, ಮಂಗಳೂರು

**ಸಂಜೆ ಘಂಟೆ 5.00ಕ್ಕೆ : ಸಭಾ ಕಾರ್ಯಕ್ರಮ**

ಅಧ್ಯಕ್ಷತೆ : **ನಾಡೋಜ ಬೆಳಗಲ್ಲು ಶ್ರೀ ವೀರಣ್ಣ**
ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

ಮುಖ್ಯಅತಿಥಿಗಳು : **ಶ್ರೀ ಕೆ. ದೇವಿಪ್ರಸಾದ್ ಶೆಟ್ಟಿ**
ಕಟೀಲು ಶ್ರೀ ದುರ್ಗಾಪರಮೇಶ್ವರೀ ದಶಾವತಾರ ಮೇಳಗಳ ಸಂಚಾಲಕರು

**ಶ್ರೀ ಪ್ರದೀಪ್‌ಕುಮಾರ್ ಕಲ್ಕೂರ**
ಅಧ್ಯಕ್ಷರು, ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು

**ಶ್ರೀ ಸುರೇಶ್ ಶೆಟ್ಟಿ ಗುರ್ಮೆ**
ಉದ್ಯಮಿಗಳು, ಕಾಪು

**ಡಾ। ರಾಜಶ್ರೀ**
ಸಂಶೋಧನಾಧಿಕಾರಿ, ಡಾ। ದಯಾನಂದ ಪೈ, ಸತೀಶ ಪೈ ಯಕ್ಷಗಾನ ಅಧ್ಯಯನ ಕೇಂದ್ರ, ಮಂಗಳೂರು

ಪ್ರಸ್ತಾವನೆ : **ಶ್ರೀ ಪಿ. ಕಿಶನ್ ಹೆಗ್ಡೆ**
ಸದಸ್ಯರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

ಸಂಸ್ಮರಣ ಭಾಷಣ : **ಡಾ। ಎಂ. ಪ್ರಭಾಕರ ಜೋಷಿ**
ಪಾರ್ತಿಸುಬ್ಬ ಪ್ರಶಸ್ತಿ ಪುರಸ್ಕೃತರು

## 'ಮಹಾನ್ ಕಲಾವಿದ ಅಳಿಕೆ ರಾಮಯ್ಯ ರೈ ಶತಕ ಸ್ಮೃತಿ' ಕೃತಿ ಲೋಕಾರ್ಪಣೆ

ಲೋಕಾರ್ಪಣೆಗೊಳಿಸುವವರು : **ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ**
ಹಿರಿಯ ಸಾಹಿತಿಗಳು ಹಾಗೂ ಜಾನಪದ ವಿದ್ವಾಂಸರು

ಕೃತಿ ಪರಿಚಯ : **ಶ್ರೀ ಭಾಸ್ಕರ ರೈ ಕುಕ್ಕುವಳ್ಳಿ**
ಯಕ್ಷಗಾನ ಸಂಘಟಕರು ಹಾಗೂ ವಿಮರ್ಶಕರು

ಗೌರವ ಉಪಸ್ಥಿತಿ : **ಡಾ। ಕೋಳ್ಯೂರು ರಾಮಚಂದ್ರ ರಾವ್**
ಹಿರಿಯ ಯಕ್ಷಗಾನ ಕಲಾವಿದರು

**ಶ್ರೀ ನಿತ್ಯಾನಂದ ಕಾರಂತ ಪೊಳಲಿ**
ಯಕ್ಷಗಾನ ಕವಿ ಹಾಗೂ ಕಲಾಚಿಂತಕರು

**ಶ್ರೀ ತಾರಾನಾಥ ವರ್ಕಾಡಿ**
ಸದಸ್ಯರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

ಅಳಿಕೆ ರಾಮಯ್ಯ ರೈ ಕುಟುಂಬದ ಪರವಾಗಿ ಅಳಿಕೆ ರಾಮಯ್ಯ ರೈಯವರ
ಪುತ್ರ ಅಳಿಕೆ ಬಾಲಕೃಷ್ಣ ರೈ ಇವರಿಗೆ ಅಕಾಡೆಮಿ ಗೌರವ ಪುರಸ್ಕಾರ

ಅಳಿಕೆ ರಾಮಯ್ಯ ರೈ ಜನ್ಮಶತಮಾನೋತ್ಸವ ಕಲಾ ಗೌರವಾರ್ಪಣೆ
(ಹಿರಿಯ ಯಕ್ಷಗಾನ ಕಲಾವಿದರಿಗೆ)

**ಶ್ರೀ ದಿನೇಶ ಅಮ್ಮಣ್ಣಾಯ**
**ಶ್ರೀ ಜೆಪ್ಪು ದಯಾನಂದ ಶೆಟ್ಟಿ**
**ಶ್ರೀ ಕೊಳ್ತಿಗೆ ನಾರಾಯಣ ಗೌಡ**
**ಶ್ರೀ ಉಬರಡ್ಕ ಉಮೇಶ ಶೆಟ್ಟಿ**
**ಶ್ರೀ ಮುಂಡಾಜೆ ಬಾಲಕೃಷ್ಣ ಶೆಟ್ಟಿ**

ನಿರೂಪಣೆ : **ಶ್ರೀ ಸುಧಾಕರ ರಾವ್ ಪೇಜಾವರ**

## – ಕಲಾ ಕಾರ್ಯಕ್ರಮಗಳು –

ಉದ್ಘಾಟಕರು :

**ಶ್ರೀ ಪಿ. ರಮಾನಾಥ ಹೆಗ್ಡೆ**

ಆಡಳಿತ ಮೊಕ್ತೇಸರರು, ಶ್ರೀ ಮಂಗಳಾದೇವಿ ದೇವಸ್ಥಾನ, ಮಂಗಳೂರು

### ಮಧ್ಯಾಹ್ನ 2.00ರಿಂದ

ಬಡಗುತಿಟ್ಟು . ಕಸೆ ಸ್ತ್ರೀವೇಷ – ಪ್ರಾತ್ಯಕ್ಷಿಕೆ (ಪ್ರಮೀಳಾರ್ಜುನ)

ಪ್ರಮೀಳೆ : ಗೋವಿಂದ ಮೊಗವೀರ ವಂಡಾರು ಅರ್ಜುನ : ಪ್ರಸನ್ನ ಶೆಟ್ಟಿಗಾರ್ ಮಂದಾರ್ತಿ

ಸಂಯೋಜನೆ : ಹಿರಿಯಣ್ಣ ಆಚಾರ್ಯ, ಕಿಗ್ಗ



### ಮಧ್ಯಾಹ್ನ 3.00ರಿಂದ

ಖ್ಯಾತ ಕಲಾವಿದರ ಕೂಡುವಿಕೆಯಲ್ಲಿ

ಯಕ್ಷಗಾನ ತಾಳಮದ್ದಳೆ : 'ಕರ್ಣಾವಸಾನ'



### ಸಂಜೆ 6.00ರಿಂದ

ಸುಪ್ರಸಿದ್ಧ ಹಿರಿಯ ಕಲಾವಿದರಿಂದ

ತೆಂಕುತಿಟ್ಟು ಯಕ್ಷಗಾನ : "ದಮಯಂತಿ ಪುನಃ ಸ್ವಯಂವರ"

ಕಲಾವಿದರು :

**ಭಾಗವತರು** : ರವಿಚಂದ್ರ ಕನ್ನಡಿಕಟ್ಟೆ

**ಮೃದಂಗ** : ವಿನಯ ಆಚಾರ್ಯ ಕಡಬ **ಚಂಡೆ** : ಚೈತನ್ಯಕೃಷ್ಣ ಪದ್ಯಾಣ

ಪಾತ್ರದಾರಿಗಳು :

**ದಮಯಂತಿ** : ಸಂಜಯಕುಮಾರ್ ಗೋಣಿಬೀಡು **ಋತುಪರ್ಣ** : ಉಬರಡ್ಕ ಉಮೇಶ ಶೆಟ್ಟಿ

**ಚೇದಿರಾಣಿ** : ಅಂಬಾಪ್ರಸಾದ ಪಾತಾಳ **ಬಾಹುಕ** : ರೆಂಜಾಳ ರಾಮಕೃಷ್ಣ ರಾವ್

**ಭೀಮಕ** : ಬೆಳ್ಳಾರೆ ಮಂಜುನಾಥ ಭಟ್ **ಸುದೇವ** : ತಾರಾನಾಥ ವರ್ಕಾಡಿ

**ಹಾಸ್ಯ** : ಪೆರೋಡಿ ಸುಬ್ರಹ್ಮಣ್ಯ ಭಟ್

**ಸಂಯೋಜನೆ** : ಉಬರಡ್ಕ ಉಮೇಶ ಶೆಟ್ಟಿ

ಯಕ್ಷಗಾನ ಕ್ಷೇತ್ರದ ಮಹಾನ್ ಕಲಾವಿದರಲ್ಲೊಬ್ಬರು ಶ್ರೀ ಅಳಿಕೆ ರಾಮಯ್ಯ ರೈಗಳವರು. ಅವರ ಕುರಿತಾಗಿ ನಾನು ಬಹಳಷ್ಟು ಪ್ರಖ್ಯಾತಿ ಯನ್ನು ಕೇಳಿದ್ದೇನೆ. ಅವರನ್ನು ಕಾಣುವ ಭಾಗ್ಯವೊದಗದಿದ್ದರೂ, ನನ್ನ ಅಧ್ಯಕ್ಷತೆಯ ಅವಧಿಯಲ್ಲಿ ಅವರ ಶತಮಾನದ ಕಾರ್ಯಕ್ರಮ ಒದಗಿ ಬಂದುದು ಸುಯೋಗವೆಂದು ಭಾವಿಸುತ್ತೇನೆ.

**ನಾಡೋಜ ಬೆಳಗಲ್ಲು ವೀರಣ್ಣ**
(ಅಧ್ಯಕ್ಷರ ಅರಿಕೆಯಲ್ಲಿ)

.. ಕಲೆಯ ಮೇಲಿನ ಅಪ್ರತಿಮ ಪ್ರೀತಿ, ಪ್ರತಿಭೆ ಮತ್ತು ಅನುಭವಗಳಿಂದ ಅಳಿಕೆ ರಾಮಯ್ಯ ರೈ ಅವರು ಯಕ್ಷಗಾನದ ಒಂದು ದಂತಕತೆ.

**ವಸಂತ ಶೆಟ್ಟಿ ಬೆಳ್ಳಾರೆ**
('ದೆಹಲಿ ಮಿತ್ರ' ಪ್ರಕಾಶನ)

ನನ್ನ ಏಳರ ಪ್ರಾಯದಲ್ಲಿ ನಾನು ಕಂಡ ಅಳಿಕೆಯವರ ಹಿರಣ್ಯಕಶಿಪು, ನನ್ನ ಕಣ್ಣಿಂದ ಹನಿನೀರು ತೊಟ್ಟಿಕ್ಕಿಸಿ, ಅವನೊಬ್ಬ ದುಷ್ಟ ರಾಕ್ಷಸ ಎಂಬ ತೀರ್ಮಾನಕ್ಕೆ ಬಾರದಂತೆ ತಡೆದಿತ್ತು. ಅಳಿಕೆಯವರ ಆತ್ಮಕಥನದ ಲಭ್ಯವಾದ ಒಂದು ಭಾಗ, ಅವರ ಕಲಾಮೀಮಾಂಸೆಯ ಅನಿಸಿಕೆಗಳ ಮೂಲಕ, ಅವರ ಬದುಕಿನ ಪ್ರಾಮಾಣಿಕತೆಯ ಕಾರಣದಿಂದ, ಅವರ ಕುರಿತಾದ ಗೌರವ ನೂರ್ಮಡಿಯಾಗುತ್ತದೆ.

**ಡಾ. ನಿತ್ಯಾನಂದ ಬಿ. ಶೆಟ್ಟಿ**
('ಅಳಿಕೆ' ಕೃತಿಯ ಸಂಪಾದಕೀಯದಲ್ಲಿ)